ಬುಧವಾರ, ಮೇ 4, 2022 | ₹ 6.00

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಪ್ರಚಾರ

ಮುಂಬೈನಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ 'ಮಾಡರ್ನ್ ಲವ್ ಮುಂಬೈ' ವೆಬ್ ಸಿರೀಸ್‌ನ ಪ್ರಚಾರ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಬಾಲಿವುಡ್ ನಟಿ ಫಾತಿಮಾ ಸನಾ ಶೇಖ್



ಬ್ರಿಟನ್‌ನಿಂದ ಇನ್ನಷ್ಟು ನೆರವು

ಲಂಡನ್ (ಪಿಟಿಐ): ಬ್ರಿಟನ್ ಪ್ರಧಾನಿ ಬೋರಿಸ್ ಜಾನ್ಸನ್ ಅವರು ಮಂಗಳವಾರ ಉಕ್ರೇನ್ ಸಂಸತ್ ಉದ್ದೇಶಿಸಿ ಮಾತನಾಡಿದ್ದು, ಹೆಚ್ಚುವರಿಯಾಗಿ 30 ಕೋಟಿ ಬ್ರಿಟಿಷ್ ಪೌಂಡ್ ಮೌಲ್ಯದ ಸೇನಾ ನೆರವು ನೀಡುವ ಬದ್ಧತೆಯನ್ನು ಪ್ರದರ್ಶಿಸಿದ್ದಾರೆ.

'ರಷ್ಯಾದೊಂದಿನ ಯುದ್ಧದ ಅತ್ಯುತ್ತಮ ಅವಧಿ ಇದು, ಇದನ್ನು ಮುಂದಿನ ತಲೆಮಾರು ಸದಾ ನೆನಪಿನಲ್ಲಿ ಇಟ್ಟಿರುತ್ತದೆ' ಎಂದು ಹೇಳಿದ ಜಾನ್ಸನ್, ಸೇನೆ, ಹಣ, ಮಾನವೀಯ ನೆಲೆಯಲ್ಲಿ ನೆರವು ನೀಡುವುದನ್ನು ಮುಂದುವರಿಸಲಿದೆ ಎಂದರು.

ರಷ್ಯಾ ಸೇನೆ ದುರ್ಬಲ: ಉಕ್ರೇನ್ ವಿರುದ್ಧದ ಯುದ್ಧದಲ್ಲಿ ನಷ್ಟವನ್ನು ಅನುಭವಿಸಿದ ನಂತರ ರಷ್ಯಾದ ಸೇನೆ ಈಗ 'ಗಮನಾರ್ಹವಾಗಿ ದುರ್ಬಲವಾಗಿದೆ'. ಸಾಂಪ್ರದಾಯಿಕ ಸೇನಾ ಬಲವನ್ನು ನಿಯೋಜಿಸುವ ರಷ್ಯಾದ ಸಾಮರ್ಥ್ಯದ ಮೇಲೆ ಇದು ಶಾಶ್ವತವಾದ ಪರಿಣಾಮ ಬೀರುತ್ತದೆ ಎಂದು ಬ್ರಿಟನ್ ರಕ್ಷಣಾ ಸಚಿವಾಲಯ ಮಂಗಳವಾರ ಟ್ವೀಟ್ ಮಾಡಿದೆ.

ಪ್ರಧಾನಿ ಮೋದಿ ಕರೆ • ರಷ್ಯಾದ ಮೇಲೆ ಭಾರತ ಪ್ರಭಾವ ಬೀರಲು ಡೆನ್ಮಾರ್ಕ್ ಪ್ರಧಾನಿ ಸಲಹೆ

'ಉಕ್ರೇನ್‌ನಲ್ಲಿ ಕದನವಿರಾಮ ಘೋಷಿಸಿ'

ಕೋಪನ್‌ಹೇಗನ್ (ಪಿಟಿಐ): 'ಉಕ್ರೇನ್‌ನಲ್ಲಿ ತಕ್ಷಣವೇ ಕದನವಿರಾಮ ಘೋಷಿಸಬೇಕು. ಈ ಬಿಕ್ಕಟ್ಟು ಬಗೆಹರಿಸಲು ಉಕ್ರೇನ್ ಮತ್ತು ರಷ್ಯಾ ರಾಜತಾಂತ್ರಿಕ ಮಾತುಕತೆಯ ಹಾದಿಗೆ ಮರಳಬೇಕು' ಎಂದು ಭಾರತದ ಪ್ರಧಾನಿ ನರೇಂದ್ರ ಮೋದಿ ಕರೆ ನೀಡಿದರು.

ಡೆನ್ಮಾರ್ಕ್ ಪ್ರಧಾನಿ ಮೆಟ್ಟೆ ಫ್ರೆಡೆರಿಕ್ಸನ್ ಅವರೊಂದಿಗೆ ಮಂಗಳವಾರ ದ್ವಿಪಕ್ಷೀಯ ಮಾತುಕತೆ ನಡೆಸಿದ ಬಳಿಕ ಅವರು ಪತ್ರಕರ್ತರನ್ನು ಉದ್ದೇಶಿಸಿ ಮಾತನಾಡಿದರು.

ಮೆಟ್ಟೆ ಫ್ರೆಡೆರಿಕ್ಸನ್ ಜತೆ ಉಕ್ರೇನ್ ಬಿಕ್ಕಟ್ಟಿನ ವಿಚಾರವಾಗಿಯೂ ಮಾತುಕತೆ ನಡೆಸಿದ್ದೇನೆ ಎಂದ ಮೋದಿ, ಉಕ್ರೇನ್‌ನಲ್ಲಿ ತಕ್ಷಣವೇ ಕದನವಿರಾಮ ಘೋಷಣೆಯಾಗಬೇಕು ಎಂದರು.

'ಉಕ್ರೇನ್ ವಿಚಾರದಲ್ಲಿ ಭಾರತವು ರಷ್ಯಾ ಮೇಲೆ ತನ್ನ ಪ್ರಭಾವ ಬೀರಲಿದೆ ಎಂದು ಭಾವಿಸುತ್ತೇನೆ. ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಅವರು ಯುದ್ಧ ಹತ್ಯೆಯನ್ನು ನಿಲ್ಲಿಸಬೇಕು' ಎಂದು ಮೆಟ್ಟೆ ಫ್ರೆಡೆರಿಕ್ಸನ್ ಹೇಳಿದರು.

'ನನ್ನ ಸಂದೇಶ ಸ್ಪಷ್ಟವಾಗಿದೆ. ಪುಟಿನ್ ಅವರು ಯುದ್ಧ ಮತ್ತು ಹತ್ಯೆಯನ್ನು ನಿಲ್ಲಿಸಬೇಕು. ಯುದ್ಧವನ್ನು ಕೊನೆಗೊಳಿಸಲು ರಷ್ಯಾ ಮೇಲೆ ಭಾರತವು ತನ್ನ ಪ್ರಭಾವ ಬೀರಬಹುದು ಎಂದು ಭಾವಿಸಿದ್ದೇನೆ' ಎಂದು ಅವರು ಹೇಳಿದರು.

'ರಷ್ಯಾ- ಉಕ್ರೇನ್ ಸಂಘರ್ಷದಲ್ಲಿ ಯಾರೂ ಗೆಲ್ಲುವುದಿಲ್ಲ. ಎಲ್ಲರೂ ನಷ್ಟ ಅನುಭವಿಸುತ್ತಾರೆ ಎಂಬುದಾಗಿ ಭಾರತ ಭಾವಿಸುತ್ತದೆ' ಎಂದು ಜರ್ಮನಿಯಲ್ಲಿ ಸೋಮವಾರ ಮೋದಿ ಹೇಳಿದ್ದರು.

ಜರ್ಮನಿಯ ಚಾನ್ಸಲರ್ ಓಲಾಫ್ ಸ್ಕೋಲ್ಜ್ ಜತೆ ಜಂಟಿ ಪತ್ರಿಕಾ ಹೇಳಿಕೆ ನೀಡಿದ್ದ ಮೋದಿ, ಯುದ್ಧವನ್ನು ಸ್ಥಗಿತಗೊಳಿಸುವಂತೆ ಉಕ್ರೇನ್ ಬಿಕ್ಕಟ್ಟಿನ ಆರಂಭದಲ್ಲೇ ಭಾರತ ಹೇಳಿತ್ತು. ವಿವಾದ ಪರಿಹಾರಕ್ಕೆ ಮಾತುಕತೆಯೊಂದೇ ಪರಿಹಾರ ಎಂದು ಹೇಳಿತ್ತು ಎಂಬುದಾಗಿ ನೆನಪಿಸಿಕೊಂಡಿದ್ದರು.



ಡೆನ್ಮಾರ್ಕ್‌ನ ರಾಜಧಾನಿ ಕೋಪನ್‌ಹೇಗನ್‌ನಲ್ಲಿ ಡೆನ್ಮಾರ್ಕ್ ಪ್ರಧಾನಿ ಮೆಟ್ಟೆ ಫ್ರೆಡೆರಿಕ್ಸನ್ ಅವರು ಭಾರತದ ಪ್ರಧಾನಿ ನರೇಂದ್ರ ಮೋದಿ ಅವರೊಂದಿಗೆ ಮಾತುಕತೆಯಲ್ಲಿ ತೊಡಗಿರುವುದು –ಎಪಿ ಚಿತ್ರ

ಹೂಡಿಕೆ ಮಾಡದವರು ಅವಕಾಶ ಕಳೆದುಕೊಳ್ಳುತ್ತಾರೆ: ಮೋದಿ

ಭಾರತದಲ್ಲಿ ಹೂಡಿಕೆ ಮಾಡದವರು ಖಂಡಿತವಾಗಿಯೂ ಉತ್ತಮ ಅವಕಾಶಗಳನ್ನು ಕಳೆದುಕೊಳ್ಳುತ್ತಾರೆ ಎಂದು ಪ್ರಧಾನಿ ನರೇಂದ್ರ ಮೋದಿ ಅಭಿಪ್ರಾಯಪಟ್ಟರು.

ಸಾಮಾಜಿಕ ಮಾಧ್ಯಮಗಳಲ್ಲಿ ಇತ್ತೀಚಿನ ದಿನಗಳಲ್ಲಿ ಹೆಚ್ಚಾಗಿ ಬಳಕೆಯಲ್ಲಿರುವ 'ಎಫ್‌ಒಎಂಒ' ಅಥವಾ 'ಕಳೆದುಕೊಳ್ಳುವ ಭಯ' ಪದವನ್ನು ಪ್ರಧಾನಿ ಈ ವೇಳೆ ಬಳಸಿದ್ದಾರೆ.

ಭಾರತ– ಡೆನ್ಮಾರ್ಕ್ ವ್ಯಾಪಾರ ವೇದಿಕೆಯನ್ನು ಉದ್ದೇಶಿಸಿ ಮಾತನಾಡಿದ ಅವರು, ದೇಶದಲ್ಲಿ ನಡೆಯುತ್ತಿರುವ ಆರ್ಥಿಕ ಸುಧಾರಣೆಗಳು ಹಸಿರು ತಂತ್ರಜ್ಞಾನ, ಶೀತಲ ಸರಪಳಿಗಳು, ಹಡಗು ಮತ್ತು ಬಂದರುಗಳಂತಹ ವಿವಿಧ ಕ್ಷೇತ್ರಗಳಲ್ಲಿ ಹೂಡಿಕೆಯ ಅವಕಾಶಗಳನ್ನು ಸೃಷ್ಟಿಸಿವೆ ಎಂದರು.

ಸುದ್ದಿ 2 ನಿಮಿಷ

'ಲಿಂಗಾಯತ ಧರ್ಮ; ರಾಜಕೀಯವಾಗಿ ಚರ್ಚೆ ಮಾಡಲ್ಲ'

ಬಾಗಲಕೋಟೆ: 'ಲಿಂಗಾಯತ ಸ್ವತಂತ್ರ ಧರ್ಮದ ವಿಚಾರ, ಅದು ನಮ್ಮ ಅಸ್ಮಿತೆ. ನಾವು ಅದನ್ನ ರಾಜಕೀಯವಾಗಿ ಚರ್ಚೆ ಮಾಡಲು ಹೋಗುವುದಿಲ್ಲ' ಎಂದು ಕೆಪಿಸಿಸಿ ಪ್ರಚಾರ ಸಮಿತಿ ಅಧ್ಯಕ್ಷ ಹಾಗೂ ಶಾಸಕ ಎಂ.ಬಿ.ಪಾಟೀಲ ಹೇಳಿದರು.

ಬಸವ ಜಯಂತಿ ಆಚರಣೆ ಹಿನ್ನೆಲೆಯಲ್ಲಿ ಮಂಗಳವಾರ ಕೂಡಲಸಂಗಮದ ಐಕ್ಯಸ್ಥಳಕ್ಕೆ ಭೇಟಿ ನೀಡಿ, ಸಂಗಮನಾಥನ ದರ್ಶನ ಪಡೆದ ಅವರು, ಸುದ್ದಿಗಾರರ ಪ್ರಶ್ನೆಗೆ ಪ್ರತಿಕ್ರಿಯಿಸಿದರು.

'ಲಿಂಗಾಯತ ಸ್ವತಂತ್ರ ಧರ್ಮದ ವಿಚಾರದಲ್ಲಿ ಕಳೆದ ಬಾರಿ ಚುನಾವಣೆ ನಡೆದಾಗ ಅನೇಕ ಗೊಂದಲಗಳನ್ನು ಸೃಷ್ಟಿ ಮಾಡಿದ್ದರು. ಸದ್ಯ ನಾವು ಯಾವ ಗೊಂದಲಕ್ಕೂ ಬೀಳೋಕೆ ಹೋಗಲ್ಲ. ಆ ಬಗ್ಗೆ ನಾನು ಯಾವುದೇ ಹೇಳಿಕೆ ಕೊಡಲ್ಲ' ಎಂದರು. 'ಚುನಾವಣೆಯ ನಂತರ ಎಲ್ಲರೂ ಕುಳಿತುಕೊಂಡು ಸಮಾಜಕ್ಕೆ ಏನು ಒಳ್ಳೆಯದಾಗುತ್ತೊ ಆ ನಿರ್ಧಾರ ತೆಗೆದುಕೊಳ್ಳಲಿದ್ದೇವೆ. ಚುನಾವಣೆ ನಂತರ ಐದು ವರ್ಷ ಇರುತ್ತದೆ, ಆಗ ಚರ್ಚೆ ಆಗಲಿದೆ' ಎಂದು ಹೇಳಿದರು

ಹೊರಟ್ಟಿ ಬಿಜೆಪಿ ಸೇರ್ಪಡೆಗೆ ಒಪ್ಪಿಗೆ



ಬೆಂಗಳೂರು: ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಅವರನ್ನು ಬಿಜೆಪಿಗೆ ಸೇರಿಸಿಕೊಳ್ಳುವ ಪ್ರಸ್ತಾವಕ್ಕೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಮಂಗಳವಾರ ಒಪ್ಪಿಗೆ ಸೂಚಿಸಿದ್ದಾರೆ.

ನಗರದ ತಾಜ್ ವೆಸ್ಟ್ ಎಂಡ್ ಹೋಟೆಲ್‌ನಲ್ಲಿ ಅಮಿತ್ ಶಾ ಅವರನ್ನು ಭೇಟಿಯಾದ ಹೊರಟ್ಟಿ, ಪಕ್ಷ ಸೇರ್ಪಡೆ ಕುರಿತು ಮಾತುಕತೆ ನಡೆಸಿದರು. ಹೂಗುಚ್ಛ ನೀಡಿ ಸಭಾಪತಿಯವರನ್ನು ಸ್ವಾಗತಿಸಿದ ಕೇಂದ್ರ ಗೃಹ ಸಚಿವರು, ಬಿಜೆಪಿ ಸೇರ್ಪಡೆಯ ಕೋರಿಕೆಯನ್ನು ಒಪ್ಪಿಕೊಂಡಿರುವ ಸಂದೇಶ ನೀಡಿದರು.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಕೇಂದ್ರ ಸಚಿವ ಪ್ರಲ್ಹಾದ ಜೋಶಿ, ಸಚಿವರಾದ ಆರ್. ಅಶೋಕ, ಕೋಟ ಶ್ರೀನಿವಾಸ ಪೂಜಾರಿ, ಶಾಸಕ ಜಗದೀಶ ಶೆಟ್ಟರ್ ಜತೆಗಿದ್ದರು.

ಚರ್ಚೆಯ ಬಳಿಕ ಮಾಧ್ಯಮ ಪ್ರತಿನಿಧಿಗಳ ಜತೆ ಮಾತನಾಡಿದ ಹೊರಟ್ಟಿ, 'ಜೆಡಿಎಸ್ ಪಕ್ಷದ ಬಗ್ಗೆ ನನಗೆ ಒಳ್ಳೆಯ ಭಾವನೆಯೇ ಇದೆ. ಆದರೆ, ಬದಲಾದ ಸನ್ನಿವೇಶದಲ್ಲಿ ಮತದಾರರ ಬಯಕೆಯಂತೆ ಬಿಜೆಪಿ ಸೇರುತ್ತಿದ್ದೇನೆ. ಸಭಾಪತಿ ಹುದ್ದೆಗೆ ಶೀಘ್ರದಲ್ಲಿಯೇ ರಾಜೀನಾಮೆ ನೀಡುತ್ತೇನೆ' ಎಂದರು.

'ಮೇ 11ರಂದು ಹೊರಟ್ಟಿ ಸಭಾಪತಿ ಸ್ಥಾನಕ್ಕೆ ರಾಜೀನಾಮೆ ನೀಡಲಿದ್ದಾರೆ. ಆ ಬಳಿಕ ಜೆಡಿಎಸ್ ತೊರೆದು ಬಿಜೆಪಿ ಸೇರಲಿದ್ದಾರೆ' ಎಂದು ಮೂಲಗಳು ತಿಳಿಸಿವೆ.



ಬಸವಶ್ರೀ ಪ್ರಶಸ್ತಿ

ಚಿತ್ರದುರ್ಗದ ಮುರುಘಾ ಮಠದ 'ಬಸವಶ್ರೀ' ಪ್ರಶಸ್ತಿಯನ್ನು ನಟ ಪುನೀತ್ ರಾಜ್‌ಕುಮಾರ್ ಅವರಿಗೆ ಮರಣೋತ್ತರವಾಗಿ ಮಂಗಳವಾರ ಪ್ರದಾನ ಮಾಡಲಾಯಿತು. ಪುನೀತ್ ಅವರ ಪತ್ನಿ ಅಶ್ವಿನಿ ಪ್ರಶಸ್ತಿ ಸ್ವೀಕರಿಸಿದರು. ಪ್ರಶಸ್ತಿಯು ₹ 5 ಲಕ್ಷ ನಗದು ಹಾಗೂ ಫಲಕ ಒಳಗೊಂಡಿದೆ. ಶಾಸಕ ಜಿ.ಎಚ್. ತಿಪ್ಪಾರೆಡ್ಡಿ, ವಿಧಾನ ಪರಿಷತ್ ಸದಸ್ಯ ಕೆ.ಎಸ್.ನವೀನ್, ಸಚಿವ ಬಿ.ಸಿ.ಪಾಟೀಲ್, ಡಾ.ಶಿವಮೂರ್ತಿ ಮುರುಘಾ ಶರಣರು, ಬಸವಮೂರ್ತಿ ಮಾದಾರ ಚನ್ನಯ್ಯ ಸ್ವಾಮೀಜಿ, ಖನಿಜ ನಿಗಮದ ಅಧ್ಯಕ್ಷ ಎಸ್.ಲಿಂಗಮೂರ್ತಿ, ಜಿಲ್ಲಾಧಿಕಾರಿ ಕವಿತಾ ಎಸ್. ಮನ್ನಿಕೇರಿ, ಮಂಗಳಾ ರಾಘವೇಂದ್ರ ರಾಜ್‌ಕುಮಾರ್ ಇದ್ದಾರೆ.

ಪೂರ್ವ ಉಕ್ರೇನ್ ಭಾಗ ರಷ್ಯಾ ವಶ?

ಝಪೋರಿಝಿಯಾ (ಉಕ್ರೇನ್) (ಎಪಿ): ಈ ತಿಂಗಳ ಅಂತ್ಯದೊಳಗೆ ಪೂರ್ವ ಉಕ್ರೇನ್‌ನ ಹೆಚ್ಚಿನ ಭಾಗಗ ಳನ್ನು ವಶಪಡಿಸಿಕೊಳ್ಳಲು ರಷ್ಯಾ ಯೋಜಿಸುತ್ತಿದೆ ಎಂದು ಅಮೆರಿಕದ ಹಿರಿಯ ಅಧಿಕಾರಿಯೊಬ್ಬರು ದೂರಿದ್ದಾರೆ.

ಉಕ್ರೇನ್‌ನ ದಕ್ಷಿಣ ನಗರವಾದ ಕೆರ್ಸನ್ ಅನ್ನು ಸ್ವತಂತ್ರ ಗಣರಾಜ್ಯವನ್ನಾಗಿ ಗುರುತಿಸಲು ರಷ್ಯಾ ಯೋಜನೆ ರೂಪಿಸಿದೆ ಎಂದು ಯುರೋಪ್‌ನ ಭದ್ರತೆ ಮತ್ತು ಸಹಕಾರ ಸಂಘಟನೆಯ ಅಮೆರಿಕದ ರಾಯಭಾರಿ ಮೈಕೆಲ್ ಕಾರ್ಪೆಂಟರ್ ಸೋಮವಾರ ಹೇಳಿದ್ದಾರೆ.

ಆದರೆ ರಷ್ಯಾದ ಈ ರೀತಿಯ ಕ್ರಮ ಗಳನ್ನು ಅಮೆರಿಕ ಅಥವಾ ಅದರ ಮಿತ್ರ ರಾಷ್ಟ್ರಗಳು ಪರಿಗಣಿಸುವುದಿಲ್ಲ ಎಂದು ಅವರು ತಿಳಿಸಿದ್ದಾರೆ.

ಡೊನೆಟ್‌ಸ್ಕ್ ಮತ್ತು ಲುಹಾನ್‌ಸ್ಕ್ ಗಳನ್ನು ರಷ್ಯಾದೊಂದಿಗೆ ಸೇರಿಸಲು ರಷ್ಯಾ ನಕಲಿ ಜನಾಭಿಪ್ರಾಯ ಸಂಗ್ರ ಹಿಸಲೂ ಯೋಜನೆ ಮಾಡುತ್ತಿದೆ ಎಂದೂ ಕಾರ್ಪೆಂಟರ್ ಉಲ್ಲೇಖಿಸಿದ್ದಾರೆ. ಕೆರ್ಸನ್ ಅನ್ನು ಸ್ವತಂತ್ರ ಗಣ ರಾಜ್ಯವಾಗಿಸಲು ರಷ್ಯಾ ಸರ್ವ ಪ್ರಯತ್ನ ನಡೆಸುತ್ತಿದೆ ಎಂದು ಅವರು ವಿವರಿಸಿದ್ದಾರೆ.

ಈ ನಗರಗಳ ಮೇಯರ್‌ಗಳು ಮತ್ತು ಸ್ಥಳೀಯ ಜನಪ್ರತಿನಿಧಿಗಳನ್ನು ಅಪಹರಿಸಿರುವ ರಷ್ಯಾ, ಆ ಪ್ರದೇಶಗಳಲ್ಲಿ ಇಂಟರ್ನೆಟ್ ಮತ್ತು ಮೊಬೈಲ್ ಸಂಪರ್ಕದ ಸೇವೆಯನ್ನು ಕಡಿತಗೊಳಿಸಿದೆ. ಅಲ್ಲದೆ ಶೀಘ್ರದಲ್ಲಿಯೇ ಅಲ್ಲಿ ರಷ್ಯಾದ ಶಾಲಾ ಪಠ್ಯಕ್ರಮವನ್ನು ಹೇರುವ ಸಾಧ್ಯತೆ ಇದೆ ಎಂದು ಅವರು ಹೇಳಿದ್ದಾರೆ. ರಷ್ಯಾ ತನ್ನ ರೂಬಲ್ ಕರೆನ್ಸಿಯನ್ನು ಈಗಾಗಲೇ ಚಲಾವಣೆಗೆ ತಂದಿದೆ ಎಂದು ಉಕ್ರೇನ್ ಸರ್ಕಾರ ಹೇಳಿದೆ.

ಸ್ಥಳಾಂತರದ ಬಳಿಕ ದಾಳಿ: ಮರಿಯುಪೋಲ್‌ನ ಉಕ್ಕಿನ ಸ್ಥಾವರದಿಂದ ನಾಗರಿಕರನ್ನು ಸ್ಥಳಾಂತರಿಸುವ ಕಾರ್ಯ ಬಹುತೇಕ ಕೊನೆಗೊಂಡಿದ್ದು, ರಷ್ಯಾ ಪಡೆಗಳು ಅಲ್ಲಿ ಹೊಸದಾಗಿ ದಾಳಿ ನಡೆಸಿವೆ.

ಮರಿಯುಪೋಲ್‌ನಲ್ಲಿ ಚಿಕ್ಕ ಮಕ್ಕಳು, ತಾಯಂದಿರು, ವಯಸ್ಸಾದ ಮಹಿಳೆಯರೂ ಸೇರಿದಂತೆ 100ಕ್ಕೂ ಹೆಚ್ಚು ಜನರನ್ನು ಭಾನುವಾರ ಝಪೋರಿಝಿಯಾಕ್ಕೆ ಸ್ಥಳಾಂತರಿಸಲಾಯಿತು. ಝಪೋರಿಝಿಯಾ ಸದ್ಯ ಉಕ್ರೇನ್ ನಿಯಂತ್ರಣದಲ್ಲಿರುವ ಪ್ರಮುಖ ನಗರವಾಗಿದೆ.

ಉಕ್ರೇನ್‌ನ 10 ಲಕ್ಷಕ್ಕೂ ಅಧಿಕ ಜನರು ರಷ್ಯಾಕ್ಕೆ

ಮಾಸ್ಕೊ (ಎಪಿ): ಉಕ್ರೇನ್‌ನಲ್ಲಿ ವಿಶೇಷ ಸೇನಾ ಕಾರ್ಯಾಚರಣೆ ಆರಂಭವಾದ ಬಳಿ ಎರಡು ಲಕ್ಷಕ್ಕೂ ಅಧಿಕ ಮಕ್ಕಳು ಸೇರಿದಂತೆ 10 ಲಕ್ಷಕ್ಕೂ ಅಧಿಕ ಉಕ್ರೇನಿಯನ್ನರನ್ನು ರಷ್ಯಾಕ್ಕೆ ಕರೆತರಲಾಗಿದೆ ಎಂದು ರಷ್ಯಾದ ರಕ್ಷಣಾ ಇಲಾಖೆ ತಿಳಿಸಿದೆ.

ಈದ್ ಉಲ್ ಫಿತ್ರ್ ಆಚರಣೆಗೂ ಮುನ್ನ ರಾಜಸ್ಥಾನದಲ್ಲಿ ಕೋಮು ಸಂಘರ್ಷ

ಜೋಧಪುರ: ಗಲಭೆ, ಕಲ್ಲು ತೂರಾಟ – ಕರ್ಫ್ಯೂ

ಜೋಧಪುರ (ಪಿಟಿಐ): ಈದ್-ಉಲ್-ಫಿತ್ರ್ ಆಚರಣೆಗೂ ಮುನ್ನ, ರಾಜಸ್ಥಾನದ ಜೋಧಪುರದಲ್ಲಿ ಮಂಗಳವಾರ ಕೋಮು ಗಲಭೆ ಸಂಭವಿಸಿದೆ. ನಗರದ 10 ಪೊಲೀಸ್ ಠಾಣೆಗಳ ವ್ಯಾಪ್ತಿಯಲ್ಲಿ ಬುಧವಾರ ಮಧ್ಯರಾತ್ರಿ ವರೆಗೆ ಕರ್ಫ್ಯೂ ಜಾರಿಗೊಳಿಸಲಾಗಿದೆ.

ಗಲಭೆ ಬೆನ್ನಲ್ಲೇ, ನಗರದಲ್ಲಿ ಭಾರಿ ಸಂಖ್ಯೆಯಲ್ಲಿ ಪೊಲೀಸರನ್ನು ನಿಯೋಜನೆ ಮಾಡಲಾಗಿದ್ದು, ಪರಿಸ್ಥಿತಿ ಹತೋಟಿಯಲ್ಲಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ವದಂತಿಗಳು ಹಬ್ಬುವುದನ್ನು ತಡೆಯುವ ಸಲುವಾಗಿ ನಗರದ ಕೆಲ ಭಾಗಗಳಲ್ಲಿ ಇಂಟರ್‌ನೆಟ್ ಸೇವೆಯನ್ನು ಸ್ಥಗಿತಗೊಳಿಸಿ ಜೋಧಪುರ ಡಿಸಿಪಿ ಆದೇಶಿಸಿದ್ದಾರೆ.

ಜೋಧಪುರ, ಮುಖ್ಯಮಂತ್ರಿ ಅಶೋಕ್ ಗೆಹಲೋತ್ ಅವರ ಸ್ವಂತ ಊರು. ಶಾಂತಿ ಕಾಪಾಡುವಂತೆ ಅವರು ಜನರಲ್ಲಿ ಮನವಿ ಮಾಡಿದ್ದಾರೆ.

ಘಟನೆ ವಿವರ: ನಗರದ ಜಾಲೋರಿ ವೃತ್ತದಲ್ಲಿ ಸ್ವಾತಂತ್ರ್ಯ ಹೋರಾಟಗಾರ ಬಾಲಮುಕುಂದ ಬಿಸ್ಸಾ ಅವರ ಪ್ರತಿಮೆ ಇದ್ದು, ಈದ್ ಅಂಗವಾಗಿ ಮುಸ್ಲಿಮರು ಸೋಮವಾರ ರಾತ್ರಿ ಪ್ರತಿಮೆ ಪಕ್ಕ ಈದ್ ಧ್ವಜಗಳನ್ನು ಅಳವಡಿಸಿದ್ದು ಘರ್ಷಣೆ ಹಾಗೂ ಕಲ್ಲು ತೂರಾಟಕ್ಕೆ ಕಾರಣವಾಯಿತು ಎಂದು ಅಧಿಕಾರಿಗಳು ಹೇಳಿದ್ದಾರೆ.

'ಪರಶುರಾಮ ಜಯಂತಿ ಅಂಗವಾಗಿ ಬಿಸ್ಸಾ ಪ್ರತಿಮೆ ಬಳಿ ಕೇಸರಿ ಧ್ವಜಗಳನ್ನು ಅಳವಡಿಸಲಾಗಿತ್ತು. ಅವುಗಳನ್ನು ತೆಗೆದುಹಾಕಲಾಗಿದೆ' ಎಂದು ಹಿಂದೂಗಳು ಆರೋಪಿಸಿದ್ದಾರೆ.

'ಇದೇ ವಿಷಯವಾಗಿ ಸೋಮವಾರ ರಾತ್ರಿ ಕಲ್ಲು ತೂರಾಟ ಹಾಗೂ ಘರ್ಷಣೆ ಸಂಭವಿಸಿತು. ಪೊಲೀಸರು ಕೂಡಲೇ ಸ್ಥಳಕ್ಕೆ ಧಾವಿಸಿ, ಪರಿಸ್ಥಿತಿಯನ್ನು ನಿಯಂತ್ರಿಸಲು ಕ್ರಮ ಕೈಗೊಂಡರು. ಅಶ್ರು ವಾಯು ಸಿಡಿಸಿ ಗುಂಪನ್ನು ಚದುರಿಸಿದ್ದರು. ಈ ಸಂದರ್ಭದಲ್ಲಿ ಐವರು ಪೊಲೀಸರಿಗೆ ಗಾಯಗಳಾಗಿವೆ' ಎಂದು ಪೊಲೀಸ್ ಅಧಿಕಾರಿಗಳು ಹೇಳಿದ್ದಾರೆ.

ಮಂಗಳವಾರ ಈದ್ ಅಂಗವಾಗಿ ಸಾಮೂಹಿಕ ಪ್ರಾರ್ಥನೆ ನೆರವೇರಿದ ಬಳಿಕ ಮತ್ತೆ ಗಲಭೆ ಶುರುವಾಗಿ, ಕೆಲವರು ಜಾಲೋರಿ ಗೇಟ್ ಸಮೀಪ ಕಲ್ಲು ತೂರಾಟ ನಡೆಸಿದರು. ಈ ವೇಳೆ ಅಂಗಡಿಗಳು, ವಾಹನಗಳು ಹಾಗೂ ಮನೆಗಳ ಮೇಲೂ ಕಲ್ಲುಗಳನ್ನು ತೂರಲಾಗಿದೆ. ಲಾಠಿ ಪ್ರಹಾರ ನಡೆಸಿ ಪೊಲೀಸರು ಉದ್ರಿಕ್ತರನ್ನು ಚದುರಿಸಿ, ಕೆಲವರನ್ನು ವಶಕ್ಕೆ ತೆಗೆದುಕೊಂಡರು.

ಟೀಕೆ: ಜೋಧಪುರದ ಬಿಜೆಪಿ ಶಾಸಕಿ ಸೂರ್ಯಕಾಂತಾ ವ್ಯಾಸ್ ಅವರು ಘಟನೆಯನ್ನು ಖಂಡಿಸಿದ್ದು, ಸ್ವಾತಂತ್ರ್ಯ ಹೋರಾಟಗಾರ ಬಿಸ್ಸಾ ಅವರ ಪ್ರತಿಮೆ ಪಕ್ಕ ಈದ್ ಧ್ವಜಗಳನ್ನು ಅಳವಡಿಸಿದ್ದಕ್ಕೆ ಆಕ್ಷೇಪ ವ್ಯಕ್ತಪಡಿಸಿದ್ದಾರೆ.

'ಬಿಸ್ಸಾ ಅವರ ಪ್ರತಿಮೆ ಪಕ್ಕದಲ್ಲಿಯೇ ಅವರು (ಮುಸ್ಲಿಮರು) ಧ್ವಜ ಅಳವಡಿಸಿರುವುದಕ್ಕೆ ನಮ್ಮ ಆಕ್ಷೇಪ ಇದೆ. ಇದನ್ನು ನಾವು ಮರೆಯುವುದಿಲ್ಲ' ಎಂದು ಹೇಳಿದ್ದಾರೆ. ಅವರು ಘಟನಾ ಸ್ಥಳಕ್ಕೆ ಸೋಮವಾರ ರಾತ್ರಿ ಭೇಟಿ ನೀಡಿದ್ದರು.

'ಸ್ವಾತಂತ್ರ್ಯ ಸೇನಾನಿ ಬಾಲಮುಕುಂದ ಬಿಸ್ಸಾ ಅವರ ಪ್ರತಿಮೆ ಮೇಲೆ ಸಮಾಜವಿರೋಧಿ ಶಕ್ತಿಗಳು ಇಸ್ಲಾಮಿಕ್ ಧ್ವಜವನ್ನು ಅಳವಡಿಸಿದ್ದು ಹಾಗೂ ಪರಶುರಾಮ ಜಯಂತಿ ಅಂಗವಾಗಿ ಆ ಸ್ಥಳದಲ್ಲಿ ಹಾಕಿದ್ದ ಕೇಸರಿ ಧ್ವಜವನ್ನು ತೆಗೆದಿರುವುದು ಖಂಡನೀಯ' ಎಂದು ಬಿಜೆಪಿಯ ರಾಜ್ಯ ಘಟಕದ ಅಧ್ಯಕ್ಷ ಸತೀಶ್ ಪೂನಿಯಾ ಹೇಳಿದ್ದಾರೆ.

ಈ ಬಗ್ಗೆ ವಿಡಿಯೊ ಹೇಳಿಕೆ ಬಿಡುಗಡೆ ಮಾಡಿರುವ ಅವರು, 'ಕೇಸರಿ ಧ್ವಜವನ್ನು ತೆಗೆದುಹಾಕಿ, ಆ ಸ್ಥಳದಲ್ಲಿ ಇಸ್ಲಾಮಿಕ್ ಧ್ವಜ ಅಳವಡಿಸಲಾಗಿದೆ. ಕರೌಲಿಯಲ್ಲಿಯೂ ಕೋಮು ಗಲಭೆ ನಡೆಯಿತು. ಹೀಗಾಗಿ, ಇಂಥ ಘಟನೆಗಳು ರಾಜ್ಯ ಸರ್ಕಾರದ ಬೆಂಬಲದಿಂದಲೇ ನಡೆಯುತ್ತಿವೆ ಎಂಬುದು ಸಾಬೀತಾದಂತಾಗಿದೆ' ಎಂದರು.



ಜೋಧಪುರದಲ್ಲಿ ಮಂಗಳವಾರ ಈದ್–ಉಲ್–ಫಿತ್ರ್ ನಂತರ ಸಂಭವಿಸಿದ ಗಲಭೆ ಸಂದರ್ಭದಲ್ಲಿ ಪ್ರತಿಭಟನಕಾರರನ್ನು ಚದುರಿಸಲು ಪೊಲೀಸರು ಲಾಠಿ ಪ್ರಹಾರ ಮಾಡಿದರು –ಪಿಟಿಐ ಚಿತ್ರ

ಮುಖ್ಯಮಂತ್ರಿ ಗೆಹಲೋತ್ ಸಭೆ

ಜೋಧಪುರದಲ್ಲಿ ಕೋಮು ಗಲಭೆ ನಡೆದ ಬೆನ್ನಲ್ಲೇ, ಮುಖ್ಯಮಂತ್ರಿ ಅಶೋಕ್ ಗೆಹಲೋತ್ ಅವರು ಉನ್ನತ ಮಟ್ಟದ ಸಭೆ ನಡೆಸಿದರು.

ಗಲಭೆಗ್ರಸ್ತ ಜೋಧಪುರಕ್ಕೆ ಹೆಲಿಕಾಪ್ಟರ್ ಮೂಲಕ ತೆರಳಿ, ಪರಿಸ್ಥಿತಿ ತಿಳಿಗೊಳಿಸಲು ಕ್ರಮ ಕೈಗೊಳ್ಳುವಂತೆ ಅವರು ಗೃಹ ಸಚಿವ ರಾಜೇಂದ್ರ ಯಾದವ್, ಉಸ್ತುವಾರಿ ಸಚಿವ ಸುಭಾಷ್ ಗರ್ಗ್, ಗೃಹ ಇಲಾಖೆಯ ಹೆಚ್ಚುವರಿ ಕಾರ್ಯದರ್ಶಿ ಅಭಯಕುಮಾರ್ ಹಾಗೂ ಹೆಚ್ಚುವರಿ ಡಿಜಿ (ಕಾನೂನು ಮತ್ತು ಸುವ್ಯವಸ್ಥೆ) ಹವಾ ಸಿಂಗ್ ಘುಮಾರಿಯಾ ಅವರಿಗೆ ಗೆಹಲೋತ್ ಸೂಚನೆ ನೀಡಿದರು.

ಇದಕ್ಕೂ ಮುನ್ನ ಅವರು, 'ಈ ಘಟನೆ ನಡೆದಿರುವುದು ದುರದೃಷ್ಟಕರ. ಎಲ್ಲರೂ ಶಾಂತಿ ಕಾಪಾಡಬೇಕು' ಎಂದು ಟ್ವೀಟ್ ಮಾಡಿದ್ದಾರೆ.

'ಭ್ರಾತೃತ್ವ ಹಾಗೂ ಪ್ರೀತಿ ಹಂಚುವ ಜೋಧಪುರದ ಪರಂಪರೆಯನ್ನು ಗೌರವಿಸಬೇಕು. ಶಾಂತಿ ಹಾಗೂ ಸುವ್ಯವಸ್ಥೆಯನ್ನು ಪುನರ್‌ಸ್ಥಾಪಿಸಲು ಎಲ್ಲರೂ ಕೈಜೋಡಿಸಬೇಕು' ಎಂದು ಅವರು ಮನವಿ ಮಾಡಿದ್ದಾರೆ.

ಶ್ರೀಲಂಕಾ: ಕಡಿಮೆ ಆದಾಯದ ಕುಟುಂಬಗಳಿಗೆ ನಗದು ನೆರವು

ಕೊಲಂಬೊ (ಪಿಟಿಐ): ಆರ್ಥಿಕ ಬಿಕ್ಕಟ್ಟಿನಿಂದ ತೀವ್ರವಾಗಿ ಬಾಧಿತರಾದವರಿಗೆ ₹3,000 ರಿಂದ ₹7,500 ರವರೆಗೆ ನಗದು ನೆರವು ನೀಡಲಾಗುವುದು ಎಂದು ಶ್ರೀಲಂಕಾ ಸರ್ಕಾರ ತಿಳಿಸಿದೆ.

ಈ ಕುರಿತು ಮಾಹಿತಿ ನೀಡಿದ ವ್ಯಾಪಾರ ಸಚಿವ ಶೆಹನ್ ಸೇಮಸಿಂಘೆ, 'ಸೋಮವಾರ ನಡೆದ ಸಚಿವ ಸಂಪುಟ ಸಭೆಯಲ್ಲಿ ಈ ನಿರ್ಧಾರವನ್ನು ತೆಗೆದುಕೊಳ್ಳಲಾಗಿದೆ. ನಗದು ನೆರವು ಕಾರ್ಯಕ್ಕೆ ವಿಶ್ವ ಬ್ಯಾಂಕ್ ಸಹಾಯ ಮಾಡಲಿದೆ' ಎಂದರು.

'ಒಟ್ಟು 33 ಲಕ್ಷ ಫಲಾನುಭವಿ ಕುಟುಂಬಗಳನ್ನು ಗುರುತಿಸಲಾಗಿದೆ. ಆರ್ಥಿಕ ಬಿಕ್ಕಟ್ಟಿನಿಂದ ಕಡು ಬಡವರು, ವೃದ್ಧರು, ಮೂತ್ರಪಿಂಡ ಸಮಸ್ಯೆಯಿಂದ ಬಳಲುತ್ತಿರುವವರು ಮತ್ತು ಅಂಗವಿಕಲರು ತೀವ್ರವಾಗಿ ಬಳಲುತ್ತಿದ್ದಾರೆ. ಇಂತಹ ಕುಟುಂಬಗಳಿಗೆ ತಕ್ಷಣದ ಪರಿಹಾರದ ಅಗತ್ಯವನ್ನು ಸರ್ಕಾರ ಗುರುತಿಸಿದೆ' ಎಂದರು.

'ನಗದು ನೆರವು ಕಾರ್ಯಕ್ಕೆ ವಿಶ್ವ ಬ್ಯಾಂಕ್ ಹಣಕಾಸಿನ ಸಹಾಯದ ಜೊತೆ ತಾಂತ್ರಿಕ ನೆರವನ್ನೂ ಒದಗಿದಲಿದೆ. ಪರಿಹಾರ ಹಣದ ವರ್ಗಾವಣೆಯು ನೇರವಾಗಿ ಫಲಾನುಭವಿಗಳ ಬ್ಯಾಂಕ್ ಖಾತೆಗಳಿಗೆ ಜಮೆಯಾಗಲಿದೆ. ಅರ್ಹ ನಾಗರಿಕರು ಬ್ಯಾಂಕ್ ಖಾತೆ ಹೊಂದಿಲ್ಲದಿದ್ದರೆ, ಅಂಥವರು ಕೂಡಲೇ ಖಾತೆ ತೆರೆಯುವಂತೆ ಸಂಬಂಧಪಟ್ಟ ಸರ್ಕಾರಿ ಅಧಿಕಾರಿಗಳು ಸೂಚಿಸಲಿದ್ದಾರೆ' ಎಂದು ಸೇಮಸಿಂಘೆ ತಿಳಿಸಿದರು.

ಸಂವಿಧಾನ ರಚನೆಗೆ ಸಂಪುಟ ಉಪಸಮಿತಿ ನೇಮಕ

ಕೊಲಂಬೊ (ಪಿಟಿಐ): ಶ್ರೀಲಂಕಾದಲ್ಲಿ ಸರ್ಕಾರದ ವಿರುದ್ಧ ಅವಿಶ್ವಾಸ ನಿರ್ಣಯ ಮಂಡಿಸಲು ವಿರೋಧ ಪಕ್ಷಗಳು ಸಜ್ಜಾಗಿರುವಂತೆಯೇ, ನೂತನ ಸಂವಿಧಾನ ರಚನೆಯ ಪ್ರಸ್ತಾವದ ಪರಿಶೀಲನೆಗೆ ಸರ್ಕಾರ ಸಂಪುಟ ಉಪಸಮಿತಿ ರಚಿಸಿದೆ.

ಮುಖ್ಯ ವಿರೋಧ ಪಕ್ಷ ಸಮಗಿ ಜನ ಬಲವೇಗಯಾ (ಎಸ್‌ಜೆಬಿ) ಸರ್ಕಾರದ ವಿರುದ್ಧ ಬುಧವಾರ ಅವಿಶ್ವಾಸ ನಿರ್ಣಯ ಮಂಡಿಸುವುದಾಗಿ ಹೇಳಿದೆ. ಅಲ್ಲದೆ ಪ್ರಮುಖ ತಮಿಳು ಪಕ್ಷ ಮತ್ತು ಮಾಜಿ ಪ್ರಧಾನಿ ರನಿಲ್ ವಿಕ್ರಮಸಿಂಘೆ ಅವರ ಯುನೈಟೆಡ್ ನ್ಯಾಶನಲ್ ಪಾರ್ಟಿ (ಯುಎನ್‌ಪಿ) ಜಂಟಿಯಾಗಿ ಅಧ್ಯಕ್ಷ ಗೊಟಬಯ ರಾಜಪಕ್ಸ ವಿರುದ್ಧ ಅವಿಶ್ವಾಸ ಮಂಡಿಸಲಿವೆ.

ತೀವ್ರ ಆರ್ಥಿಕ ಬಿಕ್ಕಟ್ಟಿಗೆ ಸಿಲುಕಿರುವ ದೇಶದಲ್ಲಿ ಜನರ ಆಕ್ರೋಶ ಹೆಚ್ಚಿದಂತೆ ಸಂವಿಧಾನಕ್ಕೆ ತಿದ್ದುಪಡಿ ತರುವ ಭರವಸೆಯನ್ನು ಪ್ರಧಾನಿ ಮಹಿಂದಾ ರಾಜಪಕ್ಸ ನೀಡಿದ್ದರು. ಅವಿಶ್ವಾಸ ತೂಗುಗತ್ತಿಯ ನಡುವೆಯೇ ಉಪಸಮಿತಿಯನ್ನು ಇದೀಗ ರಚಿಸಲಾಗಿದೆ.

'ಗಂಡನನ್ನು ಹಂಚಿಕೊಳ್ಳಲು ಹೆಂಡತಿ ಇಷ್ಟಪಡುವುದಿಲ್ಲ'

ಅಲಹಾಬಾದ್ (ಪಿಟಿಐ): ಭಾರತದ ಯಾವ ಮಹಿಳೆಯೂ ತನ್ನ ಗಂಡನನ್ನು ಬೇರೊಬ್ಬರ ಜೊತೆ ಹಂಚಿಕೊಂಡು ಸಮಚಿತ್ತದಿಂದ ಇರಲು ಸಾಧ್ಯವಿಲ್ಲ ಎಂದು ಅಲಹಾಬಾದ್ ಹೈಕೋರ್ಟ್ ಮಂಗಳವಾರ ಅಭಿಪ್ರಾಯ ವ್ಯಕ್ತಪಡಿಸಿದೆ.

ತಮ್ಮ ಎರಡನೇ ಪತ್ನಿ ಆತ್ಮಹತ್ಯೆ ಮಾಡಿಕೊಳ್ಳಲು ಕುಮ್ಮಕ್ಕು ನೀಡಿದ್ದಾರೆ ಎಂಬ ಆರೋಪವನ್ನು ಕೈಬಿಡಬೇಕು ಎಂದು ಕೋರಿ ಆರೋಪಿ ಸಲ್ಲಿಸಿದ್ದ ಅರ್ಜಿಯನ್ನು ಕೋರ್ಟ್ ವಜಾಗೊಳಿಸಿತು.

ವಿಚಾರಣೆನಡೆಸಿದ ನ್ಯಾಯಮೂರ್ತಿ ರಾಹುಲ್ ಚತುರ್ವೇದಿ ಅವರು, ಹೆಚ್ಚುವರಿ ಸೆಷನ್ಸ್ ನ್ಯಾಯಾಧೀಶರ ಆದೇಶವನ್ನು ಕೈಬಿಡಲು ನಿರಾಕರಿಸಿದರು. 'ಗಂಡ ಮತ್ತೊಬ್ಬ ಮಹಿಳೆಯನ್ನು ಮದುವೆಯಾಗಲು ಮುಂದಾಗುವುದನ್ನು ಅಥವಾ ಗಂಡನನ್ನು ಬೇರೊಬ್ಬ ಮಹಿಳೆಯ ಜೊತೆ ಹಂಚಿಕೊಳ್ಳುವುದನ್ನು ಯಾವ ಮಹಿಳೆಯೂ ಇಷ್ಟಪಡುವುದಿಲ್ಲ' ಎಂದು ನ್ಯಾಯಮೂರ್ತಿ ಹೇಳಿದರು.

ಪತ್ನಿಯ ಆತ್ಮಹತ್ಯೆಗೆ ಕುಮ್ಮಕ್ಕು ನೀಡಿದ್ದ ಆರೋಪ ಸುಶೀಲ್ ಕುಮಾರ್ ಎಂಬ ವ್ಯಕ್ತಿ ಮೇಲಿದೆ. 2018ರ ಸೆ.22ರಂದು ಗಂಡನ ವಿರುದ್ಧ ಠಾಣೆಗೆ ದೂರು ನೀಡಿದ್ದ ಮಹಿಳೆ, ಮರುದಿನ ಆತ್ಮಹತ್ಯೆ ಮಾಡಿಕೊಂಡಿದ್ದರು. ಸುಶೀಲ್ ಕುಮಾರ್ ಅವರು ಮೊದಲ ಪತ್ನಿಗೆ ವಿಚ್ಛೇದನ ನೀಡದೇ ಎರಡನೇ ಮದುವೆಯಾಗಿದ್ದರು. ತಮಗೆ ಈಗಾಗಲೇ ಮದುವೆಯಾಗಿದೆ ಎಂಬ ವಿಚಾರವನ್ನು ಎರಡನೇ ಮದುವೆ ವೇಳೆ ಮುಚ್ಚಿಟ್ಟಿದ್ದರು ಎಂದು ಆರೋಪಿಸಲಾಗಿದೆ. ಗಂಡ ಮೂರನೇ ಮದುವೆಯಾಗಲು ಮುಂದಾಗಿರುವ ವಿಷಯ ತಿಳಿದು ಎರಡನೇ ಪತ್ನಿ ಆತ್ಮಹತ್ಯೆ ಮಾಡಿಕೊಂಡಿದ್ದರು. 'ರಹಸ್ಯವಾಗಿ ಬೇರೊಬ್ಬರ ಜೊತೆ ಗಂಡ ಮದುವೆಯಾಗಿದ್ದಾನೆ ಎಂದು ಪತ್ನಿ ತಿಳಿದುಕೊಂಡಿದ್ದಾಳೆ. ಆತ್ಮಹತ್ಯೆಗೆ ಇಷ್ಟು ಕಾರಣ ಸಾಕು' ಎಂದು ಕೋರ್ಟ್ ಹೇಳಿತ್ತು.

ಮಂಗನ ಕಾಯಿಲೆ: ಗ್ರಾ. ಪಂ. ಸದಸ್ಯ ಸಾವು



ರಾಮಸ್ವಾಮಿ

ಕಾರ್ಗಲ್: ಮಂಗನಕಾಯಿಲೆ ದೃಢಪಟ್ಟಿದ್ದ ಸಮೀಪದ ಅರಳಗೋಡು ಗ್ರಾಮ ಪಂಚಾಯಿತಿಯ ಕರುಮನೆ ಗ್ರಾಮ ಪಂಚಾಯಿತಿ ಸದಸ್ಯ ರಾಮಸ್ವಾಮಿ ಮಂಗಳವಾರ ಮಣಿಪಾಲ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾರೆ.

ಅರಳಗೋಡು ಪ್ರಾಥಮಿಕ ಆರೋಗ್ಯ ಕೇಂದ್ರದ ವ್ಯಾಪ್ತಿಯಲ್ಲಿ ಮೂರು ವರ್ಷಗಳಲ್ಲಿ 28ಕ್ಕೂ ಹೆಚ್ಚು ಗ್ರಾಮಸ್ಥರು ಮಂಗನಕಾಯಿಲೆಗೆ ಬಲಿಯಾಗಿದ್ದು, ಇದೀಗ ರಾಮಸ್ವಾಮಿ ಅವರ ಸಾವು ಗ್ರಾಮಸ್ಥರಲ್ಲಿ ಆತಂಕ ಹೆಚ್ಚಿಸಿದೆ.

ಹತ್ತು ದಿನಗಳ ಹಿಂದೆ ರಾಮಸ್ವಾಮಿಯವರಿಗೆ ರೋಗ ಲಕ್ಷಣಗಳು ಕಂಡುಬಂದು, ಶಿವಮೊಗ್ಗದ ವೈರಾಣು ಸಂಶೋಧನಾ ಕೇಂದ್ರದಲ್ಲಿ ನಡೆದ ಪರೀಕ್ಷೆಯಿಂದ ಕೆಎಫ್‌ಡಿ ದೃಢಪಟ್ಟಿತ್ತು. ಚಿಕಿತ್ಸೆಗೆ ಸ್ಪಂದಿಸದೆ ಮೃತಪಟ್ಟಿದ್ದಾರೆ. ಅವರಿಗೆ ಪತ್ನಿ, ಪುತ್ರಿ ಇದ್ದಾರೆ.

ಹಿಂದೂ-ಮುಸ್ಲಿಂ ಸಾಮರಸ್ಯಕ್ಕೆ ಸಾಕ್ಷಿ ದಾವಣಗೆರೆ ತಾಲ್ಲೂಕಿನ ಬಲ್ಲೂರು ಗ್ರಾಮ

ರೈತ ಮುಖಂಡ ನೀಡಿದ್ದ ಜಾಗದಲ್ಲಿ ಮಸೀದಿ

• ಎಚ್. ಅನಿತಾ

ದಾವಣಗೆರೆ: ಕರ್ನಾಟಕ ರಾಜ್ಯ ರೈತ ಸಂಘ ಮತ್ತು ಹಸಿರು ಸೇನೆಯ ರಾಜ್ಯ ಕಾರ್ಯದರ್ಶಿ ಬಲ್ಲೂರು ರವಿಕುಮಾರ್ ಅವರು ತಮ್ಮ ಗ್ರಾಮದ ಮುಸ್ಲಿಂ ಸಮುದಾಯದವರಿಗೆ ನೀಡಿದ್ದ 40X40 ಅಡಿ ಜಾಗದಲ್ಲಿ ಈಗ ಮಸೀದಿ ತಲೆ ಎತ್ತುತ್ತಿದೆ.

ದಾವಣಗೆರೆ ತಾಲ್ಲೂಕಿನ ಬಲ್ಲೂರು ಗ್ರಾಮದಲ್ಲಿ 8 ಮುಸ್ಲಿಂ ಕುಟುಂಬಗಳು ವಾಸಿಸುತ್ತಿವೆ. ಸಮುದಾಯದ ಧಾರ್ಮಿಕ ಚಟುವಟಿಕೆಗೆ ಸೂಕ್ತ ಸ್ಥಳ ಇರಲಿಲ್ಲ. ಮೊಹರಂ ಆಚರಣೆಯನ್ನು ರಸ್ತೆಯಲ್ಲಿಯೇ ಮಾಡಬೇಕಾದ ಪರಿಸ್ಥಿತಿ ಇತ್ತು. ಇದನ್ನು ಮನಗಂಡ ಬಲ್ಲೂರು ರವಿಕುಮಾರ್ ತಮ್ಮ ತಾತನವರಿಂದ ಬಂದಿದ್ದ ಭೂಮಿಯಲ್ಲಿ 40X40 ಅಡಿ ಜಾಗವನ್ನು 1990ರ ದಶಕದಲ್ಲಿಯೇ ಜಾಮಿಯಾ ಮಸೀದಿ ಹೆಸರಿಗೆ ಖಾತೆ ಮಾಡಿಸಿಕೊಟ್ಟಿದ್ದರು. ಮಸೀದಿ ನಿರ್ಮಾಣ ಕಾರ್ಯ ಆಗ ಆರಂಭಗೊಂಡಿತ್ತಾದರೂ ಹಣಕಾಸಿನ ತೊಂದರೆಯಿಂದಾಗಿ ಅರ್ಧಕ್ಕೇ ನಿಂತಿತ್ತು. ಈಗ ಆರು ತಿಂಗಳುಗಳಿಂದ ಕೆಲಸ ಚುರುಕು ಪಡೆದುಕೊಂಡಿದ್ದು, ಸಣ್ಣ-ಪುಟ್ಟ ಕೆಲಸಗಳನ್ನು ಹೊರತುಪಡಿಸಿ ನಿರ್ಮಾಣ ಬಹುತೇಕ ಪೂರ್ಣಗೊಂಡಿದೆ.

ಮುಸ್ಲಿಂ ಸಮುದಾಯದ ಎಲ್ಲ ಕುಟುಂಬಗಳು ಸಣ್ಣ ರೈತರಾಗಿದ್ದು, ಜೀವನೋಪಾಯಕ್ಕಾಗಿ ಮೀನುಗಾರಿಕೆ ನೆಚ್ಚಿಕೊಂಡಿದ್ದಾರೆ. ವಕ್ಫ್ ಬೋರ್ಡ್‌ನಿಂದ ಮಸೀದಿ ನಿರ್ಮಾಣಕ್ಕೆ ₹ 3 ಲಕ್ಷ ಅನುದಾನ ಸಿಕ್ಕಿತ್ತು. ಗ್ರಾಮಸ್ಥರೂ ದೇಣಿಗೆ ನೀಡಿದ್ದರು. ಇದಕ್ಕೆ ಪ್ರತಿಯಾಗಿ ಮುಸ್ಲಿಂ ಕುಟುಂಬಗಳೂ ಗ್ರಾಮದ ಆಂಜನೇಯಸ್ವಾಮಿ ದೇವಸ್ಥಾನ ನಿರ್ಮಾಣಕ್ಕೆ ತಮ್ಮ ಕೈಲಾದಷ್ಟು ದೇಣಿಗೆ ನೀಡಿದ್ದಾರೆ.

'ಗ್ರಾಮದ ಮುಸ್ಲಿಂ ಸಮುದಾಯದವರು ತಮ್ಮ ಧಾರ್ಮಿಕ ಚಟುವಟಿಕೆಗಳ ಸಾಮಗ್ರಿಗಳನ್ನು ಇಲ್ಲಿನ ದೇವಸ್ಥಾನದಲ್ಲಿ ಇಟ್ಟುಕೊಳ್ಳುತ್ತಿದ್ದರು. ದಾವಣಗೆರೆಯಲ್ಲಿ 1990ರ ದಶಕದಲ್ಲಿ ಕೋಮು ಗಲಭೆ ನಡೆದ ಸಂದರ್ಭದಲ್ಲಿ ಕೆಲವರು ಅವರ ಸಾಮಗ್ರಿಗಳನ್ನು ತೆಗೆದು ಹೊರಗೆ ಹಾಕಿದ್ದರು. ಆಗ ಅವರು ನನ್ನ ಬಳಿ ಬಂದು ಕುಳಿತರು. ಅವರಿಗೆ ಧೈರ್ಯ ತುಂಬಿ, ಧಾರ್ಮಿಕ ಚಟುವಟಿಕೆಗೆ ಸಹಾಯವಾಗಲಿ ಎಂದು ಜಾಗ ನೀಡಿದ್ದೆ. ಗ್ರಾಮದ ದಕ್ಷಿಣಕ್ಕೆ ವೀರಭದ್ರೇಶ್ವರ ಸ್ವಾಮಿ ದೇವಸ್ಥಾನ, ಉತ್ತರಕ್ಕೆ ಆಂಜನೇಯಸ್ವಾಮಿ ದೇವಸ್ಥಾನ, ಪಶ್ಚಿಮಕ್ಕೆ ಮಸೀದಿ ಇದೆ. ಗ್ರಾಮದಲ್ಲಿ ಯಾವುದೇ ಆಚರಣೆಗಳು ನಡೆದರೂ ಪರಸ್ಪರ ಭಾಗಿಯಾಗುತ್ತೇವೆ' ಎನ್ನುತ್ತಾರೆ ಬಲ್ಲೂರು ರವಿಕುಮಾರ್.

'ಜಾಮಿಯಾ ಮಸೀದಿ ಮುಂಭಾಗದಲ್ಲಿ ನಮ್ಮ ತಾತ ಬಿ.ಎಂ. ಚನ್ನಯ್ಯ ಅವರ ಹೆಸರಿನ ಫಲಕವನ್ನು ಗೋಡೆಯೊಳಗೆ ಕೂರಿಸುವ ಮೂಲಕ ಸಮುದಾಯದವರು ಕೃತಜ್ಞತೆ ತೋರಿದ್ದಾರೆ. ದೇಶದ ಬೆಳವಣಿಗೆಗಳಿಗೆ ಕಿವಿಗೊಡದೆ ಎಲ್ಲರೂ ಸಾಮರಸ್ಯದಿಂದ ಬದುಕುತ್ತಿದ್ದೇವೆ' ಎನ್ನುತ್ತಾರೆ ಅವರು.



ದಾವಣಗೆರೆ ತಾಲ್ಲೂಕಿನ ಬಲ್ಲೂರು ಗ್ರಾಮದಲ್ಲಿ ಮಸೀದಿ ನಿರ್ಮಾಣ ಕಾರ್ಯ ಬಹುತೇಕ ಪೂರ್ಣಗೊಂಡಿರುವುದು.

ಗ್ರಾಮದಲ್ಲಿಯೇ ಹುಟ್ಟಿ, ಬೆಳೆದು ಎಲ್ಲರೊಂದಿಗೆ ಸೌಹಾರ್ದದಿಂದ ಬದುಕುತ್ತಿದ್ದು, ಎಲ್ಲ ಆಚರಣೆಗಳಲ್ಲಿ ಪಾಲ್ಗೊಳ್ಳುತ್ತಿದ್ದೇವೆ. ರವಿಕುಮಾರ್ ಅವರಲ್ಲದೆ ಎಲ್ಲ ಗ್ರಾಮಸ್ಥರು ಎಲ್ಲರೂ ಸಹಕಾರಿಯಾಗಿದ್ದಾರೆ.

ಮುಕ್ಬುಲ್ ಸಾಬ್, ಸಮುದಾಯದ ಮುಖಂಡ, ಬಲ್ಲೂರು ಗ್ರಾಮ



ಹಿಂದೂ–ಮುಸ್ಲಿಂ ಸೌಹಾರ್ದದ ಜೀವಂತಿಕೆಗೆ ಅಣಬೇರು ಮತ್ತು ಬಲ್ಲೂರಿನಂತಹ ಗ್ರಾಮಗಳು ಉದಾಹರಣೆ. ಇಂತಹ ಭಾವೈಕ್ಯ ತಾಣಗಳು ಪ್ರಸ್ತುತ ಸಂದರ್ಭಕ್ಕೆ ಮಾದರಿಯಾಗಿವೆ.

ಅನೀಸ್ ಪಾಷಾ, ವಕೀಲ, ದಾವಣಗೆರೆ



ಎಲ್ಲಾ ಜಾತಿ–ಧರ್ಮಗಳಲ್ಲಿ ಶೇ 90 ರಷ್ಟು ಮಂದಿ ಒಳ್ಳೆಯವರು ಇದ್ದರೆ, ಶೇ 10ರಷ್ಟು ಮಂದಿ ಕೆಟ್ಟವರೂ ಇರುತ್ತಾರೆ. ಅಂದು ದುಡಿದು ಅಂದು ಬದುಕುವವರಿಗೆ ಇದೆಲ್ಲ ಬೇಕಿಲ್ಲ.

ಬಲ್ಲೂರು ರವಿಕುಮಾರ್, ಕಾರ್ಯದರ್ಶಿ, ಕರ್ನಾಟಕ ರಾಜ್ಯ ರೈತ ಸಂಘ

ಪಾಕ್‌ನಲ್ಲಿದ್ದ ಭಾರತೀಯ ವಿದ್ಯಾರ್ಥಿ ಸೇರಿ ಮೂವರು ಭಾಗಿ

ಸೇನಾ ಮಾಹಿತಿ ರವಾನೆ: ಆರೋಪಪಟ್ಟಿ

ಪ್ರಜಾವಾಣಿ ವಾರ್ತೆ

ಶ್ರೀನಗರ: ಭಯೋತ್ಪಾದನೆ ಚಟುವಟಿಕೆಯಲ್ಲಿ ತೊಡಗಿದ ಹಾಗೂ ಪಾಕಿಸ್ತಾನದ ಭಯೋತ್ಪಾದಕ ಸಂಘಟನೆಯೊಂದಿಗೆ ಭಾರತೀಯ ಸೇನಾ ನೆಲೆಗಳ ರಹಸ್ಯ ಮಾಹಿತಿಗಳನ್ನು ರವಾನಿಸಿದ ಆರೋಪ ಕುರಿತು ಪಾಕಿಸ್ತಾನದ ಭಾರತೀಯ ವಿದ್ಯಾರ್ಥಿ ಹಾಗೂ ಆತನ ತಂದೆ ಸೇರಿ ಮೂವರ ವಿರುದ್ಧ ಜಮ್ಮು-ಕಾಶ್ಮೀರದ ರಾಜ್ಯ ತನಿಖಾ ಸಂಸ್ಥೆಯು (ಎಸ್‌ಐಎ) ಆರೋಪ ಪಟ್ಟಿ ಸಲ್ಲಿಸಿದೆ.

'ದೋಡಾದ ಕಷ್ಟಿಗಢ ನಿವಾಸಿ ಹಾಗೂ ಇಸ್ಲಾಮಾಬಾದ್‌ನ ಇಂಟರ್‌ನ್ಯಾಷನಲ್ ಇಸ್ಲಾಮಿಕ್ ವಿಶ್ವವಿದ್ಯಾಲಯದ ವಿದ್ಯಾರ್ಥಿ ಆಸಿಫ್ ಶಬೀರ್ ನಾಯಕ್ ಹಾಗೂ ಆತನ ತಂದೆ ಶಬೀರ್ ಹುಸೇನ್ ನಾಯಕ್ ಹಾಗೂ ಸಪ್ದಾರ್ ಹುಸೇನ್ ವಿರುದ್ಧ ಭಯೋತ್ಪಾದನಾ ವಿರೋಧಿ ಕಾಯ್ದೆಯ ವಿವಿಧ ಸೆಕ್ಷನ್‌ಗಳಡಿ ಆರೋಪಪಟ್ಟಿ ಸಲ್ಲಿಸಲಾಗಿದೆ' ಎಂದು ಅಧಿಕಾರಿಗಳು ತಿಳಿಸಿದರು.

'ಇಸ್ಲಾಮಾಬಾದ್‌ನ ಇಸ್ಲಾಮಿಕ್ ವಿಶ್ವವಿದ್ಯಾಲಯದ ಸಮೂಹ ಸಂವಹನ ವಿಭಾಗದಲ್ಲಿ ಆಸಿಫ್ ಶಬೀರ್ ನಾಯ್ಕ್ ಪ್ರವೇಶಾತಿ ಪಡೆದಿದ್ದು, ಆದರೆ ವಾಸ್ತವವಾಗಿ ನಿಷೇಧಿತ ಭಯೋತ್ಪಾದಕ ಸಂಘಟನೆ ಹಿಜ್ಬುಲ್ ಮುಜಾಹಿದ್ದೀನ್ ಸಂಘಟನೆಯ ಮಾಧ್ಯಮ ವಿಭಾಗದಲ್ಲಿ ಕೆಲಸ ಮಾಡುತ್ತಿದ್ದ. ಉನ್ನತ ವ್ಯಾಸಂಗಕ್ಕೆ ಬರುವ ಭಾರತೀಯ ವಿದ್ಯಾರ್ಥಿಗಳನ್ನು ಪಾಕಿಸ್ತಾನ ದುರ್ಬಳಕೆ ಮಾಡಿಕೊಳ್ಳುತ್ತಿದೆ' ಎಂದು ಅಧಿಕಾರಿಗಳು ಆರೋಪಿಸಿದ್ದಾರೆ.

ಬುಧವಾರ, ಮೇ 4, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 123 | ಪುಟ 14
● www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ಚಿನ್ನ (Std. 10g)	ಶುದ್ಧ ಬೆಳ್ಳಿ (kg)
₹52,750 (ಬೆಂಗಳೂರು)	₹64,400 (ಬೆಂಗಳೂರು)

ಸಂಪುಟ ಪುನರ್‌ರಚನೆ ಖಚಿತ

ಬೊಮ್ಮಾಯಿ ನಾಯಕತ್ವ ಅಬಾಧಿತ: ನಾಲ್ವರಿಗೆ ಉಪಮುಖ್ಯಮಂತ್ರಿ ಪಟ್ಟ?

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರನ್ನೇ ಮುಂದಿಟ್ಟುಕೊಂಡು ವಿಧಾನಸಭೆ ಚುನಾವಣೆ ಎದುರಿಸಲು ಸಜ್ಜಾಗಿರುವ ಬಿಜೆಪಿ ವರಿಷ್ಠರು, ರಾಜ್ಯ ಸಚಿವ ಸಂಪುಟಕ್ಕೆ ಹೊಸ ಖದರು ಕೊಡಲು ನಿಶ್ಚಯಿಸಿದ್ದಾರೆ.

ರಾಜ್ಯ ಸರ್ಕಾರದ ನಾಯಕತ್ವ ಬದಲಾವಣೆ ಊಹಾಪೋಹಕ್ಕೆ ಕೇಂದ್ರ ಗೃಹ ಸಚಿವ ಅಮಿತ್ ಶಾ ತೆರೆ ಎಳೆದಿದ್ದಾರೆ. ಬೊಮ್ಮಾಯಿ ಜತೆ ನಡೆಸಿದ ಖಾಸಗಿ ಮಾತುಕತೆ ವೇಳೆ, 'ಉತ್ತಮ ಕಾರ್ಯಕ್ರಮಗಳನ್ನು ನೀಡಿ ಸರ್ಕಾರವನ್ನು ಮುನ್ನಡೆಸುತ್ತಿದ್ದೀರಿ. ಯಾವುದಕ್ಕೂ ತಲೆ ಕೆಡಿಸಿಕೊಳ್ಳದೇ ಅಭಿವೃದ್ಧಿಗೆ ವೇಗ ನೀಡಿ. ನಿಮ್ಮ ಜತೆ ನಾವು ನಿಲ್ಲುತ್ತೇವೆ' ಎಂದು ಶಾ ಭರವಸೆ ನೀಡಿದ್ದಾರೆ. ಹೀಗಾಗಿ, ಬೊಮ್ಮಾಯಿ ಅವರು ಮುಖ್ಯಮಂತ್ರಿಯಾಗಿ ಮುಂದುವರಿಯುವುದು ಖಚಿತ' ಎಂದು ಮೂಲಗಳು ಹೇಳಿವೆ.

ಬಹುದಿನಗಳಿಂದ ನನೆಗುದಿಗೆ ಬಿದ್ದಿರುವ ಸಂಪುಟ ಪುನರ್‌ರಚನೆ ಯತ್ತ ಬಿಜೆಪಿ ವರಿಷ್ಠರು ಚಿತ್ತ ಹರಿಸಿದ್ದಾರೆ. ಹೀಗಾಗಿ, 4 ರಿಂದ 5 ಸಚಿವರನ್ನು ಕೈಬಿಟ್ಟು ಹೊಸಬರಿಗೆ ಅವಕಾಶ ನೀಡುವುದು ಖಚಿತ. ಪುನರ್ ರಚನೆ ವೇಳೆ ಮೂರರಿಂದ ನಾಲ್ಕು ಮಂದಿಗೆ ಉಪಮುಖ್ಯಮಂತ್ರಿ ಸ್ಥಾನ ದಕ್ಕುವ ಸಾಧ್ಯತೆ ಇದೆ.

ಮುಖ್ಯಮಂತ್ರಿ ಬೊಮ್ಮಾಯಿ, ಪಕ್ಷದ ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿ ಬಿ. ಎಲ್. ಸಂತೋಷ್ ಮತ್ತು ಇತರ ನಾಯಕರ ಜತೆ ಈ ಸಂಬಂಧ ಭಾನುವಾರ ರಾತ್ರಿ ಎರಡೂವರೆಯಿಂದ ಮೂರು ತಾಸು ಚರ್ಚೆ ನಡೆದಿದೆ. ಸೋಮವಾರ ರಾತ್ರಿ ಬೆಂಗಳೂರಿಗೆ ಬಂದಿಳಿದ ಅಮಿತ್ ಶಾ ಅವರು, ಬೊಮ್ಮಾಯಿ, ಕೇಂದ್ರ ಸಚಿವ ಪ್ರಲ್ಹಾದ ಜೋಶಿ, ಶಾಸಕ ಬಿ.ಎಸ್. ಯಡಿಯೂರಪ್ಪ, ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಅವರ ಜತೆ ತಡರಾತ್ರಿ ವರೆಗೂ ಸಮಾಲೋಚನೆ ನಡೆಸಿದ್ದಾರೆ. ಈ ವೇಳೆ ಸಂಪುಟ ಪುನರ್‌ರಚನೆಯ ಬಗ್ಗೆ ಗಂಭೀರ ಚರ್ಚೆ ನಡೆದಿದೆ ಎಂದು ಗೊತ್ತಾಗಿದೆ.

ಏತನ್ಮಧ್ಯೆ, ಸಂಪುಟಕ್ಕೆ ಸೇರ್ಪಡೆ ಗೊಳ್ಳುವವರ ಪಟ್ಟಿಯೊಂದನ್ನು ಸಂತೋಷ್ ದೆಹಲಿಗೆ ಒಯ್ದಿದ್ದಾರೆ. ಪ್ರಧಾನಿ ನರೇಂದ್ರ ಮೋದಿ ಯುರೋಪ್ ಪ್ರವಾಸ ಮುಗಿಸಿ ಬಂದ ಬಳಿಕ ಅವರ ಜತೆ ಚರ್ಚೆ ನಡೆಸಿ ಅಂತಿಮ ತೀರ್ಮಾನ ತೆಗೆದುಕೊಳ್ಳಲಾಗುವುದು. ಬಹುತೇಕ ಮೇ 10ರೊಳಗೆ ಪುನರ್ ರಚನೆ ಕಸರತ್ತು ಮುಗಿಯಲಿದೆ ಎಂದು ಮೂಲಗಳು ತಿಳಿಸಿವೆ.

8ನೇ ಪುಟ ನೋಡಿ

'ಮುಖ್ಯಮಂತ್ರಿ ಬದಲಾವಣೆ ಇಲ್ಲ'



ಅರುಣ್ ಸಿಂಗ್

'ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರನ್ನು ಬದಲಿಸುವ ಪ್ರಶ್ನೆಯೇ ಇಲ್ಲ. ಅವರು ಕಾಮನ್ ಮ್ಯಾನ್ ಸಿಎಂ' ಎಂದು ಹೇಳುವ ಮೂಲಕ ಮುಖ್ಯಮಂತ್ರಿ ಬದಲಾವಣೆ ಚರ್ಚೆಗೆ ರಾಜ್ಯ ಬಿಜೆಪಿ ಉಸ್ತುವಾರಿ ಅರುಣ್ ಸಿಂಗ್ ತೆರೆ ಎಳೆದಿದ್ದಾರೆ.

ಸುದ್ದಿಗಾರರ ಜತೆ ಮಂಗಳವಾರ ಮಾತನಾಡಿದ ಅವರು, 'ಬೊಮ್ಮಾಯಿ ಉತ್ತಮ ಕೆಲಸ ಮಾಡುತ್ತಿದ್ದಾರೆ. ಮುಖ್ಯಮಂತ್ರಿಯಾಗಿ ಅವರೇ ಮುಂದುವರಿಯಬೇಕು ಎಂದು ರಾಜ್ಯದ ಜನರೂ ಬಯಸಿದ್ದಾರೆ' ಎಂದರು.

ಮುಂಬರುವ ವಿಧಾನಸಭಾ ಚುನಾವಣೆಯನ್ನು ಅವರ ನೇತೃತ್ವದಲ್ಲಿ ಎದುರಿಸಲಾಗುವುದು ಮತ್ತು ಮುಂದಿನ ಮುಖ್ಯಮಂತ್ರಿ ಅವರೇ ಆಗಲಿದ್ದಾರೆ ಎಂದರು.

ಇದಕ್ಕೆ ಧ್ವನಿಗೂಡಿಸಿರುವ ಕಂದಾಯ ಸಚಿವ ಆರ್.ಅಶೋಕ, ಯಾವುದೇ ಕಾರಣಕ್ಕೂ ಬೊಮ್ಮಾಯಿ ಬದಲಾವಣೆ ಇಲ್ಲ. ನಾಯಕತ್ವ ಬದಲಾವಣೆ ಎಂಬುದು ಊಹಾಪೋಹಗಳು. ಆದ್ದರಿಂದ ಯಾರೂ ಮುಖ್ಯಮಂತ್ರಿ ಬದಲಾವಣೆ ಕನಸು ಕಾಣುವ ಅಗತ್ಯವಿಲ್ಲ. ಬೊಮ್ಮಾಯಿ ಅವರಿಗೆ ಕೇಂದ್ರ ನಾಯಕರ ಆಶೀರ್ವಾದ ಇದೆ ಎಂದರು.



ಆದಷ್ಟು ಬೇಗ ಅಂದರೆ 2–3 ದಿನಗಳಲ್ಲೇ ಸಂಪುಟ ವಿಸ್ತರಣೆ ಆಗುವ ವಿಶ್ವಾಸವಿದೆ. ಅಮಿತ್ ಶಾ ಸಂಪುಟ ವಿಸ್ತರಣೆಯ ಅಂತಿಮ ತೀರ್ಮಾನ ತೆಗೆದುಕೊಂಡೇ ಬಂದಿದ್ದಾರೆ

ಬಿ.ಎಸ್.ಯಡಿಯೂರಪ್ಪ
ಶಾಸಕ

ಪಿಎಸ್‌ಐ ಅಕ್ರಮ: ತಂದೆ–ಮಗ ಸೇರಿ ಮೂವರ ಸೆರೆ

ಪ್ರಜಾವಾಣಿ ವಾರ್ತೆ

ಕಲಬುರಗಿ: ಪಿಎಸ್‌ಐ ನೇಮಕಾತಿಗೆ ಸಂಬಂಧಿಸಿದಂತೆ ನಗರದ ಮತ್ತೊಂದು ಪರೀಕ್ಷಾ ಕೇಂದ್ರವಾದ ಹೈದರಾಬಾದ್ ಕರ್ನಾಟಕ ಶಿಕ್ಷಣ ಸಂಸ್ಥೆಯ ಎಂ.ಎಸ್. ಇರಾನಿ ಪದವಿ ಕಾಲೇಜಿನಲ್ಲಿ ಅಕ್ರಮ ನಡೆದಿರುವುದು ವಿಚಾರಣೆ ವೇಳೆ ಗೊತ್ತಾಗಿದ್ದು, ಪ್ರಕರಣ ಸಂಬಂಧ ಮೂವರನ್ನು ಬಂಧಿಸಿದ್ದಾಗಿ ಸಿಐಡಿ ಮೂಲಗಳು ತಿಳಿಸಿವೆ.

ಏತನ್ಮಧ್ಯೆ, ನಗರದ ಮತ್ತೊಂದು ಪರೀಕ್ಷಾ ಕೇಂದ್ರದಲ್ಲಿಯೂ ಅಕ್ರಮ ನಡೆದಿರುವ ಶಂಕೆ ವ್ಯಕ್ತವಾಗಿದ್ದು, ಆ ನಿಟ್ಟಿನಲ್ಲಿಯೂ ಸಿಐಡಿ ಅಧಿಕಾರಿಗಳು ಮಾಹಿತಿ ಸಂಗ್ರಹಿಸುತ್ತಿದ್ದಾರೆ.

ಎಂ.ಎಸ್. ಇರಾನಿ ಕಾಲೇಜಿನ ಪರೀಕ್ಷಾ ಕೇಂದ್ರದಲ್ಲಿ ನಡೆದ ಅಕ್ರಮದ ಕುರಿತು ತನಿಖಾಧಿಕಾರಿ ಪ್ರಕಾಶ ರಾಠೋಡ ಇಲ್ಲಿಯ ಸ್ಟೇಶನ್ ಬಜಾರ್ ಠಾಣೆಯಲ್ಲಿ ರುದ್ರಗೌಡ ಡಿ. ಪಾಟೀಲ, ಮಧ್ಯವರ್ತಿ ಚಂದ್ರಕಾಂತ ಕುಲಕರ್ಣಿ, ಅಭ್ಯರ್ಥಿ ಪ್ರಭು, ಅವರ ತಂದೆ ಶರಣಪ್ಪ ವಿರುದ್ಧ ಪ್ರಕರಣ ದಾಖಲಿಸಿದ್ದರು.

ರುದ್ರಗೌಡ ಪಾಟೀಲ ಈಗಾಗಲೇ ಸಿಐಡಿ ವಶದಲ್ಲಿದ್ದು, ಅವರ ಲೆಕ್ಕಪರಿಶೋಧಕ ನಗರದ ಚಂದ್ರಕಾಂತ ಕುಲಕರ್ಣಿ, ಪ್ರಭು ಹಾಗೂ ಶರಣಪ್ಪ ಅವರನ್ನು ಮಂಗಳವಾರ ಬೆಳಿಗ್ಗೆ ಬಂಧಿಸಲಾಗಿದೆ. ಈ ಮೂವರನ್ನು ಒಂದು ದಿನದ ಮಟ್ಟಿಗೆ ನ್ಯಾಯಾಲಯವು ಸಿಐಡಿ ಕಸ್ಟಡಿಗೆ ನೀಡಿದೆ.

ಇರಾನಿ ಕಾಲೇಜಿನ ಕೇಂದ್ರದಲ್ಲಿ ಪರೀಕ್ಷೆ ಬರೆದಿದ್ದ ಪ್ರಭು ಅವರನ್ನು ಸಿಐಡಿ ಅಧಿಕಾರಿಗಳು ಸೋಮವಾರ ಸಂಜೆ ವಶಕ್ಕೆ ಪಡೆದು ವಿಚಾರಣೆ ನಡೆಸಿದ್ದರು. ಪ್ರಭು ಪಿಎಸ್‌ಐ ನೇಮಕ ಪರೀಕ್ಷೆಯಲ್ಲಿ ಆಯ್ಕೆಯಾಗಿದ್ದರು. ಅಕ್ರಮದ ಮೂಲಕ ಆಯ್ಕೆಯಾಗಲು ₹ 50 ಲಕ್ಷವನ್ನು ರುದ್ರಗೌಡ ಪಾಟೀಲಗೆ ನೀಡಲಾಗಿತ್ತು ಎಂದು ಹೇಳಿಕೆ ನೀಡಿದ್ದರು. ಇದರಲ್ಲಿ ಮಧ್ಯವರ್ತಿಯಾಗಿ ರುದ್ರಗೌಡರ ಲೆಕ್ಕಪರಿಶೋಧಕ ಚಂದ್ರಕಾಂತ ಕುಲಕರ್ಣಿ ಕೆಲಸ ಮಾಡಿದ್ದರು ಎಂದು ತನಿಖೆ ವೇಳೆ ಬಹಿರಂಗವಾಗಿದೆ ಎಂದು ಮೂಲಗಳು ತಿಳಿಸಿವೆ.

8ನೇ ಪುಟ ನೋಡಿ

ಬಿಡಿಎ ಅಕ್ರಮ: ಅಧಿಕಾರಿಗಳ ವಿರುದ್ಧ ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ಸ್ವಾಧೀನಪಡಿಸಿಕೊಂಡ ಜಮೀನುಗಳಲ್ಲಿದ್ದ ಕೊಳೆಗೇರಿ ನಿವಾಸಿಗಳ ಹೆಸರಿನಲ್ಲಿ ಅಕ್ರಮವಾಗಿ ನಿವೇಶನಗಳನ್ನು ಹಂಚಿಕೆ ಮಾಡಿರುವ ಆರೋಪದ ಮೇಲೆ ನಿವೃತ್ತ ಕೆಎಎಸ್ ಅಧಿಕಾರಿ ಎಚ್.ಆರ್. ಜಗದೀಶ್ ಹಾಗೂ ಕೆಎಎಸ್ ಅಧಿಕಾರಿ ರೂಪಾ ವಿರುದ್ಧ ಭ್ರಷ್ಟಾಚಾರ ನಿಗ್ರಹ ದಳ (ಎಸಿಬಿ) ಎಫ್‌ಐಆರ್ ದಾಖಲಿಸಿದೆ.

ಜಗದೀಶ್ ಬಿಡಿಎ ಉಪ ಕಾರ್ಯದರ್ಶಿ–2ರ ಹುದ್ದೆಯಲ್ಲಿದ್ದರು. ರೂಪಾ ಬಿಡಿಎ ಉಪ ಕಾರ್ಯದರ್ಶಿ–3 ಹುದ್ದೆಯಲ್ಲಿ ಕಾರ್ಯನಿರ್ವಹಿಸಿದ್ದರು. ಈ ಅವಧಿಯಲ್ಲಿ ಸ್ವಾಧೀನಪಡಿಸಿಕೊಂಡ ಕೊಳೆಗೇರಿ ನಿವಾಸಿಗಳಲ್ಲಿ ಹಲವರಿಗೆ ಒಂದಕ್ಕಿಂತ ಹೆಚ್ಚು ನಿವೇಶನಗಳನ್ನು ಪರಿಹಾರ ರೂಪದಲ್ಲಿ ಮಂಜೂರು ಮಾಡಿರುವ ಆರೋಪ ಇವರ ಮೇಲಿದೆ.

9ನೇ ಪುಟ ನೋಡಿ

ಅಹಮದಾಬಾದಿನಲ್ಲಿ ಐಪಿಎಲ್ ಫೈನಲ್

ನವದೆಹಲಿ (ಪಿಟಿಐ): ಈ ಸಲದ ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯ ಫೈನಲ್ ಪಂದ್ಯವು ಇದೇ 29ರಂದು ಅಹಮದಾಬಾದಿನಲ್ಲಿ ಆಯೋಜನೆಗೊಳ್ಳಲಿದೆ.

ಮೇ 23 ರಿಂದ 28ರವರೆಗೆ ಮಹಿಳೆಯರ ಟಿ20 ಚಾಲೆಂಜ್ ಪ್ರದರ್ಶನ ಟೂರ್ನಿಯು ಪುಣೆಯಲ್ಲಿ ನಡೆಯಲಿದೆ ಎಂದು ಬಿಸಿಸಿಐ ತಿಳಿಸಿದೆ.

'24ರಂದು ಐಪಿಎಲ್ ಟೂರ್ನಿಯ ಮೊದಲ ಕ್ವಾಲಿಫೈಯರ್ ಮತ್ತು 25ರಂದು ಎಲಿಮಿನೇಟರ್ ಪಂದ್ಯಗಳು ಈಡನ್ ಗಾರ್ಡನ್‌ನಲ್ಲಿ ನಡೆಯಲಿವೆ. 27ರಂದು ಎರಡನೇ ಕ್ವಾಲಿಫೈಯರ್ ಮತ್ತು 29ರಂದು ಫೈನಲ್ ಪಂದ್ಯಗಳು ಅಹಮದಾಬಾದಿನ ನರೇಂದ್ರ ಮೋದಿ ಕ್ರಿಕೆಟ್ ಕ್ರೀಡಾಂಗಣದಲ್ಲಿ ನಡೆಯಲಿವೆ' ಎಂದು ಬಿಸಿಸಿಐ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಮಹಿಳೆಯರ ಟಿ20 ಚಾಲೆಂಜ್ ಟೂರ್ನಿಯು ಲಖನೌನಲ್ಲಿ ನಡೆಯಲಿವೆ ಎಂದು ಹೋದ ತಿಂಗಳು ನಡೆದಿದ್ದ ಅಪೆಕ್ಸ್ ಕೌನ್ಸಿಲ್ ಸಭೆಯ ನಂತರ ಅಧ್ಯಕ್ಷ ಸೌರವ್ ಗಂಗೂಲಿ ತಿಳಿಸಿದ್ದರು.

ಒಳ ಪುಟಗಳು



ಚಿನಕುರಳಿ

ಪ್ರಕಾಶ್ ಶೆಟ್ಟಿ



ಕೊವೊವ್ಯಾಕ್ಸ್ ಲಸಿಕೆ ದರ ₹ 225ಕ್ಕೆ ಇಳಿಕೆ

ನವದೆಹಲಿ (ಪಿಟಿಐ): ಖಾಸಗಿ ಲಸಿಕಾ ಕೇಂದ್ರಗಳಲ್ಲಿ 12ರಿಂದ 17 ವಯಸ್ಸಿನ ಮಕ್ಕಳಿಗೆ ನೀಡುವ 'ಕೊವೊವ್ಯಾಕ್ಸ್' ಲಸಿಕೆಯ ಪ್ರತಿ ಡೋಸ್‌ನ ದರವನ್ನು ₹ 900 ರಿಂದ ₹ 225ಕ್ಕೆ ಇಳಿಸಿರುವುದಾಗಿ ಸೀರಂ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾ (ಎಸ್‌ಐಐ) ಮಂಗಳವಾರ ತಿಳಿಸಿದೆ. 9

'ಕೋವಿಡ್ ಹೆಚ್ಚಳ ಹೊಸ ಅಲೆಯ ಸೂಚಕವಲ್ಲ'

ನವದೆಹಲಿ (ಪಿಟಿಐ): ಕಳೆದ ಕೆಲವು ವಾರಗಳಿಂದ ನವದೆಹಲಿಯಲ್ಲಿ ಕೋವಿಡ್ ಪ್ರಕರಣಗಳ ಸಂಖ್ಯೆ ಮತ್ತು ಪಾಸಿಟಿವಿಟಿ ದರ ಹೆಚ್ಚಾಗಿರುವುದು ಸಾಂಕ್ರಾಮಿಕದ ಹೊಸ ಅಲೆಯ ಸೂಚಕವಲ್ಲ ಎಂದು ತಜ್ಞರು ಹೇಳಿದ್ದಾರೆ. 9

ಎಲ್‌ಐಸಿ: ₹ 5 ಸಾವಿರ ಕೋಟಿ ಹೂಡಿಕೆ

ನವದೆಹಲಿ (ಪಿಟಿಐ): ಭಾರತೀಯ ಜೀವ ವಿಮಾ ನಿಗಮವು (ಎಲ್‌ಐಸಿ) ಆರಂಭಿಕ ಹೂಡಿಕೆದಾರರಿಂದ ₹ 5,627 ಕೋಟಿ ಬಂಡವಾಳ ಸಂಗ್ರಹಿಸಿರುವುದಾಗಿ ಮಂಗಳವಾರ ತಿಳಿಸಿದೆ. ಎಲ್‌ಐಸಿಯ ಆರಂಭಿಕ ಸಾರ್ವಜನಿಕ ಕೊಡುಗೆಯ (ಐಪಿಒ) ಮುನ್ನ ಈ ಹೂಡಿಕೆ ಆಗಿದೆ. ಆರಂಭಿಕ ಹೂಡಿಕೆದಾರರಿಗೆ 5.92 ಕೋಟಿ ಷೇರುಗಳನ್ನು ಮೀಸಲಿಡಲಾಗಿತ್ತು. 10

ಶ್ರಮದಾನ: ಶೌಚಾಲಯ ಸ್ವಚ್ಛಗೊಳಿಸಿದ ಪೊಲೀಸರು

ಬೆಂಗಳೂರು: ಬಸವ ಜಯಂತಿ ಹಾಗೂ ರಂಜಾನ್ ಹಬ್ಬವನ್ನು ವಿಶೇಷವಾಗಿ ಆಚರಿಸಿದ ಪೊಲೀಸರು, ಸಾರ್ವಜನಿಕ ಶೌಚಾಲಯ ಸ್ವಚ್ಛಗೊಳಿಸುವ ಮೂಲಕ ಶ್ರಮದಾನ ಮಾಡಿದರು.

ಸುಮನಹಳ್ಳಿ ಹಾಗೂ ಕೆಂಗುಂಟೆ ಬಳಿ ಇರುವ ಬಿಬಿಎಂಪಿ ಸಾರ್ವಜನಿಕ ಶೌಚಾಲಯಗಳನ್ನು ಪೊಲೀಸರು ಸ್ವಚ್ಛಗೊಳಿಸಿದರು.

ವಿಧಾನಸೌಧ ಭದ್ರತಾ ವಿಭಾಗದ ಪಿಎಸ್ಐ ಶಾಂತಪ್ಪ ಜಡೆಮ್ಮನವರ ನೇತೃತ್ವದಲ್ಲಿ ಹಮ್ಮಿಕೊಳ್ಳಲಾಗಿದ್ದ ಶ್ರಮದಾನಕ್ಕೆ ಪೊಲೀಸ್ ಸಿಬ್ಬಂದಿ ಕೈ ಜೋಡಿಸಿದ್ದರು.

ಬೆಳಿಗ್ಗೆ ಶೌಚಾಲಯಕ್ಕೆ ಬಂದಿದ್ದ ಪಿಎಸ್ಐ ಹಾಗೂ ಸಿಬ್ಬಂದಿ, ಬ್ರೆಷ್ ಹಾಗೂ ಇತರೆ ಸಲಕರಣೆ ಹಿಡಿದು ಶೌಚಾಲಯ ಸ್ವಚ್ಛ ಮಾಡಿದರು.

‘ಧಾರ್ಮಿಕ ಸೌಹಾರ್ದ ಮತ್ತು ಶ್ರಮ ಸಂಸ್ಕೃತಿಯ ಮೇರು ಪರ್ವತಗಳಾಗಿರುವ ಪೌರ ಕಾರ್ಮಿಕರನ್ನು ದೃಷ್ಟಿಯಲ್ಲಿ ಇಟ್ಟುಕೊಂಡು ಈ ಕಾರ್ಯಕ್ರಮ ಆಯೋಜಿಸಲಾಗಿದೆ' ಎಂದೂ ಶಾಂತಪ್ಪ ತಿಳಿಸಿದರು.



ಸುಮನಹಳ್ಳಿ ಬಳಿ ಬಿಬಿಎಂಪಿ ಸಾರ್ವಜನಿಕ ಶೌಚಾಲಯವನ್ನು ಪೊಲೀಸರು ಸ್ವಚ್ಛಗೊಳಿಸಿದರು



ಈದ್ ಉಲ್ ಫಿತ್ರ್ ಅಂಗವಾಗಿ ಮೈಸೂರು ರಸ್ತೆಯಲ್ಲಿರುವ ಈದ್ಗಾ ಮೈದಾನದಲ್ಲಿ ಮಂಗಳವಾರ ಸಾಮೂಹಿಕ ಪ್ರಾರ್ಥನೆಯಲ್ಲಿ ಪಾಲ್ಗೊಂಡಿದ್ದ ಮುಸ್ಲಿಂ ಸಮುದಾಯದವರು –ಪ್ರಜಾವಾಣಿ ಚಿತ್ರಗಳು /ಅನೂಪ್ ರಾಘ. ಟಿ.

ಸಹಸ್ರಾರು ಮುಸ್ಲಿಮರಿಂದ ಸಾಮೂಹಿಕ ಪ್ರಾರ್ಥನೆ

ಸಂಭ್ರಮದ ‘ಈದ್ ಉಲ್ ಫಿತ್ರ್’



ಈದ್ ಉಲ್ ಫಿತ್ರ್ ಅಂಗವಾಗಿ ಈದ್ಗಾ ಮೈದಾನದಲ್ಲಿ ಚಿಣ್ಣರು ಪರಸ್ಪರ ಶುಭಾಶಯ ಕೋರಿದರು.

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಸ್ಲಿಂ ಸಮುದಾ ಯದವರು ‘ಈದ್ ಉಲ್ ಫಿತ್ರ್’ ಹಬ್ಬವನ್ನು ಮಂಗಳವಾರ ಸಂಭ್ರಮದಿಂದ ಆಚರಿಸಿದರು.

ಒಂದು ತಿಂಗಳ ಉಪವಾಸ ಆಚರಿಸಿದ್ದ ಮುಸ್ಲಿಮರು, ಚಂದ್ರದರ್ಶನದ ಬಳಿಕ ಆಹಾರ ಸ್ವೀಕರಿಸಿ ವ್ರತ ಅಂತ್ಯಗೊಳಿಸಿದರು. ಕೋವಿಡ್ ಕಾರಣ ದಿಂದಾಗಿ ಕಳೆದ ವರ್ಷ ಸಾಮೂಹಿಕ ಪ್ರಾರ್ಥನೆಗೆ ನಿರ್ಬಂಧ ಇದ್ದಿದ್ದರಿಂದ ತಮ್ಮ ಮನೆಗಳಲ್ಲೇ ಪ್ರಾರ್ಥನೆ ಮಾಡುವ ಮೂಲಕ ಸರಳವಾಗಿ ಆಚರಿಸಿದ್ದರು.

ಈ ವರ್ಷ ಯಾವುದೇ ಅಡ್ಡಿ ಆತಂಕವಿಲ್ಲದೆ ಹಬ್ಬದ ಸಂಭ್ರಮ ಎಲ್ಲೆಡೆ ಮನೆಮಾಡಿತ್ತು. ಸಮುದಾಯದವರು ಮುಂಜಾನೆಯೇ ಹೊಸಬಟ್ಟೆಗಳನ್ನು ಧರಿಸಿ, ಪ್ರಾರ್ಥನೆಗಾಗಿ ಪ್ರಾರ್ಥನಾ ಮಂದಿರಗಳತ್ತ ತೆರಳಿದರು.

ಚಾಮರಾಜಪೇಟೆಯ ಈದ್ಗಾ ಮೈದಾನ, ವಿಲ್ಸನ್ ಗಾರ್ಡನ್‌ನ ರೆಡ್ ಫೋರ್ಟ್ ಮೈದಾನ, ಶಿವಾಜಿನಗರ, ಜೆ.ಪಿ.ಪಾರ್ಕ್ ಆಟದ ಮೈದಾನ ಹಾಗೂ ವಿವಿಧ ಮಸೀದಿಗಳಲ್ಲಿ ಸಾಮೂಹಿಕ ಪ್ರಾರ್ಥನೆ ಮಾಡಿದರು. ಬಳಿಕ ಪರಸ್ಪರ ಆಲಂಗಿಸಿಕೊಂಡು ಶುಭಾಶಯ ಕೋರಿದರು.

ದಾನಧರ್ಮ ಈ ಹಬ್ಬದ ವಿಶೇಷ. ಬಡವರಿಗೆ ಹಣ್ಣುಹಂಪಲು, ಧಾನ್ಯಗಳನ್ನು ದಾನ ನೀಡಲಾಯಿತು.

‘ಈ ಬಾರಿ ಈದ್ ಉಲ್ ಫಿತ್ರ್ ಮತ್ತು ಬಸವ ಜಯಂತಿ ಒಂದೇ ದಿನ ನಿಗದಿಯಾಗಿದ್ದರಿಂದ ಸಾಮರಸ್ಯದ ಸಂದೇಶದೊಂದಿಗೆ ಹಬ್ಬ ಆಚರಿಸಿದೆವು. ಧರ್ಮಗುರುಗಳಿಂದ ಉಪನ್ಯಾಸ ಏರ್ಪಡಿಸಲಾಗಿತ್ತು. ಸಾಮೂಹಿಕ ಪ್ರಾರ್ಥನೆ ಸಲ್ಲಿಸಿದೆವು. ಮತ್ತಿಕೆರೆಯಲ್ಲಿ ಹಿಂದೂಗಳು ಹಮ್ಮಿಕೊಂಡಿದ್ದ ಬಸವ ಜಯಂತಿ ಸಮಾರಂಭಕ್ಕೆ ತೆರಳಿ, ಹಿಂದೂ ಬಾಂಧವರಿಗೆಲ್ಲ ಖರ್ಜೂರ ವಿತರಿಸಿ ಹಬ್ಬಕ್ಕೆ ಶುಭ ಕೋರಿದೆವು' ಎಂದು ಮತ್ತಿಕೆರೆಯ ‘ಮಸ್ಜಿದ್ ಎ ತಾಹಾ'ದ ಕೋಶಾಧ್ಯಕ್ಷ ಸಮಿವುಲ್ಲಾ ಖಾನ್ ತಿಳಿಸಿದರು.

ಸುದ್ದಿ 2 ನಿಮಿಷ

ಮಾಹಿತಿ ಕಲೆ ಹಾಕುವುದರಲ್ಲಿ ತಪ್ಪೇನಿದೆ: ಡಾ.ಪರಮೇಶ್ವರ ಪ್ರಶ್ನೆ

ಮಡಿಕೇರಿ: ‘ಪಿಎಸ್ಐ ನೇಮಕಾತಿ ಹಗರಣದಲ್ಲಿ ಸಚಿರೊಬ್ಬರ ಸಂಬಂಧಿಕರೂ ಇದ್ದಾರೆ ಎನ್ನುವುದು ಗೊತ್ತಾಗಿದೆ. ವಿರೋಧ ಪಕ್ಷದವರು ಸ್ವಯಂ ತನಿಖೆ ನಡೆಸಿ ಮಾಹಿತಿ ಕಲೆ ಹಾಕುವುದರಲ್ಲಿ ತಪ್ಪೇನಿದೆ' ಎಂದು ಕಾಂಗ್ರೆಸ್ ಮುಖಂಡ ಡಾ.ಜಿ.ಪರಮೇಶ್ವರ ಪ್ರಶ್ನಿಸಿದರು.

ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿ, ‘ನೇಮಕಾತಿಯಲ್ಲಿ ಅಕ್ರಮ ಆಗಿದೆ ಎನ್ನುವುದು ಸಾಬೀತಾಗಿದೆ. ಸದ್ಯ ಪ್ರಕರಣಕ್ಕೆ ಸಂಬಂಧಿಸಿದಂತೆ ತನಿಖೆ ನಡೆಯುತ್ತಿದೆ. ಆದರೆ, ಈ ಅಕ್ರಮದಲ್ಲಿ ಯಾರೆಲ್ಲಾ ಭಾಗಿಯಾಗಿದ್ದಾರೆ. ಸಚಿವರು ಅಥವಾ ಶಾಸಕರ ಪಾತ್ರವೂ ಇದೆಯೇ ಎಂಬ ವಿಷಯಗಳು ಬೆಳಕಿಗೆ ಬರಲಿವೆ. ಅದಕ್ಕಾಗಿಯೇ ತನಿಖೆ ನಡೆಯುತ್ತಿದೆ' ಎಂದರು.

‘ಸಮ್ಮಿಶ್ರ ಸರ್ಕಾರದ ಅವಧಿಯಲ್ಲಿ ಸಚಿವ ಎಂ.ಟಿ.ಬಿ ನಾಗರಾಜ್ ಕಾಂಗ್ರೆಸ್ ಬಿಡುತ್ತಾರೆ ಎನ್ನುವ ವಿಷಯ ಗೊತ್ತಾದಾಗ ನಾನು, ಡಿ.ಕೆ.ಶಿವಕುಮಾರ ಅವರ ಮನೆಗೆ ಹೋಗಿ ಮನವೊಲಿಸುವ ಪ್ರಯತ್ನ ಮಾಡಿದೆವು. ಆದರೂ, ನಾಗರಾಜ್ ನಮ್ಮ ಮಾತು ಕೇಳಲಿಲ್ಲ. ಇದೀಗ ಕಾಂಗ್ರೆಸ್ ಬಿಟ್ಟಿರುವುದಕ್ಕೆ ಪಶ್ಚಾತ್ತಾಪ ಪಡುತ್ತಿದ್ದಾರೆ' ಎಂದು ಹೇಳಿದರು.

ಬಡಜನರಿಗೆ ಸೌಲಭ್ಯಗಳ ವಿತರಣೆ



ಯಲಹಂಕ: ಬಿಜೆಪಿಯ ಬ್ಯಾಟರಾಯನಪುರ ನಗರಮಂಡಲ ವತಿಯಿಂದ ಹೆಗಡೆನಗರದಲ್ಲಿ ನಡೆದ ಕಾರ್ಯಕ್ರಮದಲ್ಲಿ ಬಿಜೆಪಿ ಮುಖಂಡ ಕೆ.ಎ.ಮುನೀಂದ್ರಕುಮಾರ್ ನೇತೃತ್ವದಲ್ಲಿ ವಿವಿಧ ವರ್ಗಗಳ ಬಡಜನರಿಗೆ ಹಲವು ಸೌಲಭ್ಯಗಳನ್ನು ವಿತರಿಸಲಾಯಿತು.

ಬೀದಿಬದಿ ವ್ಯಾಪಾರಿಗಳಿಗೆ 100 ತಳ್ಳುಗಾಡಿ, ಅಂಗನವಾಡಿ ಮತ್ತು ಆಶಾ ಕಾರ್ಯಕರ್ತೆಯರಿಗೆ ಬೆಡ್ ಶೀಟ್, ಸೀರೆ ಹಾಗೂ ಪ್ಲಾಸ್ಕ್ ಒಳಗೊಂಡ 250 ಕಿಟ್, 250 ಮಹಿಳೆಯರಿಗೆ ಹೊಲಿಗೆಯಂತ್ರ, ಸವಿತಾ ಸಮಾಜದ 25 ಮಂದಿಗೆ ಚೇರ್, ಕ್ರಿಕೆಟ್ ಆಟಗಾರರಿಗೆ 100 ಕ್ರಿಕೆಟ್ ಕಿಟ್ ಮತ್ತು ಟೀ-ಶರ್ಟ್ ಹಾಗೂ ದ್ವಿಚಕ್ರವಾಹನ ಸವಾರರಿಗೆ 250 ಹೆಲ್ಮೆಟ್, ದಿನಪತ್ರಿಕೆ ಮತ್ತು ಹಾಲು ವಿತರಕರಿಗೆ ಟೀ-ಶರ್ಟ್ ಮತ್ತು ಜರ್ಕಿನ್ ವಿತರಿಸಲಾಯಿತು.

ಕಷ್ಟದಲ್ಲಿರುವ ಕಾರ್ಯಕರ್ತರಿಗೆ ನೆರವಾಗುವ ಉದ್ದೇಶದಿಂದ ಆರಂಭಿಸಿರುವ 'ಕಾರ್ಯಕರ್ತರ ಕ್ಷೇಮನಿಧಿ'ಗೆ ಇದೇ ಸಂದರ್ಭದಲ್ಲಿ ಚಾಲನೆ ನೀಡಲಾಯಿತು. ಕೆ.ಎ.ಮುನೀಂದ್ರಕುಮಾರ್ ಅವರು, ಆರಂಭಿಕ ದೇಣಿಗೆಯಾಗಿ ₹1 ಲಕ್ಷ ಮೌಲ್ಯದ ಚೆಕ್ ನೀಡಿದರು. ಕಾರ್ಯಕ್ರಮಕ್ಕೆ ಸಂಸದ ಡಿ.ವಿ.ಸದಾನಂದಗೌಡ ಚಾಲನೆ ನೀಡಿದರು.

ಈದ್: ಭಾರತ–ಪಾಕ್ ಯೋಧರ ಸಿಹಿ ವಿನಿಮಯ

ಪ್ರಜಾವಾಣಿ ವಾರ್ತೆ

ಜಮ್ಮು: ಇಲ್ಲಿನ ಅಂತರ ರಾಷ್ಟ್ರೀಯ ಗಡಿಯಲ್ಲಿನ ವಿವಿಧ ಗಡಿ ಚೌಕಿ(ಬಿಪಿಒ)ಗಳಲ್ಲಿ ಮಂಗಳವಾರ ಈದ್–ಉಲ್–ಫಿತ್ರ್ ಅಂಗವಾಗಿ ದೇಶದ ಗಡಿ ಭದ್ರತಾ ಪಡೆ (ಬಿಎಸ್ಎಫ್) ಸಿಬ್ಬಂದಿ ಹಾಗೂ ಪಾಕ್ ಯೋಧರು ಪರಸ್ಪರ ಸಿಹಿ ವಿನಿಮಯ ಮಾಡಿಕೊಂಡರು.

‘ಜಮ್ಮು ಪ್ರಾಂತ್ಯದ ಸಾಂಬಾ, ಕತುವಾ, ಆರ್.ಎಸ್.ಪುರ ಹಾಗೂ ಅಖ್ನೂರ್ ಸೆಕ್ಟರ್‌ನ ಎಲ್ಲ ಗಡಿ ಚೌಕಿಗಳಲ್ಲಿ ಗಡಿ ಭದ್ರತಾ ಪಡೆಗಳು (ಬಿಎಸ್ಎಫ್) ಹಾಗೂ ಪಾಕಿಸ್ತಾನದ ಯೋಧರು ಸೌಹಾರ್ದಯುತವಾಗಿ ಪರಸ್ಪರ ಸಿಹಿ ವಿನಿಮಯ ಮಾಡಿಕೊಂಡರು' ಎಂದು ಬಿಎಸ್ಎಫ್‌ನ ಡಿಐಜಿ ಪಿ.ಎಸ್. ಸಂದು ತಿಳಿಸಿದರು.

‘ಬಿಎಸ್ಎಫ್ ಗಡಿಯಲ್ಲಿ ಶಾಂತಿಯುತ ಮತ್ತು ಸೌಹಾರ್ದ ವಾತಾವರಣ ಕಾಪಾಡುವುದರ ಜತೆಗೆ ಗಡಿ ಪ್ರದೇಶದಲ್ಲಿ ಪ್ರಾಬಲ್ಯವನ್ನು ಹೊಂದಿದ್ದು, ಇಂತಹ ಕ್ರಮಗಳಿಂದ ಗಡಿಯಲ್ಲಿ ಎರಡು ಪಡೆಗಳ ನಡುವೆ ಶಾಂತಿಯುತ ವಾತಾವರಣ ಹಾಗೂ ಸೌಹಾರ್ದ ಸಂಬಂಧ ವೃದ್ಧಿಗೆ ಸಹಕಾರಿಯಾಗುತ್ತದೆ' ಎಂದು ಅವರು ಹೇಳಿದರು.

ನಗರದಲ್ಲಿ ಸಂಭ್ರಮದಿಂದ ಬಸವೇಶ್ವರರ ಜಯಂತಿ ಆಚರಣೆ

ವಿಶ್ವ ಗುರುವಿಗೆ ವಂದನೆ; ಸಾಮರಸ್ಯದ ಪ್ರತಿಪಾದನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾಯಕ ಯೋಗಿ ಜಗಜ್ಯೋತಿ ಬಸವೇಶ್ವರರ ಜಯಂತಿಯನ್ನು ನಗರದೆಲ್ಲೆಡೆ ಮಂಗಳವಾರ ಆಚರಿಸಲಾಯಿತು.

ಆಡುಗೋಡಿಯ ಪೊಲೀಸ್ ವಸತಿ ಸಮುಚ್ಚಯದಲ್ಲಿ ನೆಲೆಸಿರುವ ಮುಸ್ಲಿಮರು ಈದ್ ಉಲ್ ಫಿತ್ರ್ ಜೊತೆಗೆ ಬಸವ ಜಯಂತಿಯನ್ನೂ ಆಚರಿಸಿ ಸಾಮರಸ್ಯದ ಸಂದೇಶ ಸಾರಿದರು.

ಬೆಳಿಗ್ಗೆ ಮಸೀದಿಗೆ ತೆರಳಿ ಪ್ರಾರ್ಥನೆ ಸಲ್ಲಿಸಿದ್ದ ಪೊಲೀಸ್ ಸಿಬ್ಬಂದಿ, ಅಲ್ಲಿಂದ ಮರಳಿದ ಬಳಿಕ ವಸತಿಗೃಹದ ಆವರಣದಲ್ಲಿ ಬಸವೇಶ್ವರರ ಭಾವಚಿತ್ರವನ್ನಿಟ್ಟು ಪೂಜೆ ಸಲ್ಲಿಸಿದರು.

ವಿಜಯನಗರದ ವಚನ ಜ್ಯೋತಿ ಬಳಗದವರು ‘ಬಸವಣ್ಣನವರೊಡನೆ ಹೆಜ್ಜೆ ಹಾಕೋಣ ಬನ್ನಿ' ಎಂಬ ಕಾರ್ಯಕ್ರಮ ಆಯೋಜಿಸಿದ್ದರು. ಬೇಲಿಮಠದ ಶಿವರುದ್ರ ಸ್ವಾಮೀಜಿ,ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್‌ನ ಅಧ್ಯಕ್ಷ ಗೊ.ರು.ಚನ್ನಬಸಪ್ಪ ಭಾಗವಹಿಸಿದ್ದರು.



ಮುಸ್ಲಿಂ ಸಮುದಾಯಕ್ಕೆ ಸೇರಿದ ಪೊಲೀಸ್ ಸಿಬ್ಬಂದಿ, ಬಸವ ಜಯಂತಿ ಆಚರಿಸಿದರು. ಮೌಲಾಲಿ ಕೆ.ಆಲಗೂರ, ಜಲಾಲುದ್ದೀನ್ ದಲಾಲ್, ಮಹಿಬೂಬ್ ಮನಿಯಾರ, ಮುಷಾಕ್ ಮುಲ್ಲಾ, ರಫೀಕ್ ನದಾಫ್, ಮಹಿಬೂಬ್ ರಾಯಚೂರು, ಇರ್ಫಾನ್, ಅಬೂಬಕರ್ ಹಾಗೂ ಮಕ್ಕಳು ಇದ್ದರು.

ಬಸವೇಶ್ವರನಗರದ ಬಸವ ಬಳಗವು ಶಿವನಗರದ ಸಿದ್ಧಗಂಗಾ ಕಲ್ಯಾಣ ಮಂಟಪದಲ್ಲಿ ಏರ್ಪಡಿಸಿದ್ದ ಸಮಾರಂಭದಲ್ಲಿ ರಾಜಾಜಿನಗರ ಶಾಸಕ ಎಸ್.ಸುರೇಶ್‌ಕುಮಾರ್, ಶಿವಬಸವ ಸ್ವಾಮೀಜಿ ಹಾಗೂ ವೀರಶೈವ ಅಭಿವೃದ್ಧಿ ಮಂಡಳಿ ಅಧ್ಯಕ್ಷ ಬಿ.ಎಸ್. ಪರಮಶಿವಯ್ಯ ಅವರು ಬಸವೇಶ್ವರರ ಪುತ್ಥಳಿಗೆ ಮಾಲಾರ್ಪಣೆ ಮಾಡಿದರು.

ಹಂಪಿ ನಗರದಲ್ಲಿ ನಾಗರಿಕರಿಗೆ ಪಾನಕ ಹಾಗೂ ಮಜ್ಜಿಗೆ ವಿತರಿಸಲಾಯಿತು. ವಿಲ್ಸನ್‌ಗಾರ್ಡನ್‌ನ ಮಾರುತಿ ವಿದ್ಯಾಲಯ, ಜಯಕರ್ನಾಟಕ ಸಂಘಟನೆಯ ಕೇಂದ್ರ ಕಚೇರಿಯಲ್ಲೂ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ರಾಜಾಜಿನಗರ ಕನ್ನಡ ಸಂಘದ ವತಿಯಿಂದಲೂ ಜಯಂತಿ ಏರ್ಪಡಿಸಲಾಗಿತ್ತು. ಕೆ.ಆರ್.ಪುರದ ರೆಡ್ಡಿ ಪಾಳ್ಯದಲ್ಲಿ ಆಯೋಜಿಸಿದ್ದ ಸಮಾರಂಭದಲ್ಲಿ ನಗರಾಭಿವೃದ್ಧಿ ಸಚಿವ ಬೈರತಿ ಬಸವರಾಜು ಅವರು ಬಸವಣ್ಣನವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿದರು.

ಮಹಾಲಕ್ಷ್ಮಿ ಲೇಔಟ್ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ನಾಗಪುರದಲ್ಲಿ ನಡೆದ ಕಾರ್ಯಕ್ರಮದಲ್ಲಿ ಅಬಕಾರಿ ಸಚಿವ ಕೆ.ಗೋಪಾಲಯ್ಯ ಭಾಗವಹಿಸಿದ್ದರು.

ಗೋವಿಂದರಾಜನಗರ ಕ್ಷೇತ್ರದ ದಾಸರಹಳ್ಳಿ ವಾರ್ಡ್‌ನಲ್ಲಿ ಹಮ್ಮಿಕೊಳ್ಳಲಾಗಿದ್ದ ಕಾರ್ಯಕ್ರಮದಲ್ಲಿ, ಬಸವೇಶ್ವರರ ಪುತ್ಥಳಿಗೆ ವಸತಿ ಸಚಿವ ವಿ.ಸೋಮಣ್ಣ ಪುಷ್ಪ ನಮನ ಸಲ್ಲಿಸಿದರು.

‘ಬಸವಣ್ಣನವರ ಸ್ಮರಣಾರ್ಥ ದಾಸರಹಳ್ಳಿಯಲ್ಲಿ ಬಸವ ವನ ಸ್ಥಾಪಿಸಿದ್ದೇವೆ. ಅವರ ಜೀವನ ಚರಿತ್ರೆ ಸಾರುವ ಚಿತ್ರಗಳು ಹಾಗೂ ವಚನಗಳನ್ನು ಅಲ್ಲಿ ಹಾಕುವ ವ್ಯವಸ್ಥೆ ಮಾಡಿದ್ದೇವೆ' ಎಂದರು.

ನಾಳೆ ವಾಹನಗಳ ಹರಾಜು

ಬೆಂಗಳೂರು: ಕಾಡುಗೋಡಿ ಠಾಣೆಯಲ್ಲಿ ವಾರಸುದಾರರಿಲ್ಲದ 41 ವಾಹನಗಳ ಬಹಿರಂಗ ಹರಾಜು ಪ್ರಕ್ರಿಯೆ ಮೇ 5ರಂದು ಜಕ್ಕರಾಯನ ಕೆರೆಯ ಆವರಣದಲ್ಲಿ ನಡೆಯಲಿದೆ.

ಸಾರ್ವಜನಿಕರಿಗೆ ಹರಾಜು ಪ್ರಕ್ರಿಯೆಯಲ್ಲಿ ಭಾಗವಹಿಸಲು ಅವಕಾಶ ಕಲ್ಪಿಸಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಚುನಾವಣೆ: ಎಐಎಫ್‌ಎಫ್ ಮೇಲೆ ಒತ್ತಡ

ಬೆಂಗಳೂರು: ಚುನಾವಣೆ ನಡೆಸುವ ಕುರಿತು ಒತ್ತಡಲ್ಲಿರುವ ಅಖಿಲ ಭಾರತ ಫುಟ್‌ಬಾಲ್ ಸಂಸ್ಥೆ (ಎಐಎಫ್‌ಎಫ್) ಮತ್ತಷ್ಟು ಸಂಕಷ್ಟಕ್ಕೆ ಸಿಲುಕಿದೆ. ಮೂವರು ಸದಸ್ಯರ ಸಮಿತಿಯ ವರದಿಯನ್ನಾಧರಿಸಿ ಕರ್ನಾಟಕ ರಾಜ್ಯ ಫುಟ್‌ಬಾಲ್ ಸಂಸ್ಥೆಯ ಅಧ್ಯಕ್ಷ ಎನ್.ಎ.ಹ್ಯಾರಿಸ್ ಸದಸ್ಯ ಸಂಸ್ಥೆಗಳಿಗೆ ಪತ್ರ ಬರೆದಿರುವುದು ಇದಕ್ಕೆ ಕಾರಣ.

ಸುಬ್ರತಾ ದತ್ತ ಮತ್ತು ಜೆಸಿಯಾ ಜೆಸಿಯ ವಿಲ್ಲವರೆಯರ್ ಕೂಡ ಹ್ಯಾರಿಸ್ ಅವರಿಗೆ ಕೈಜೋಡಿಸಿದ್ದಾರೆ. ಈ ಮೂವರನ್ನು ಚರ್ಚಿಸಿ ತೀರ್ಮಾನ ಕೈಗೊಳ್ಳಲು ಎಐಎಫ್‌ಎಫ್ ನೇಮಕ ಮಾಡಿತ್ತು. ಫೆಬ್ರುವರಿಯಲ್ಲಿ ನಡೆದ ಸಭೆಗೆ ಸಂಬಂಧಿಸಿ ಪತ್ರದಲ್ಲಿ ಪ್ರಮುಖ ಅಂಶಗಳನ್ನು ಪ್ರಸ್ತಾಪ ಮಾಡಲಾಗಿದೆ.

ಕೃಷಿ ಹೊಂಡಕ್ಕೆ ಬಿದ್ದ ಅಕ್ಕ–ತಂಗಿ ಸಾವು

ಗುಂಡ್ಲುಪೇಟೆ: ತಾಲ್ಲೂಕಿನ ಕಬ್ಬೇಪುರ ಗ್ರಾಮದ ರೇಚಪ್ಪ–ವೇದಾ ದಂಪತಿಯ ಪುತ್ರಿಯರಾದ, ಪೂಜಿತಾ (14) ಹಾಗೂ ಪುಣ್ಯ (12) ಜಮೀನಿನಲ್ಲಿ ಮಂಗಳವಾರ ಸೀಬೆಹಣ್ಣು ಕೀಳಲು ಹೋಗಿದ್ದಾಗ ಕೃಷಿ ಹೊಂಡಕ್ಕೆ ಬಿದ್ದು ಮೃತಪಟ್ಟರು.

ಜಹಾಂಗೀರ್‌ಪುರ: ಒಗ್ಗೂಡಿ ಈದ್ ಆಚರಿಸಿದ ಹಿಂದೂ–ಮುಸ್ಲಿಮರು

ನವದೆಹಲಿ(ಪಿಟಿಐ): ಕಳೆದ ತಿಂಗಳು ಕೋಮು ಸಂಘರ್ಷಕ್ಕೆ ಸಾಕ್ಷಿಯಾಗಿದ್ದ ಜಹಾಂಗೀರ್‌ಪುರದಲ್ಲಿ ಮಂಗಳವಾರ ಹಿಂದೂ–ಮುಸ್ಲಿಮರು ಒಟ್ಟಾಗಿ ಈದ್ ಆಚರಿಸುವ ಮೂಲಕ ಶಾಂತಿ ಮತ್ತು ಸಾಮರಸ್ಯದ ಸಂದೇಶ ಸಾರಿದರು.

ಎರಡೂ ಧರ್ಮೀಯರು ಪರಸ್ಪರ ಸಿಹಿ ಹಂಚಿ, ಹಬ್ಬದ ಶುಭಾಶಯ ಕೋರಿದರು. ಭದ್ರತೆ ನಿಯೋಜಿಸಲಾಗಿದ್ದ ಪೊಲೀಸ್ ಸಿಬ್ಬಂದಿಗೂ ಸ್ಥಳೀಯರು ಸಿಹಿ ವಿತರಿಸಿದರು.

‘ಕಳೆದ ತಿಂಗಳು ಜಹಾಂಗೀರಪುರದ ಜನತೆ ಪಾಲಿಗೆ ಕಷ್ಟಕರವಾಗಿತ್ತು. ಈದ್ ಉಲ್ ಫಿತ್ರ್ ಸಂದರ್ಭದಲ್ಲಿ ಕುಶಲ್ ಚೌಕದಲ್ಲಿ ಎರಡೂ ಧರ್ಮದವರು ಸೇರಿ ಹಬ್ಬದ ಸಂಭ್ರಮ ಹಂಚಿಕೊಂಡಿದ್ದೇವೆ. ಈ ಮೂಲಕ ಶಾಂತಿ ಮತ್ತು ಸಾಮರಸ್ಯದ ಸಂದೇಶ ಸಾರಿದ್ದೇವೆ. ಇದು ಜಹಾಂಗೀರಪುರದ ಜನರು ಹೇಗೆ ಭಾವೈಕ್ಯತೆಯಿಂದ ಬದುಕುತ್ತಾರೆ ಮತ್ತು ಅವರವರ ಧರ್ಮವನ್ನು ಹೇಗೆ ಗೌರವಿಸುತ್ತಾರೆ ಎಂಬುದಕ್ಕೆ ಸಾಕ್ಷಿಯಾಗಿದೆ ಎಂದು ಮುಸ್ಲಿಂ ಮುಖಂಡ ತಬ್ರೇಜ್ ಖಾನ್ ಹಾಗೂ ಹಿಂದೂ ಮುಖಂಡರಾದ ಇಂದ್ರಾಮಣಿ ತಿವಾರಿ ಹೇಳಿದರು.

ಉತ್ತರ ಪ್ರದೇಶ: ಅಖಿಲೇಶ್ ವಿರುದ್ಧ ಶಿವಪಾಲ್ ಆಕ್ರೋಶ

ಲಖನೌ (ಪಿಟಿಐ): ‘ನಾನು ಆತನನ್ನು ತೃಪ್ತಿಪಡಿಸಲು ಆತ್ಮಗೌರವ ಬದಿಗಿಟ್ಟು ನಡೆದುಕೊಂಡೆ. ನನಗೆ ಆತನ ಮೇಲೆ ಇನ್ನೂ ಕೋಪವಿದೆ ಎಂದರೆ, ಆತ ನನ್ನನ್ನು ಎಷ್ಟು ನೋಯಿಸಿರಬಹುದು ಎಂಬುದನ್ನು ಅರ್ಥಮಾಡಿಕೊಳ್ಳಿ' ಎಂದು ಮುಲಾಯಂ ಸಿಂಗ್ ಯಾದವ್ ಅವರ ತಮ್ಮ ಶಿವಪಾಲ್ ಸಿಂಗ್ ಯಾದವ್ ಅವರು ಮಂಗಳವಾರ ಅಣ್ಣನ ಮಗ, ಸಮಾಜವಾದಿ ಪಕ್ಷದ ಅಧ್ಯಕ್ಷ ಅಖಿಲೇಶ್ ಯಾದವ್ ಅವರ ಮೇಲೆ ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ.

‘ನಾನು ಆತನಿಗೆ ನಡೆಯಲು ಕಲಿಸಿದ್ದೆ, ಆದರೆ ಆತ ನನ್ನನ್ನು ತುಳಿಯುತ್ತಿದ್ದಾನೆ' ಎಂದು ಪ್ರಗತಿಶೀಲ ಸಮಾಜವಾದಿ ಪಕ್ಷ– ಲೋಹಿಯಾ (ಪಿಎಸ್‌ಪಿಎಲ್) ಮುಖ್ಯಸ್ಥ ಶಿವಪಾಲ್ ಯಾದವ್ ಅವರು ಅಖಿಲೇಶ್ ಅವರ ಹೆಸರನ್ನು ಎಲ್ಲೂ ನಮೂದಿಸದೆ ಟ್ವೀಟ್ ಮಾಡಿದ್ದಾರೆ. ಉತ್ತರ ಪ್ರದೇಶದ ವಿಧಾನಸಭಾ ಚುನಾವಣೆ ಸಂದರ್ಭದಲ್ಲಿ ಶಿವಪಾಲ್ ಯಾದವ್ ಮತ್ತು ಅಖಿಲೇಶ್ ಯಾದವ್ ಒಂದಾಗಿದ್ದರು. ಈಗ ಅವರ ನಡುವೆ ಮನಸ್ತಾಪ ಉಂಟಾಗಿದೆ.



ಕಥಕ್ ನೃತ್ಯ

ಬೆಂಗಳೂರಿನ ಕಂಠೀರವ ಕ್ರೀಡಾಂಗಣದಲ್ಲಿ ಮಂಗಳವಾರ ನಡೆದ ಖೇಲೊ ಇಂಡಿಯಾ ವಾರ್ಸಿಟಿ ಕ್ರೀಡಾಕೂಟದ ಸಮಾರೋಪ ಸಮಾರಂಭದಲ್ಲಿ ಕಲಾವಿದರು ನಡೆಸಿಕೊಟ್ಟ ಕಥಕ್ ನೃತ್ಯ ಪ್ರದರ್ಶನ ಗಮನ ಸೆಳೆಯಿತು –ಪ್ರಜಾವಾಣಿ ಚಿತ್ರ/ರಂಜು.ಪಿ

ಸೌಹಾರ್ದ ದಿನಾಚರಣೆ: ಸಾಹಿತಿ ಕುಂ. ವೀರಭದ್ರಪ್ಪ ಸಲಹೆ

‘ಹಿಂದೂ ಬದಲು ಭಾರತೀಯ ಎನ್ನಿ’

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ‘ಹಿಂದೂ ಬದಲಿಗೆ ನಾವೆಲ್ಲರೂ ಭಾರತೀಯ ಎಂದು ಹೇಳಿಕೊಳ್ಳಬೇಕು. ಹಿಂದೂ ಎಂಬುದು ಇರಾಕ್‌ನ ಪ್ರದೇಶವೊಂದರ ಹೆಸರೇ ಹೊರತು, ಧರ್ಮದ ಹೆಸರಲ್ಲ. ನಮ್ಮೆಲ್ಲರ ಮೈಯಲ್ಲಿ ಹರಿಯುತ್ತಿರುವುದು ಭಾರತೀಯ ರಕ್ತವೇ ಹೊರತು, ಬೇರಾವುದೇ ದೇಶದ ರಕ್ತವಲ್ಲ' ಎಂದು ಸಾಹಿತಿ ಡಾ. ಕುಂ.ವೀರಭದ್ರಪ್ಪ ಹೇಳಿದರು.

ಬಸವ ಜಯಂತಿ ಮತ್ತು ರಂಜಾನ್ ಅಂಗವಾಗಿ, ನಗರದ ಸವಾಯಿ ಗಂಧರ್ವ ಹಾಲ್‌ನಲ್ಲಿ ಮಂಗಳವಾರ ನಡೆದ ಸೌಹಾರ್ದ ದಿನಾಚರಣೆ ಹಾಗೂ ಭಾರತೀಯ ಶರಣ ಸೇನಾ ಸಂಘಟನೆಯ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದ ಅವರು, ‘ಮನುಷ್ಯನನ್ನು ಬದುಕಿಸುವುದೇ ನಿಜವಾದ ಧರ್ಮ. ಸೌಹಾರ್ದ ಮತ್ತು ಭಾವೈಕ್ಯವೇ ಭಾರತದ ಶಕ್ತಿ' ಎಂದು ಹೇಳಿದರು.



ಬಸವ ಜಯಂತಿ ಮತ್ತು ರಂಜಾನ್ ಅಂಗವಾಗಿ, ಹುಬ್ಬಳ್ಳಿಯ ಸವಾಯಿ ಗಂಧರ್ವ ಹಾಲ್‌ನಲ್ಲಿ ಮಂಗಳವಾರ ನಡೆದ ಸೌಹಾರ್ದ ದಿನಾಚರಣೆ ಹಾಗೂ ಭಾರತೀಯ ಶರಣ ಸೇನಾ ಸಂಘಟನೆಯ ಉದ್ಘಾಟನಾ ಸಮಾರಂಭದಲ್ಲಿ ಸಾಹಿತಿ ಡಾ. ಕುಂ. ವೀರಭದ್ರಪ್ಪ ಮಾತನಾಡಿದರು –ಪ್ರಜಾವಾಣಿ ಚಿತ್ರ

‘ಯಾವ ಆಚರಣೆಗಳ ವಿರುದ್ಧ ಶರಣರು ಹೋರಾಡಿದರೋ, ಅದೇ ಆಚರಣೆಗಳಲ್ಲಿ ಶರಣರನ್ನು ಈಗ ಬಂಧಿಸಿಡಲಾಗಿದೆ. ವೈದಿಕ ಪುರೋಹಿತಶಾಹಿ ವ್ಯವಸ್ಥೆಯ ಸಂಚಿದು. ಬಸವಣ್ಣನನ್ನು ನೇಪಥ್ಯಕ್ಕೆ ಸರಿಸುವ ಜೊತೆಗೆ, ಬಸವ ಧರ್ಮವನ್ನು ಅದುಮಿಡಲು ಯತ್ನಿಸಿತು. ಇದನ್ನು ಅರಿಯದ ಲಿಂಗಾಯತರು ಇತ್ತೀಚೆಗೆ ನವಬ್ರಾಹ್ಮಣರಾಗುತ್ತಿರುವುದು ಅಪಾಯಕಾರಿ' ಎಂದು ಅವರು ಅಸಮಾಧಾನ ವ್ಯಕ್ತಪಡಿಸಿದರು.

ಸೇನಾದ ಸಂಚಾಲಕ ರವಿಕುಮಾರ ರಾಯಸಂದ್ರ, ಮುಸ್ಲಿಂ ಧರ್ಮಗುರು ಸೈಯದ್ ಶಾ ತಾಜುದ್ದೀನ್ ಖಾದರಿ, ಸಮತಾ ಸೈನಿಕ ದಳದ ಶಂಕರ ಅಜಮನಿ, ಕರ್ನಾಟಕ ಅಲ್ಪಸಂಖ್ಯಾತರ ಆಯೋಗದ ಮಾಜಿ ಅಧ್ಯಕ್ಷ ಡಾ. ಅಬ್ದುಲ್ ಕರೀಂ, ಮಾಜಿ ಸಂಸದ ಐ.ಜಿ. ಸನದಿ, ವಿಜಯಪುರದ ಯರಗಲ್‌ನ ಡಾ. ಎಂ.ಎಂ. ಕಲಬುರ್ಗಿ ವಿಚಾರ ವೇದಿಕೆಯ ಮಹಾಂತೇಶ ಎಂ. ಕಲಬುರ್ಗಿ, ನಿವೃತ್ತ ಅಧಿಕಾರಿ ಹನುಮಾಕ್ಷಿ ಗೋಗಿ, ಧಾರವಾಡ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಡಾ. ಲಿಂಗರಾಜ ಅಂಗಡಿ, ಮಹಾನಗರ ಪಾಲಿಕೆ ಸದಸ್ಯ ಇಮ್ರಾನ್ ಎಲಿಗಾರ,ಕಾಂಗ್ರೆಸ್ ಮುಖಂಡ ಪ್ರಕಾಶ ಕ್ಯಾರಕಟ್ಟಿ, ಜಾಕೀರ್ ಹುಸೇನ್ ಇದ್ದರು.

ನಿರ್ದೇಶಕ ಮಂಜುನಾಥರೆಡ್ಡಿ ಅಸಮಾಧಾನ

ಕೋಚಿಮುಲ್ ಅಕ್ರಮ: ದಾಖಲೆ ಬಿಡುಗಡೆ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಹಾಲು ಉತ್ಪಾದಕರ ಹಣ ದುರುಪಯೋಗ ಸಲ್ಲದು
- ಎಂ.ವಿ.ಕೃಷ್ಣಪ್ಪ ಮೆಗಾ ಡೇರಿ; ನಿರ್ಧಾರಗಳೇ ಮುಳುವು
- ಕೋಚಿಮುಲ್ ವಿಭಜನೆಯಿಂದ ಹೈನುಗಾರರಿಗೆ ಅನುಕೂಲ

ಚಿಕ್ಕಬಳ್ಳಾಪುರ: ಕೋಲಾರ–ಚಿಕ್ಕಬಳ್ಳಾಪುರ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ (ಕೋಚಿಮುಲ್)ದಲ್ಲಿ ನಡೆದಿರುವ ಅವ್ಯವಹಾರಗಳಿಗೆ ಸಂಬಂಧಿಸಿದ ಮತ್ತಷ್ಟು ದಾಖಲೆಗಳನ್ನು ಮತ್ತು ಮಾಹಿತಿಯನ್ನು ಹಂತ ಹಂತವಾಗಿ ಬಿಡುಗಡೆ ಮಾಡುವೆ ಎಂದು ಕೋಚಿಮುಲ್ ನಿರ್ದೇಶಕ ಮಂಜುನಾಥರೆಡ್ಡಿ ತಿಳಿಸಿದರು.

ನಗರದಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಟೆಟ್ರಾ ಪ್ಯಾಕ್ ಹಾಲಿನ ವಿಚಾರವಾಗಿ ನಡೆದಿರುವ ಅಕ್ರಮಗಳ ಬಗ್ಗೆ ನಾನು ದಾಖಲೆ ಬಿಡುಗಡೆ ಮಾಡಿದ್ದೆ. ಇದಕ್ಕೆ ಪ್ರತಿಯಾಗಿ ಕೋಚಿಮುಲ್ ಅಧ್ಯಕ್ಷ ಕೆ.ವೈ.ನಂಜೇಗೌಡರು ‘ಯಾವುದೇ ಅಕ್ರಮ ನಡೆದಿಲ್ಲ. ನಡೆದಿದ್ದರೆ ನಾನು ರಾಜೀನಾಮೆ ನೀಡುವೆ. ಆದರೆ ಅಂತಹ ಸಂದರ್ಭ ಬರುವುದಿಲ್ಲ' ಎಂದಿದ್ದಾರೆ. ಆದರೆ ಕೋಚಿಮುಲ್‌ನಲ್ಲಿ ನಡೆದಿರುವ ಅಕ್ರಮಗಳಿಗೆ ಸಂಬಂಧಿಸಿದ ಮಾಹಿತಿಯನ್ನು ಹಂತ ಹಂತವಾಗಿ ಮತ್ತಷ್ಟು ಬಿಡುಗಡೆ ಮಾಡುವೆ ಎಂದು ಹೇಳಿದರು.

ರಾಜ್ಯದಲ್ಲಿಯೇ ಹಾಲಿನ ಟೆಟ್ರಾ ಪ್ಯಾಕ್ ಸಿದ್ಧಗೊಳಿಸುವ ವಿಚಾರದಲ್ಲಿ ಆಧುನಿಕ ಯಂತ್ರಗಳನ್ನು ಕೋಚಿಮುಲ್ 1998ರಲ್ಲಿ ಅಳವಡಿಸಿತು. ಕೋಚಿಮುಲ್ ಸಿಬ್ಬಂದಿಯನ್ನೇ ಬಳಸಿ ಟೆಟ್ರಾ ಪ್ಯಾಕ್ ಸಿದ್ಧಗೊಳಿಸಲಾಗುತ್ತಿತ್ತು. ಆದರೆ ಈಗ ಗುತ್ತಿಗೆ ನೀಡಲಾಗಿದೆ. ಇದು ಅವ್ಯವಹಾರಕ್ಕೆ ಕಾರಣವಾಗಿದೆ' ಎಂದು ದೂರಿದರು.

ಕೋಚಿಮುಲ್‌ನ ನುರಿತ ಮತ್ತು ಕೌಶಲ ಹೊಂದಿದ ಸಿಬ್ಬಂದಿಯನ್ನು ಬಳಸಿ ಟೆಟ್ರಾಪ್ಯಾಕ್ ಸಿದ್ಧಗೊಳಿಸಲಾಗುತ್ತಿತ್ತು. ಇದರಿಂದ ವೆಚ್ಚವೂ ಕಡಿಮೆ ಆಗುತ್ತಿತ್ತು. ಆದರೆ ಈಗ ಗುತ್ತಿಗೆ ನೀಡುತ್ತಿರುವುದರಿಂದ ಒಕ್ಕೂಟಕ್ಕೆ ಹೆಚ್ಚು ಹೊರ ಆಗುತ್ತಿದೆ. ಆ ಸಿಬ್ಬಂದಿ ಅನುಭವಿಗಳೂ ಅಲ್ಲ. ಇದರಲ್ಲಿ ಅಕ್ರಮ ನಡೆದಿದೆ ಎಂದು ಹೇಳಿದರು.

ಕೋಚಿಮುಲ್ ನಿರ್ದೇಶಕ ಕಾಂತರಾಜ್ ಮಾತನಾಡಿ, ಈ ಹಿಂದೆ ಶಿವಶಂಕರರೆಡ್ಡಿ ಜಿಲ್ಲಾ ಉಸ್ತುವಾರಿ ಸಚಿವರಾಗಿದ್ದಾಗ ಕೋಚಿಮುಲ್ ಮತ್ತು ಡಿಸಿಸಿ ಬ್ಯಾಂಕ್ ವಿಭಜನೆಗೆ ಎರಡು ಸಭೆ ನಡೆಸಿದ್ದರು. ಆದರೆ ಈಗ ಡಾ.ಕೆ.ಸುಧಾಕರ್ ವಿಭಜನೆಯ ವಿಚಾರ ದಲ್ಲಿ ಅಡಿ ಇಡುತ್ತಿದ್ದಂತೆಯೇ ಅದನ್ನು ವಿರೋಧಿಸಿದರು. ಕೆಲವರ ಮೂಲಕ ಹೈಕೋರ್ಟ್‌ನಿಂದ ತಡೆ ತಂದರು. ಇದಕ್ಕೆ ಚಿಕ್ಕಬಳ್ಳಾಪುರ ಜಿಲ್ಲೆಯ ಕೆಲವು ನಿರ್ದೇಶಕರ ಕುಮ್ಮಕ್ಕು ಇದೆ ಎಂದು ದೂರಿದರು. ‘ಕೋಲಾರದಲ್ಲಿ ಎಂ.ವಿ.ಕೃಷ್ಣಪ್ಪ ಮೆಗಾ ಡೇರಿ ಸ್ಥಾಪನೆಯ ವಿಚಾರದಲ್ಲಿ ಕೋಚಿಮುಲ್ ನಿರ್ಧಾರಗಳೇ ಮುಳು ವಾಯಿತು. ಆರಂಭದಲ್ಲಿ ₹ 130 ಕೋಟಿಯ ಪ್ರಸ್ತಾವವನ್ನು ಸರ್ಕಾರಕ್ಕೆ ಸಲ್ಲಿಸಿತು. ನಂತರ ಅದು ₹ 160 ಕೋಟಿ, ₹ 180 ಕೋಟಿಗೆ ಹೆಚ್ಚಿತ್ತು. ಆಡಳಿತ ಮಂಡಳಿಯ ನಡೆಯು ಸರ್ಕಾರದ ದೃಷ್ಟಿಯಲ್ಲಿ ಅನುಮಾನಕ್ಕೆ ಕಾರಣವಾಯಿತು' ಎಂದು ಹೇಳಿದರು.

ಕೋಚಿಮುಲ್ ನಿರ್ದೇಶಕರಾದ ಸುನಂದಮ್ಮ, ಸುಬ್ಬಾರೆಡ್ಡಿ ಗೋಷ್ಠಿಯಲ್ಲಿ ಇದ್ದರು.

ಕಾಡುಬೀಸನಹಳ್ಳಿ, ಕೆ.ಆರ್.ಪುರ ಬಳಿ ಗ್ಯಾಸ್ ಪೈಪ್‌ಲೈನ್ ಸ್ಥಳಾಂತರ ಕಾಮಗಾರಿ

ಮೆಟ್ರೊ ಕಾಮಗಾರಿಗೆ ತೊಡಕು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಮ್ಮ ಮೆಟ್ರೊ ರೈಲು ಹೊಸ ಮಾರ್ಗದಲ್ಲಿ ಗ್ಯಾಸ್ ಪೈಪ್‌ಲೈನ್ ಸ್ಥಳಾಂತರ ವಿಳಂಬವಾಗುತ್ತಿದ್ದು, ಇದು ಸಿಲ್ಕ್ ಬೋರ್ಡ್‌ನಿಂದ ವಿಮಾನ ನಿಲ್ದಾಣಕ್ಕೆ ಸಂಪರ್ಕ ಕಲ್ಪಿಸುವ ಮೆಟ್ರೊ ರೈಲು ಮಾರ್ಗದ ಕಾಮಗಾರಿಯ ವೇಗಕ್ಕೆ ತೊಡಕಾಗಿದೆ.

ಎರಡನೇ ಹಂತದ ಎ (ಸಿಲ್ಕ್ ಬೋರ್ಡ್–ಕೆ.ಆರ್.ಪುರ) ಮತ್ತು ಬಿ (ಕೆ.ಆರ್.ಪುರ–ವಿಮಾನ ನಿಲ್ದಾಣ) ಮೆಟ್ರೊ ರೈಲು ಮಾರ್ಗದ ಕಾಮಗಾರಿ ಹೊರ ವರ್ತುಲ ರಸ್ತೆಗಳಲ್ಲಿ ಭರದಿಂದ ಸಾಗಿದೆ. ಎರಡನೇ ಹಂತದ ಎ ಮಾರ್ಗದ ಕಾಡುಬೀಸನಹಳ್ಳಿ ಮತ್ತು ಬಿ ಮಾರ್ಗದ ಕೆ.ಆರ್.ಪುರ ಬಳಿ ಗ್ಯಾಸ್ ಪೈಪ್‌ಲೈನ್ ಸ್ಥಳಾಂತರ ಕಾಮಗಾರಿ ನಡೆಯುತ್ತಿದೆ.



ಹೊರ ವರ್ತುಲ ರಸ್ತೆಯಲ್ಲಿ ನಡೆಯುತ್ತಿರುವ ಮೆಟ್ರೊ ರೈಲು ಮಾರ್ಗದ ಕಾಮಗಾರಿ

2ಎ ಮಾರ್ಗದಲ್ಲಿ ಪೈಪ್‌ಲೈನ್ ಸ್ಥಳಾಂತರ ಕಾಮಗಾರಿಯನ್ನು 2021ರ ಸೆಪ್ಟೆಂಬರ್ ಮತ್ತು 2ಬಿ ಮಾರ್ಗದ ಕಾಮಗಾರಿಯನ್ನು ಅಕ್ಟೋಬರ್‌ನಲ್ಲಿ ಪೂರ್ಣಗೊಳಿಸಲಾಗುವುದು ಎಂದು ಗ್ಯಾಸ್ ಅಥಾರಿಟಿ ಆಫ್ ಇಂಡಿಯಾ ಸಂಸ್ಥೆಯ(ಗೇಲ್) ಅಧಿಕಾರಿಗಳು ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಅಧ್ಯಕ್ಷತೆಯಲ್ಲಿ ನಡೆಯುವ ಉನ್ನತ ಅಧಿಕಾರಿ ಸಮಿತಿಯ ಸಭೆಯಲ್ಲಿ ಭರವಸೆ ನೀಡಿದ್ದರು. ಮೆಟ್ರೊ ರೈಲು ಯೋಜನೆಗೆ ಸಂಬಂಧಿಸಿದ 40, 41 ಮತ್ತು 42ನೇ ಸಭೆಗಳಲ್ಲೂ ಈ ವಿಷಯ ಪ್ರಸ್ತಾಪವಾಗಿತ್ತು.

ಏ.27ರಂದು 43ನೇ ಸಭೆ ನಡೆದಿದ್ದು, ಅಲ್ಲಿಯೂ ವಿಷಯ ಪ್ರಸ್ತಾಪವಾಗಿದೆ. ಕಾಡುಬೀಸನಹಳ್ಳಿ ಮತ್ತು ಕೆ.ಆರ್.ಪುರ ಬಳಿ ಗೇಲ್ ಇನ್ನೂ ಕಾಮಗಾರಿ ಪೂರ್ಣಗೊಳಿಸಿಲ್ಲ. ಆದ್ದರಿಂದ ಅಲ್ಲಿ ಮೆಟ್ರೊ ರೈಲು ಮಾರ್ಗದ ಕಾಮಗಾರಿ ನಿರ್ವಹಿಸಲು ಸಾಧ್ಯವಾಗುತ್ತಿಲ್ಲ ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ವಿವರಿಸಿದ್ದಾರೆ.

'ಗೇಲ್ ಇನ್ನಷ್ಟು ವಿಳಂಬ ಮಾಡಿದರೆ ಮೆಟ್ರೊ ಮಾರ್ಗದ ಕಾಮಗಾರಿ ಮೇಲೆ ಪರಿಣಾಮ ಬೀರಲಿದೆ. ತ್ವರಿತವಾಗಿ ಕಾಮಗಾರಿ ಪೂರ್ಣಗೊಳಿಸಿಕೊಡುವಂತೆ ಗೇಲ್‌ಗೆ ಸೂಚನೆ ನೀಡಬೇಕು' ಎಂದು ಕೋರಿದ್ದಾರೆ.

ಈ ಕುರಿತು 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದ ಬಿಎಂಆರ್‌ಸಿಎಲ್ ವ್ಯವಸ್ಥಾಪಕ ನಿರ್ದೇಶಕ ಅಂಜುಂ ಪರ್ವೆಜ್, 'ಈ ಬಗ್ಗೆ ಉನ್ನತ ಅಧಿಕಾರಿ ಸಮಿತಿ ಸಭೆಯಲ್ಲಿ ಚರ್ಚೆಯಾಗಿದೆ. ಆದಷ್ಟು ಬೇಗ ಕಾಮಗಾರಿ ಪೂರ್ಣಗೊಳಿಸುವುದಾಗಿ ಗೇಲ್ ಹೇಳಿದೆ. ನಿಗದಿತ ಸಮಯದೊಳಗೆ ಯೋಜನೆ ಕಾರ್ಯಗತಗೊಳ್ಳಲಿದೆ' ಎಂದು ಸ್ಪಷ್ಟಪಡಿಸಿದರು.

ಜಾಗ ಬಿಟ್ಟುಕೊಡಲು ಒಪ್ಪಿದ ಚರ್ಚ್

ರೀಚ್–6 ಮೆಟ್ರೊ ರೈಲು ಮಾರ್ಗಕ್ಕೆ ಅಲ್ಪ ಪ್ರಮಾಣದ ಜಾಗ ಬಿಟ್ಟುಕೊಡಲು ಹೊಸೂರು ರಸ್ತೆಯ ರಿಚ್‌ಮಂಡ್ ಟೌನ್ ಬಳಿಯ ಆಲ್ ಸೇಂಟ್ಸ್ ಚರ್ಚ್‌ನ ಮುಖ್ಯಸ್ಥರು ಒಪ್ಪಿಕೊಂಡಿದ್ದು, ನಾಲ್ಕು ವರ್ಷಗಳಿಂದ ಇದ್ದ ವಿವಾದ ಬಗೆಹರಿದಂತಾಗಿದೆ.

'ಬಿಎಂಆರ್‌ಸಿಎಲ್ ವ್ಯವಸ್ಥಾಪಕ ನಿರ್ದೇಶಕ ಅಂಜುಂ ಪರ್ವೆಜ್ ಅವರು ನಮ್ಮೊಂದಿಗೆ ಮಾತುಕತೆ ನಡೆಸಿದ್ದು, ಒಪ್ಪಂದದಂತೆ 218 ಚದರ ಮೀಟರ್ ಜಾಗ ನೀಡಲು ಒಪ್ಪಿದ್ದೇವೆ' ಎಂದು ಚರ್ಚ್‌ನ ಎಬಿನೇಜರ್ ಪ್ರೇಮ್‌ಕುಮಾರ್ ಅವರು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.



ಭಾರತದಾದ್ಯಂತ ತೀವ್ರ ಬಿಸಿ ಅಲೆ!

'2047ರ ವೇಳೆಗೆ ಪ್ರತಿ ಮಗುವೂ ಸುರಕ್ಷಿತ'

ವಾಷಿಂಗ್ಟನ್ (ಪಿಟಿಐ): ಭಾರತ 2047ಕ್ಕೆ ತನ್ನ 100ನೇ ಸ್ವಾತಂತ್ರ್ಯೋತ್ಸವ ಆಚರಿಸುವ ಹೊತ್ತಿಗೆ ದೇಶದ ಪ್ರತಿ ಮಗುವೂ ಸ್ವತಂತ್ರ, ಸುರಕ್ಷಿತವಾಗಿರಲಿದೆ. ಅಲ್ಲದೇ, ಉಚಿತ ಶಿಕ್ಷಣ ಪಡೆಯಲಿದೆ ಎಂದು ನೊಬೆಲ್ ಪ್ರಶಸ್ತಿ ಪುರಸ್ಕೃತ ಕೈಲಾಶ್ ಸತ್ಯಾರ್ಥಿ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

'ಪಿಟಿಐ'ಗೆ ನೀಡಿದ ಸಂದರ್ಶನದಲ್ಲಿ ಮಾತನಾಡಿರುವ ಅವರು, 'ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರದ ಅಡಿಯಲ್ಲಿ ಬಾಲ ಕಾರ್ಮಿಕ ಪದ್ಧತಿಯ ವಿರುದ್ಧ ಸಮರ್ಥವಾಗಿ ಹೋರಾಡಲಾಗುತ್ತಿದೆ' ಎಂದು ಹೇಳಿದ್ದಾರೆ.

ಭಾರತದಲ್ಲಿ ಬಾಲಕಾರ್ಮಿಕ ಪದ್ಧತಿಯನ್ನು ಕೊನೆಗೊಳಿಸಲು ಸಾಮಾಜಿಕ ಮತ್ತು ರಾಜಕೀಯ ಇಚ್ಛಾಶಕ್ತಿಯ ಅಗತ್ಯವಿದೆ. ಈ ವಿಚಾರದಲ್ಲಿ ಸರ್ಕಾರಕ್ಕೆ ಸಮಾಜ ಮತ್ತು ಖಾಸಗಿ ವಲಯದ ಬೆಂಬಲದ ಅಗತ್ಯವೂ ಇದೆ. ಸಮಾಜದ ಕಟ್ಟಕಡೆಯ ವ್ಯಕ್ತಿಯ ಬಗ್ಗೆಯೂ ಮಾತನಾಡುವ ನನ್ನ ಕಲ್ಪನೆಗಳು ಮಹಾತ್ಮ ಗಾಂಧೀಜಿ ಅವರಿಂದ ಪ್ರೇರಿತವಾಗಿವೆ. ಇದನ್ನೇ ಭಾರತವೂ ಸಾಧಿಸಲಿದೆ. ಅದಕ್ಕಾಗಿ ನಾವು 2047ರ ವರೆಗೆ ಕಾಯಬೇಕಿಲ್ಲ' ಎಂದು ಅವರು ಇದೇ ವೇಳೆ ಹೇಳಿದರು.

ತರಳಬಾಳು ಧಾರ್ಮಿಕ, ಸಾಂಸ್ಕೃತಿಕ ಕೇಂದ್ರದಿಂದ 'ಬಸವ ಜಯಂತಿ'

'ವಚನಗಳು ಅಮೃತದ ಬಿಂದುಗಳು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವಚನಗಳು ಅಮೃತದ ಬಿಂದುಗಳಿದ್ದಂತೆ. ಜಗತ್ತಿನ ಎಲ್ಲ ಭಾಗದ ಜನರೂ ಅವುಗಳ ಮಹತ್ವ ಮನಗಾಣಬಲ್ಲರು' ಎಂದು ಸಾಹಿತಿ ಹಂ.ಪ. ನಾಗರಾಜಯ್ಯ ತಿಳಿಸಿದರು.

ತರಳಬಾಳು ಧಾರ್ಮಿಕ ಮತ್ತು ಸಾಂಸ್ಕೃತಿಕ ಕೇಂದ್ರ ಮಂಗಳವಾರ ಹಮ್ಮಿಕೊಂಡಿದ್ದ 'ಬಸವ ಜಯಂತಿ' ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.


ಕಾರ್ಯಕ್ರಮದಲ್ಲಿ ಶ್ರೀ ಶಿವಕುಮಾರ ಶಿವಾಚಾರ್ಯ ಸ್ವಾಮಿಯವರ ಜೀವನ ಚರಿತ್ರೆ ಆಧರಿಸಿ ರಚನೆಯಾಗಿರುವ 'ಧೀರ ಸನ್ಯಾಸಿ', ಬಾಡಾಲ ರಾಮಯ್ಯನವರು ತೆಲುಗಿಗೆ ಅನುವಾದಿಸಿರುವ 'ಬಸವೇಶ್ವರ ವಚನಾಲು', ಬಣಕಾರ ಕೆ.ಗೌಡಪ್ಪ ಅವರು ಹಿಂದಿಗೆ ಅನುವಾದಿಸಿರುವ 'ಬಸವಣ್ಣನವರ ಷಟ್‌ಸ್ಥಲ ವಚನಗಳು' ಕೃತಿಗಳನ್ನು ಬಿಡುಗಡೆ ಮಾಡಲಾಯಿತು. 'ಶಿವಶರಣರ ವಚನ ಸಂಪುಟ' ಅಂತರ್ಜಾಲ ತಾಣವನ್ನೂ ಅನಾವರಣಗೊಳಿಸಲಾಯಿತು.

'ಬಸವಣ್ಣನವರು ಜನಭಾಷೆಗೆ ಸ್ಪಂದಿಸಿದ ಮಹಾನುಭಾವ. ನಮ್ಮ ತಿಳಿವಳಿಕೆಗೇ ಹೊಸ ತಿರುವು ನೀಡಿದವರು. ಕನ್ನಡ ಕಾಪಾಡುವ ದೃಷ್ಟಿಯಿಂದ ಆಡುಭಾಷೆಯಲ್ಲೇ ತಮ್ಮ ತಿಳಿವಳಿಕೆ ಹೇಳಿದವರು. ಸಮಾಜದಲ್ಲಿ ಅದ್ಭುತ ಕ್ರಾಂತಿ ಮಾಡಿ, ಕನ್ನಡ ಸಾಹಿತ್ಯ, ಸಂಸ್ಕೃತಿ ಮತ್ತು ಒಟ್ಟು ಕರ್ನಾಟಕವು ಜಗತ್ತಿನ ಭೂಪಟದಲ್ಲಿ ನಿಲ್ಲುವಂತೆ ಮಾಡಿದವರು ಬಸವಣ್ಣ ಹಾಗೂ ಅವರ ಸಮಕಾಲೀನರು' ಎಂದು ಹಂಪನಾ ಹೇಳಿದರು.

'ಹಿಂದಿ ಹೇರಿಕೆಯಂತಹ ದಬ್ಬಾಳಿಕೆಯನ್ನು ತಡೆಯಲು, ಮಾತೃಭಾಷೆ ಕೊಚ್ಚಿ ಹೋಗದ ಹಾಗೆ ಕಾಪಾಡಲು ಬಸವಣ್ಣ ಹಾಗೂ ಇತರ ಶರಣರ ವಚನಗಳು ಸಹಾಯಕವಾಗಿವೆ' ಎಂದರು.

'ಧೀರ ಸನ್ಯಾಸಿ' ಕೃತಿ ಸಂಪಾದಿಸಿರುವ ಪ್ರೊ. ಚಂದ್ರಶೇಖರಯ್ಯ, 'ಈ ಕೃತಿ 500 ಪುಟಗಳನ್ನು ಒಳಗೊಂಡಿದೆ. ಶಿವಕುಮಾರ ಶಿವಾಚಾರ್ಯರ ಬದುಕು ಒಂದು ಪ್ರವಾಹವಿದ್ದಂತೆ. ಅದು ಅವರ ಶತ್ರುಗಳು ಹಾಗೂ ಮಿತ್ರರ ನಡುವೆ ಹರಿದಿತ್ತು. ಮರುಳಸಿದ್ಧ ಮತ್ತು ಬಸವಣ್ಣನವರ ಹೃದಯ ಹಾಗೂ ಬೌದ್ಧಿಕ ಸಂಪನ್ನತೆಯು ಶಿವಕುಮಾರ ಸ್ವಾಮಿಯವರಲ್ಲಿ ಮೇಳೈಸಿತ್ತು' ಎಂದು ಹೇಳಿದರು.

ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿ ಶಿವರಾಜ್ ವಿ.ಪಾಟೀಲ, 'ಧೀರ ಸನ್ಯಾಸಿ' ಕೃತಿಯು ಕೈ ತೊಳೆದು ಓದುವಂತಹದ್ದು. ಶಿವಕುಮಾರ ಶಿವಾಚಾರ್ಯರ ಜೀವನ ಅರಿತುಕೊಳ್ಳಲು ಇದು ಸಹಕಾರಿ. ಈಗಿನ ರೋಗಗ್ರಸ್ತ ಜಗತ್ತಿಗೆ ಶರಣರ ವಚನಗಳು ಸಂಜೀವಿನಿ ಇದ್ದಂತೆ' ಎಂದು ತಿಳಿಸಿದರು.



ಶಿವರಾಜ್ ವಿ.ಪಾಟೀಲ ಅವರು ಕೃತಿ ಬಿಡುಗಡೆ ಮಾಡಿದರು. (ಎಡದಿಂದ) ಪ್ರೊ.ಚಂದ್ರಶೇಖರಯ್ಯ, ಸಿರಿಗೆರೆ ಬೃಹನ್ಮಠದ ಪೀಠಾಧ್ಯಕ್ಷರಾದ ಡಾ.ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ, ಸಾಹಿತಿ ಹಂಪ ನಾಗರಾಜಯ್ಯ ಇದ್ದರು –ಪ್ರಜಾವಾಣಿ ಚಿತ್ರ

'ಶಿವಮೂರ್ತಿ ಸ್ವಾಮೀಜಿ ಹಲವು ಜ್ಞಾನಗಳ ಸಂಗಮವಿದ್ದಂತೆ'

'ಶಿವಮೂರ್ತಿ ಶಿವಾಚಾರ್ಯರಿಗೆ ಅಕ್ಷರ, ಅವುಗಳ ಅರ್ಥ ಹಾಗೂ ಭಾವನೆಯ ಜ್ಞಾನ ಇದೆ. ಸರಿಯಾದ ಅರ್ಥ ಹಾಗೂ ಭಾವನೆಗಳನ್ನು ವ್ಯಕ್ತಪಡಿಸುವುದು ಅವರ ಲೇಖನದ ವಿಶೇಷತೆ. ವಿಜ್ಞಾನ, ತಂತ್ರಜ್ಞಾನ ಕ್ಷೇತ್ರಗಳಲ್ಲಿ ಆಗುತ್ತಿರುವ ಹೊಸ ಆವಿಷ್ಕಾರಗಳ ಬಗೆಗೂ ಅರಿತುಕೊಂಡಿರುವ ಅವರು ಎಲ್ಲಾ ಜ್ಞಾನಗಳ ಸಂಗಮವಿದ್ದಂತೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

'12ನೇ ಶತಮಾನದಲ್ಲಿ ವಚನಗಳ ಮೂಲಕ ವೈಚಾರಿಕ ಕ್ರಾಂತಿ ಮಾಡಿದ ಮಹಾನ್ ಚೇತನ ಬಸವಣ್ಣ. ಆ ಕಾಲದಲ್ಲೇ ಅವರು ಕನ್ನಡವನ್ನು ಶ್ರೀಮಂತಗೊಳಿಸಿದ್ದರು' ಎಂದು ತಿಳಿಸಿದರು.

ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಉಚಿತ ತರಬೇತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆ.ಆರ್ ಪುರದ ಇಂಡಿಯನ್ ಐಎಎಸ್ ಮತ್ತು ಕೆಎಎಸ್ ಕೋಚಿಂಗ್ ಅಕಾಡೆಮಿ ವತಿಯಿಂದ ವಿವಿಧ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ 4 ತಿಂಗಳ ಉಚಿತ ತರಬೇತಿ ನೀಡಲಾಗುವುದು.

ಕೆಎಎಸ್, ಪಿಎಸ್‌ಐ, ಎಫ್‌ಡಿಎ, ಎಸ್‌ಡಿಎ, ಪಿಡಿಒ, ಪೊಲೀಸ್ ಕಾನ್‌ಸ್ಟೆಬಲ್, ಬ್ಯಾಂಕಿಂಗ್ ಸೇರಿದಂತೆ ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ ಮೇ 8ರಿಂದ ಪ್ರಾರಂಭವಾಗಲಿದೆ ಎಂದು ಅಕಾಡೆಮಿ ನಿರ್ದೇಶಕ ಭಾಸ್ಕರ್ ರೆಡ್ಡಿ ಹೇಳಿದರು.

ಸಂಪರ್ಕ: 9902829811



ಕರುನಾಡ ವಿಜಯ ಸೇನೆ ವತಿಯಿಂದ ನಗರದಲ್ಲಿ ಭಾನುವಾರ ಆಯೋಜಿಸಿದ್ದ ಕಾರ್ಮಿಕರ ಸಮಾವೇಶದಲ್ಲಿ ಪೌರಕಾರ್ಮಿಕರಿಗೆ ಸಮವಸ್ತ್ರ ವಿತರಿಸಿ ಗೌರವಿಸಲಾಯಿತು. ವಿಶ್ವ ಒಕ್ಕಲಿಗರ ಸಂಸ್ಥಾನ ಮಠದ ಕುಮಾರ ಚಂದ್ರಶೇಖರನಾಥ ಸ್ವಾಮೀಜಿ, ನಟ ವಸಿಷ್ಠ ಸಿಂಹ, ಸಂಘಟನೆಯ ರಾಜ್ಯ ಘಟಕದ ಅಧ್ಯಕ್ಷ ಎಚ್.ಎನ್.ದೀಪಕ್, ಕಾರ್ಮಿಕ ಘಟಕದ ಅಧ್ಯಕ್ಷ ನೆ.ಲ.ರಾಮ್‌ಪ್ರಸಾದ್ ಗೌಡ ಹಾಗೂ ಇತರರು ಇದ್ದಾರೆ.

ಮರಿಯಪ್ಪನಪಾಳ್ಯದ ಗಾಯತ್ರಿದೇವಿ ಉದ್ಯಾನ

ವಿದ್ಯುತ್ ತಂತಿಗಳ ದುರಸ್ತಿಗೆ ಕ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜಾಜಿನಗರದ ಪ್ರಕಾಶನಗರ ವಾರ್ಡ್‌ನ ಮರಿಯಪ್ಪನಪಾಳ್ಯದಲ್ಲಿರುವ ಗಾಯತ್ರಿ ದೇವಿ ಉದ್ಯಾನದಲ್ಲಿ ಅಪಾಯದ ಸ್ಥಿತಿಯಲ್ಲಿದ್ದ ವಿದ್ಯುತ್ ತಂತಿಗಳ ದುರಸ್ತಿಗೆ ಕ್ರಮ ಕೈಗೊಳ್ಳಲಾಗಿದೆ.

'ಉದ್ಯಾನದ ನಿರ್ವಹಣೆ ಕೊರತೆಯಿಂದ ಕಂಬಗಳಲ್ಲಿ ಅಳವಡಿಸಿದ್ದ ವಿದ್ಯುತ್ ತಂತಿಗಳು ಎಲ್ಲೆಂದರಲ್ಲಿ ಕಳಚಿಕೊಂಡು, ಸಾರ್ವಜನಿಕರಿಗೆ ಅಪಾಯವನ್ನುಂಟು ಮಾಡುವ ಸ್ಥಿತಿಯಲ್ಲಿವೆ. ಮಕ್ಕಳು ಇದರ ಅಕ್ಕಪಕ್ಕದಲ್ಲೇ ಆಟವಾಡುತ್ತಿರುತ್ತಾರೆ. ಏನಾದರೂ ಅನಾಹುತಗಳಾದರೆ ಯಾರು ಹೊಣೆ? ಕೂಡಲೇ ಈ ಅವ್ಯವಸ್ಥೆ ಸರಿಪಡಿಸಬೇಕು' ಎಂದು ಸಾರ್ವಜನಿಕರು ಮನವಿ ಮಾಡಿದ್ದರು.

'ಉದ್ಯಾನದಲ್ಲಿ ಸೊಳ್ಳೆ ನಿಯಂತ್ರಣ ಔಷಧ ಸಿಂಪಡಿಸದೇ ಇರುವುದರಿಂದ ಸೊಳ್ಳೆಗಳ ಕಾಟ ಹೆಚ್ಚಾಗಿದ್ದು, ವಾಯುವಿಹಾರಿಗಳಿಗೆ ಬಹಳ ಸಮಸ್ಯೆಯಾಗಿದೆ' ಎಂದೂ ದೂರಿದ್ದರು.

ಈ ಸಂಬಂಧ 'ಗಾಯತ್ರಿ ದೇವಿ ಉದ್ಯಾನದಲ್ಲಿ ನಿರ್ವಹಣೆ ಕೊರತೆ' ಶೀರ್ಷಿಕೆಯಡಿ 'ಪ್ರಜಾವಾಣಿ'ಯಲ್ಲಿ ಮಂಗಳವಾರ (ಮೇ 3) ವರದಿ ಪ್ರಕಟವಾಗಿತ್ತು.

ವರದಿ ಬಳಿಕ ಎಚ್ಚೆತ್ತ ಅಧಿಕಾರಿಗಳು ಕಳಚಿಕೊಂಡಿದ್ದ ವಿದ್ಯುತ್ ತಂತಿಗಳನ್ನು ದುರಸ್ತಿ ಮಾಡಿದ್ದು, ಅವುಗಳಿಗೆ ಸುರಕ್ಷತಾ ಪೆಟ್ಟಿಗೆಗಳನ್ನು ಅಳವಡಿಸಲು ಕ್ರಮ ಕೈಗೊಂಡಿದ್ದಾರೆ.

'ಉದ್ಯಾನದಲ್ಲಿ ಹಾಳಾಗಿದ್ದ ವಿದ್ಯುತ್ ಸಂಪರ್ಕವನ್ನು ದುರಸ್ತಿ ಮಾಡಲಾಗಿದೆ. ಉದ್ಯಾನದ ಎಲ್ಲ ಕಡೆ ಸೊಳ್ಳೆ ನಿಯಂತ್ರಣ ಔಷಧವನ್ನೂ ಸಿಂಪಡಿಸಲಾಯಿತು. ವಿಶ್ರಾಂತಿ ಸೂರಿನ ಚಾವಣಿ ದುರಸ್ತಿ ಶೀಘ್ರದಲ್ಲೇ ನಡೆಯಲಿದೆ' ಎಂದು ಬಿಜೆಪಿ ಮುಖಂಡ ಲಕ್ಷ್ಮೀನಾರಾಯಣ ಹೇಳಿದರು.

ವರದಿ ಪರಿಣಾಮ



ಉದ್ಯಾನದಲ್ಲಿ ಅಪಾಯದ ಸ್ಥಿತಿಯಲ್ಲಿದ್ದ ವಿದ್ಯುತ್ ತಂತಿಗಳನ್ನು ದುರಸ್ತಿ ಮಾಡಿದ ಸಿಬ್ಬಂದಿ



ಉದ್ಯಾನದಲ್ಲಿ ಸೊಳ್ಳೆ ನಿಯಂತ್ರಣಕ್ಕಾಗಿ ಔಷಧ ಸಿಂಪಡಿಸಲಾಯಿತು.

₹26 ಲಕ್ಷ ವಂಚನೆ: ಆತ್ಮಹತ್ಯೆ

ಚಿಕ್ಕಬಳ್ಳಾಪುರ: ಆನ್‌ಲೈನ್ ವಂಚಕರಿಂದ ₹ 26 ಲಕ್ಷ ಹಣವನ್ನು ಕಳೆದುಕೊಂಡ ಇಲ್ಲಿನ ವ್ಯಾಪಾರಿಯೊಬ್ಬರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಚಿಕ್ಕಬಳ್ಳಾಪುರದ ಬಜಾರ್ ರಸ್ತೆಯಲ್ಲಿ ಉಡುಗೊರೆಗಳ ಮಾರಾಟ ಮಳಿಗೆ ಹೊಂದಿರುವ ಅರವಿಂದ್ ಆತ್ಮಹತ್ಯೆ ಮಾಡಿಕೊಂಡವರು. 1957ರ ಸಮಯದ ₹ 1 ನಾಣ್ಯಗಳನ್ನು ನೀಡಿದರೆ ₹ 58 ಲಕ್ಷ ನೀಡುತ್ತೇವೆ ಎಂದು ಆನ್‌ಲೈನ್ ವಂಚಕರು ಅರವಿಂದ್ ಅವರನ್ನು ನಂಬಿಸಿದ್ದರು.

ವಂಚನೆಗೆ ಒಳಗಾಗಿರುವುದು ಅರಿವಾಗುತ್ತಲೇ ಅರವಿಂದ್ ಗೌರಿಬಿದನೂರು ರಸ್ತೆಯ ಕಣಿವೆ ಪ್ರದೇಶದಲ್ಲಿ ಪೆಟ್ರೋಲ್ ಸುರಿದುಕೊಂಡು ಬೆಂಕಿ ಹಚ್ಚಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಈ ಬಗ್ಗೆ ಪತ್ರ ಸಹ ಬರೆದಿದ್ದರು. ಚಿಕ್ಕಬಳ್ಳಾಪುರ ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ರಾಮಗೊಂಡನಹಳ್ಳಿಯಲ್ಲಿ ವೆಂಕಟೇಶ್ವರಸ್ವಾಮಿಯ ಬ್ರಹ್ಮ ರಥೋತ್ಸವ ನಡೆಯಿತು

ರಾಮಗೊಂಡನಹಳ್ಳಿ: ವೆಂಕಟೇಶ್ವರಸ್ವಾಮಿ ರಥೋತ್ಸವ

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ರಾಮಗೊಂಡನಹಳ್ಳಿ ವೆಂಕಟೇಶ್ವರಸ್ವಾಮಿ ಬ್ರಹ್ಮರಥೋತ್ಸವ ಮಂಗಳವಾರ ವಿಜೃಂಭಣೆಯಿಂದ ನಡೆಯಿತು.

ಉತ್ಸವ ಮೂರ್ತಿಗೆ ಹೂವಿನ ಅಲಂಕಾರ ಮಾಡಿ ಗ್ರಾಮದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮಾಡಲಾಯಿತು. ಕಂಸಾಳೆ, ಡೊಳ್ಳುಕುಣಿತ, ತಮಟೆ, ಮಂಗಳವಾದ್ಯ ಸಹಿತ ಕಲಾ ತಂಡಗಳ ನೃತ್ಯ ಪ್ರದರ್ಶನ ನೆರೆದಿದ್ದ ಭಕ್ತರ ಆಕರ್ಷಣೆಯಾಗಿತ್ತು.

ವರ್ತೂರು, ವೈಟ್‌ಫೀಲ್ಡ್, ಸಿದ್ದಾಪುರ, ತೂಬರಹಳ್ಳಿ, ನಲ್ಲೂರಹಳ್ಳಿ, ವರ್ತೂರು ಕೊಡಿ ಸೇರಿ ಸುತ್ತಮುತ್ತಲ ಹಳ್ಳಿಗಳ ಜನ ರಥೋತ್ಸವದಲ್ಲಿ ಪಾಲ್ಗೊಂಡಿದ್ದರು. ಭಕ್ತರಿಗೆ ಅನ್ನ ದಾಸೋಹ, ಪಾನಕ, ಮಜ್ಜಿಗೆ ವಿತರಿಸಲಾಯಿತು.

ಶಾಸಕ ಅರವಿಂದ ಲಿಂಬಾವಳಿ, ಪಾಲಿಕೆ ಮಾಜಿ ಸದಸ್ಯ ಉದಯಕುಮಾರ್, ಮುಖಂಡರಾದ ವೇಣುಗೋಪಾಲ, ನಾರಾಯಣಸ್ವಾಮಿ, ರಾಜೇಶ್ ಇದ್ದರು.

₹1.50 ಕೋಟಿ ಆನ್‌ಲೈನ್ ವಂಚನೆ

30 ದಿನಗಳಲ್ಲಿ ₹50 ಲಕ್ಷ ಮಾಡಿಕೊಡುವುದಾಗಿ ಆಮಿಷ

ಅಪರಾಧ ಸುದ್ದಿ

ತುಮಕೂರು: ಶಿರಾ ಪಟ್ಟಣದ ಜ್ಯೋತಿ ನಗರದ ರಾಜಣ್ಣ, ಚಿದಾನಂದಮೂರ್ತಿ, ಶಿಲ್ಪಾ, ದೇವರಾಜಪ್ಪ ಎಂಬುವರು ಆನ್‌ಲೈನ್ ವಂಚನೆಗೆ ಒಳಗಾಗಿ ₹1.50 ಕೋಟಿ ಕಳೆದುಕೊಂಡಿರುವುದು ಘಟನೆ ತಡವಾಗಿ ಬೆಳಕಿಗೆ ಬಂದಿದೆ.

ದಿ ಈಕ್ವಿಟ್ ರೀಸರ್ಚ್ ಗ್ರೂಪ್ ಇಂಡಿಯಾ ಕಂಪನಿಯ ಪವರ್ ಇನ್‌ವೆಸ್ಟ್‌ಮೆಂಟ್ ಪ್ಲಾನ್ ಪ್ರಕಾರ ₹7.50 ಲಕ್ಷ ಹೂಡಿಕೆ ಮಾಡಿದರೆ ಮುಂದಿನ 30 ದಿನಗಳಲ್ಲಿ ₹56 ಲಕ್ಷ ಮಾಡಿಕೊಡುವುದಾಗಿ ಹೇಳಿ ಅಭಿಷೇಕ್ ಸಿಂಗ್ ಎಂಬ ಅಪರಿಚಿತ ವ್ಯಕ್ತಿ ಏ. 4ರಂದು ರಾಜಣ್ಣ ಎಂಬುವರಿಗೆ ಕರೆ ಮಾಡಿದ್ದರು.

ರಾಜಣ್ಣ, ಚಿದಾನಂದಮೂರ್ತಿ, ಶಿಲ್ಪಾ, ದೇವರಾಜಪ್ಪ ಸೇರಿಕೊಂಡು ಏ.4ರಿಂದ 11ರ ವರೆಗೆ ಅಭಿಷೇಕ್ ಸಿಂಗ್ ಸೂಚಿಸಿದ ಬ್ಯಾಂಕ್ ಖಾತೆಗೆ ₹30 ಲಕ್ಷವನ್ನು ಅಪರಿಚಿತ ವ್ಯಕ್ತಿ ಸೂಚಿಸಿದ ಬ್ಯಾಂಕ್ ಖಾತೆಗೆ ವರ್ಗಾವಣೆ ಮಾಡಿ ದ್ದರು. ಮತ್ತೆ ಏ. 12ರಂದು ಕರೆ ಮಾಡಿ ನಿಮಗೆ ₹3 ಕೋಟಿ ಲಾಭವಾಗಿದೆ. ಅದರಲ್ಲಿ ಶೇ 15ರಷ್ಟು ಕಮಿಷನ್ ಹಣ ಕಳಿಸಿಕೊಡಿ ಎಂದು ಕೇಳಿದ್ದರು. ಅದರಂತೆ ಮತ್ತೆ ನಾಲ್ವರು ಸೇರಿ ₹45 ಲಕ್ಷ ವರ್ಗಾವಣೆ ಮಾಡಿದ್ದರು.

ನಂತರ ಮತ್ತೊಮ್ಮೆ ಕರೆ ಮಾಡಿ ಜಿಎಸ್‌ಟಿ ಶೇ 18ರಷ್ಟು ಹಣ ವರ್ಗಾವಣೆ ಮಾಡಿದರೆ ನಿಮ್ಮ ಲಾಭದ ಹಣವನ್ನು ವರ್ಗಾವಣೆ ಮಾಡುತ್ತೇವೆ ಎಂದು ನಂಬಿಸಿದ್ದರು. ಅದರಂತೆ ಏ. 13 ಮತ್ತು 14 ರಂದು ₹54 ಲಕ್ಷವನ್ನು ಜಮೆ ಮಾಡಿದ್ದರು. ನಂತರ ಮತ್ತೆ ಏಪ್ರಿಲ್ 16 ರಂದು ₹27 ಲಕ್ಷ ಅಭಿಷೇಕ್ ಸಿಂಗ್ ಸೂಚಿಸಿದ ಬ್ಯಾಂಕ್ ಖಾತೆಗೆ ವರ್ಗಾವಣೆ ಮಾಡಿದ್ದಾರೆ.

ಈ ರೀತಿಯಾಗಿ ಒಟ್ಟು ₹1,56,29,736 ಜಮೆ ಮಾಡಿದ್ದಾರೆ. ಕೊನೆಗೆ ವಂಚನೆಗೆ ಒಳಗಾಗಿರುವುದು ಅರಿವಾಗಿದ್ದು ನ್ಯಾಯ ಕೊಡಿಸುವಂತೆ ಪೊಲೀಸ್ ಠಾಣೆಯ ಮೆಟ್ಟಿಲು ಹತ್ತಿ ದ್ದಾರೆ. ತುಮಕೂರು ಸಿಇಎನ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಪೊಲೀಸರು ತನಿಖೆ ಕೈಗೊಂಡಿದ್ದಾರೆ.

'ಓಪನ್ ಹಾರ್ಟ್' ಕಾರ್ಯಕ್ರಮ ಇಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸೇಂಟ್ ಜೋಸೆಫ್ ಕಾಲೇಜಿನ ಸಾರ್ವಜನಿಕ ಸಂಪರ್ಕ ಕಚೇರಿ ಹಮ್ಮಿಕೊಂಡಿರುವ 3ನೇ ಆವೃತ್ತಿಯ 'ಓಪನ್ ಹಾರ್ಟ್' ಕಾರ್ಯಕ್ರಮವು ಬುಧವಾರ ನಡೆಯಲಿದೆ.

'ಗಾಯಕ ರಘು ದೀಕ್ಷಿತ್ ಹಾಗೂ ಸಾಮಾಜಿಕ ಹೋರಾಟಗಾರ್ತಿ ಇರೋಮ್ ಶರ್ಮಿಳಾ ಚಾನು ಅವರು ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ' ಎಂದು ಪ್ರಕಟಣೆ ತಿಳಿಸಿದೆ.

'ತಮ್ಮ ಮನದಾಳದ ಭಾವನೆಗಳನ್ನು ಹಂಚಿಕೊಳ್ಳುವುದಕ್ಕೆ ಸಾಧಕರಿಗೆ ವೇದಿಕೆ ಕಲ್ಪಿಸುವುದು ಈ ಕಾರ್ಯಕ್ರಮದ ಉದ್ದೇಶ. ಅವರ ಯಶೋಗಾಥೆಯ ಮೂಲಕ ಯುವ ಸಮುದಾಯವನ್ನು ಸಾಧನೆಯತ್ತ ಪ್ರೇರೇಪಿಸುವುದೂ ಕಾರ್ಯಕ್ರಮದ ಗುರಿ' ಎಂದು ಪ್ರಕಟಣೆಯು ಮಾಹಿತಿ ನೀಡಿದೆ.

ನಗರದಲ್ಲಿ ಇಂದು

ವಿ.ಸೋಮಣ್ಣ ಪ್ರಶಸ್ತಿ ಪ್ರದಾನ ಮತ್ತು ಕೆಂಪೇಗೌಡರ ಸಾಧನೆಯ ಗಾಯನ ಧ್ವನಿಸುರುಳಿ ಬಿಡುಗಡೆ: ನಿರ್ಮಲಾನಂದನಾಥ ಸ್ವಾಮೀಜಿ, ವೀರೇಶಾನಂದ ಸರಸ್ವತೀ ಸ್ವಾಮೀಜಿ, ಉದ್ಘಾಟನೆ–ತೇಜಸ್ವಿ ಸೂರ್ಯ, ಅಧ್ಯಕ್ಷತೆ–ವಿ.ಸೋಮಣ್ಣ, ಅಭಿನಂದನಾ ನುಡಿ–ದೊಡ್ಡರಂಗೇಗೌಡ, ಅತಿಥಿಗಳು–ಶೈಲಜಾ ಸೋಮಣ್ಣ, ಅರುಣ್ ಸೋಮಣ್ಣ, ಅ.ದೇವೇಗೌಡ, ಆಯೋಜನೆ–ನಾಡಪ್ರಭು ವಿದ್ಯಾಸಂಸ್ಥೆಗಳು, ಸ್ಥಳ–ಬಾಲಗಂಗಾಧರನಾಥ ಸ್ವಾಮೀಜಿ ಕ್ರೀಡಾಂಗಣ, ಎಂ.ಸಿ.ಬಡಾವಣೆ, ವಿಜಯನಗರ, ಸಂಜೆ 5



ಶಂಕರ ಜಯಂತಿ ಮತ್ತು ಸುವರ್ಣ ಮಹೋತ್ಸವ ಸಂಗೀತೋತ್ಸವದ ಉದ್ಘಾಟನೆ: ಅತಿಥಿಗಳು–ಕೃಷ್ಣಕುಮಾರ್, ಅಧ್ಯಕ್ಷೀಯ ಭಾಷಣ–ಎಂ.ಅನಂತ್, ಸಂಗೀತ ಕಾರ್ಯಕ್ರಮ–ಎಚ್.ಎಸ್. ಅನಸೂಯ ಕುಲಕರ್ಣಿ, ಜ್ಯೋತ್ಸ್ನಾ ಮಂಜುನಾಥ್, ಬಿ.ಎನ್.ರಮೇಶ್, ಆರ್. ಕಾರ್ತಿಕ್, ಆಯೋಜನೆ–ಶ್ರೀತ್ಯಾಗರಾಜ ಗಾನಸಭಾ ಟ್ರಸ್ಟ್, ಸ್ಥಳ–ಬಾಲಮೋಹನ ವಿದ್ಯಾಮಂದಿರ, ರಾಜಾಜಿನಗರ, ಸಂಜೆ 5

ಜಿ.ವೇದಾಂತ ಅಯ್ಯಂಗಾರ್ ಅವರ ಪುಣ್ಯಸ್ಮರಣೆ ಮತ್ತು ವಾರ್ಷಿಕ ವಸಂತ ಸಂಗೀತೋತ್ಸವ: ಗಾಯನ–ಸಂಜಯ್ ಸುಬ್ರಹ್ಮಣ್ಯನ್, ವಾದ್ಯ ಸಹಕಾರ–ಎಸ್. ವರದರಾಜನ್, ಬಿ.ವೆಂಕಟೇಶ್, ಬಿ.ರಾಜಶೇಖರ್, ಆಯೋಜನೆ–ಶ್ರೀರಾಮ ಲಲಿತ ಕಲಾ ಮಂದಿರ, ಸ್ಥಳ–ಬೆಂಗಳೂರು ಗಾಯನ ಸಮಾಜದ ಸಭಾಂಗಣ, ಕೆ.ಆರ್. ರಸ್ತೆ, ಸಂಜೆ 5.30



ಬಿಸಿಯೂಟಕ್ಕೆ ಬೇಕಾದ ತರಕಾರಿಗಳು ತೋಟದಲ್ಲೇ ಲಭ್ಯ

ಶಾಲೆಯ ಅಂಗಳದಲ್ಲಿ 'ಪೌಷ್ಟಿಕ ಉದ್ಯಾನ'

• ಮನೋಹರ್ ಎಂ.



ತುಮಕೂರಿನ ನೊಣವಿನಕೆರೆ ಸರ್ಕಾರಿ ಶಾಲೆಯ ಆವರಣದಲ್ಲಿ ಬೆಳೆದಿರುವ ಪೌಷ್ಟಿಕ ಉದ್ಯಾನ

ಬೆಂಗಳೂರು: 'ಪೌಷ್ಟಿಕ ಉದ್ಯಾನ'ದ ಪರಿಕಲ್ಪನೆಯಡಿ ಬಿಸಿಯೂಟ ತಯಾರಿಗೆ ಬೇಕಾಗುವ ತರಕಾರಿ ಮತ್ತು ಸೊಪ್ಪುಗಳನ್ನು ಸರ್ಕಾರಿ ಶಾಲೆಗಳ ಅಂಗಳದಲ್ಲೇ ಮಕ್ಕಳಿಂದ ಬೆಳೆಸಲಾಗುತ್ತಿದೆ. ಈ ಮೂಲಕ ಮಕ್ಕಳಿಗೆ ಪೌಷ್ಟಿಕತೆ ಮತ್ತು ಕೃಷಿಯ ಮಹತ್ವ ತಿಳಿಸುವ ಕೆಲಸವನ್ನು ಪ್ರೊ.ಗೋಪಾಲ್ ನಾಯಕ್ ಮತ್ತು ತಂಡ ಮಾಡುತ್ತಿದೆ.

ತುಮಕೂರು ಜಿಲ್ಲೆಯ ಐದು ಸರ್ಕಾರಿ ಶಾಲೆಗಳಲ್ಲಿ ಈಗಾಗಲೇ ಕೈತೋಟಗಳನ್ನು ಬೆಳೆಸಿ ಯಶಸ್ವಿಯಾಗಿರುವ ಇವರು ಬೆಂಗಳೂರಿನ ಆಯ್ದ ಶಾಲೆಗಳಲ್ಲೂ ಪೌಷ್ಟಿಕ ಉದ್ಯಾನ ಬೆಳೆಸಲು ಸಜ್ಜಾಗಿದ್ದಾರೆ.

ಪ್ರಜಾವಾಣಿ ವಿಶೇಷ

ಗೋಪಾಲ್ ನಾಯಕ್ ಬೆಂಗಳೂರಿನ ಭಾರತೀಯ ನಿರ್ವಹಣಾ ಸಂಸ್ಥೆಯಲ್ಲಿ (ಐಐಎಂಬಿ) ಅರ್ಥಶಾಸ್ತ್ರ ಮತ್ತು ಸಮಾಜ ವಿಜ್ಞಾನ ವಿಭಾಗದ ಪ್ರಾಧ್ಯಾಪಕರು. ಸಂಶೋಧಕ ಶಿವಂ ಸಾಕ್ಷಿ ಜತೆಗೂಡಿ ತುಮಕೂರು ಜಿಲ್ಲೆಯ ನೊಣವಿನಕೆರೆಯ ಕರ್ನಾಟಕ ಪಬ್ಲಿಕ್ ಶಾಲೆಯಲ್ಲಿ ಪ್ರಾಯೋಗಿಕವಾಗಿ ಪೌಷ್ಟಿಕ ಉದ್ಯಾನ ಬೆಳೆಸಿದ್ದಾರೆ. ಜಿಲ್ಲೆಯ ಇನ್ನೂ ನಾಲ್ಕು ಸರ್ಕಾರಿ ಶಾಲೆಗಳಲ್ಲೂ ಇದೇ ಮಾದರಿಯ ಕೈತೋಟಗಳನ್ನು ಬೆಳೆಸಲಾಗಿದೆ.

'ಉನ್ನತ ಭಾರತ ಅಭಿಯಾನ'ದಡಿ ಈ ಉದ್ಯಾನ ಬೆಳೆಸುವ ಆಲೋಚನೆ ಮೂಡಿತು. ಇದರ ಫಲವಾಗಿ ನೊಣವಿನಕೆರೆ ಶಾಲೆ ಅಂಗಳದ 9 ಗುಂಟೆಯಲ್ಲಿ 12ಕ್ಕೂ ಹೆಚ್ಚು ಬಗೆಯ ತರಕಾರಿಗಳನ್ನು ಬೆಳೆಯಲಾಗುತ್ತಿದೆ. ಅದನ್ನೇ ಅಲ್ಲಿನ ವಿದ್ಯಾರ್ಥಿಗಳಿಗೆ ನೀಡುವ ಬಿಸಿಯೂಟಕ್ಕೆ ಬಳಸಲಾಗುತ್ತಿದೆ. ಶಾಲೆಯ ಮಕ್ಕಳಿಗೆ ಸಾಕಾಗುವಷ್ಟು ತರಕಾರಿ–ಸೊಪ್ಪು ಕೈತೋಟದಲ್ಲೇ ಸಿಗುತ್ತಿದೆ' ಎಂದು ಪ್ರೊ.ಗೋಪಾಲ್ ನಾಯಕ್ 'ಪ್ರಜಾವಾಣಿ'ಗೆ ತಿಳಿಸಿದರು.

'ತೋಟ ಬೆಳೆಸಲು ಭಾರತೀಯ ತೋಟಗಾರಿಕೆ ಸಂಶೋಧನಾ ಸಂಸ್ಥೆಯವರು (ಐಐಎಚ್ಆರ್) ತರಕಾರಿ ಮತ್ತು ಸೊಪ್ಪಿನ ಬೀಜಗಳು, ನೀರಾವರಿ ಸೌಕರ್ಯಗಳ ಮೂಲಕ ಸಹಕಾರ ನೀಡಿದರು. ತೋಟ ಬೆಳೆಸುವುದು, ಅವುಗಳ ನಿರ್ವಹಣೆಯ ಮಾರ್ಗದರ್ಶನವೂ ನೀಡಿದರು. ಈಗ ಮಕ್ಕಳೇ ತೋಟದ ಉಸ್ತುವಾರಿ ನೋಡಿಕೊಳ್ಳುತ್ತಿದ್ದಾರೆ' ಎಂದರು.

10 ಶಾಲೆಗಳಲ್ಲಿ ಪೌಷ್ಟಿಕ ಉದ್ಯಾನ

'ನಗರ ಪ್ರದೇಶದ ಶಾಲಾ ಮಕ್ಕಳಿಗೆ ಕೃಷಿಯ ಬಗ್ಗೆ ಮಾಹಿತಿ ಕಡಿಮೆ ಇರುವುದರಿಂದ ಬೆಂಗಳೂರಿನ ಹೆಸರಘಟ್ಟ ಮತ್ತು ದಾಸರಹಳ್ಳಿ ಭಾಗದಲ್ಲಿ ಆಯ್ದ 10 ಸರ್ಕಾರಿ ಶಾಲೆಗಳಲ್ಲಿ ಪೌಷ್ಟಿಕ ಉದ್ಯಾನ ಬೆಳೆಸಲು ಸಿದ್ಧತೆ ನಡೆಸಿದ್ದೇವೆ' ಎಂದು ಗೋಪಾಲ್ ನಾಯಕ್ ಹೇಳಿದರು.



ಪೌಷ್ಟಿಕ ಉದ್ಯಾನದಲ್ಲಿ ಬೆಳೆದಿರುವ ತರಕಾರಿಗಳು

'ಈ ಶಾಲೆಗಳಿಗೆ 'ಅಕ್ಷಯ ಪಾತ್ರೆ' ಸಂಸ್ಥೆಯಿಂದ ಬಿಸಿಯೂಟ ಪೂರೈಕೆಯಾಗುತ್ತಿದೆ. ಉದ್ದೇಶಿತ ಶಾಲೆಗಳ ಅಂಗಳದಲ್ಲಿ ಬೆಳೆಯುವ ಸೊಪ್ಪು ಮತ್ತು ತರಕಾರಿಗಳನ್ನು ಅಕ್ಷಯ ಪಾತ್ರೆ ಸಂಸ್ಥೆಗೇ ನೀಡಲಿದ್ದೇವೆ. ಇದಕ್ಕೆ ಸಂಸ್ಥೆಯಿಂದಲೂ ಸಹಕಾರ ಸಿಕ್ಕಿದೆ. ಆಸಕ್ತ ಶಾಲೆಯವರು ಮುಂದೆ ಬಂದರೆ ಕೈತೋಟ ಬೆಳೆಸಲು ಮಾರ್ಗದರ್ಶನ ನೀಡುತ್ತೇವೆ' ಎಂದರು.

ಸಂಪರ್ಕ:8897520909

6ರಂದು ಸನ್ಯಾಸ ದೀಕ್ಷೆ: ಪುಟ್ಟಸ್ವಾಮಿ

ಪ್ರಜಾವಾಣಿ ವಾರ್ತೆ



ಪುಟ್ಟಸ್ವಾಮಿ

ಬೆಂಗಳೂರು: '50 ವರ್ಷಗಳ ರಾಜಕೀಯ ಜೀವನದಿಂದ ನಿವೃತ್ತಿ ಪಡೆದು ಮೇ 6ರಂದು ಸನ್ಯಾಸ ದೀಕ್ಷೆ ಪಡೆಯುತ್ತಿದ್ದೇನೆ. ಆ ಮೂಲಕ ತೈಲೇಶ್ವರ ಗಾಣಿಗರ ಮಹಾ ಸಂಸ್ಥಾನ ಮಠದ ಮೊದಲ ಪೀಠಾಧಿಪತಿಯಾಗಲಿದ್ದೇನೆ' ಎಂದು ಬಿಜೆಪಿ ಮುಖಂಡ ಬಿ.ಜೆ.ಪುಟ್ಟಸ್ವಾಮಿ ತಿಳಿಸಿದರು.

'ರಾಜರಾಜೇಶ್ವರಿ ದೇವಸ್ಥಾನದ ಕೈಲಾಸ ಮಠದ ಜಯೇಂದ್ರತೀರ್ಥ ಪುರಿ ಸ್ವಾಮಿಜಿ ಅವರಿಂದ ದೀಕ್ಷೆ ಸ್ವೀಕರಿಸಲಿದ್ದೇನೆ' ಎಂದು ಅವರು ಸುದ್ದಿಗೋಷ್ಠಿಯಲ್ಲಿ ಮಂಗಳವಾರ ಹೇಳಿದರು.

'ನಾನು ಕಟ್ಟಿರುವ ಸಂಸ್ಥೆಯಲ್ಲಿ ಬಡ ಮತ್ತು ಅನಾಥ ಮಕ್ಕಳಿಕೆ ವಿದ್ಯೆ ಮತ್ತು ಅನ್ನ ದಾಸೋಹ ಮಾಡುತ್ತ ಜೀವನ ಕಳೆಯಬೇಕೆಂಬ ತೀರ್ಮಾನಕ್ಕೆ ಬಂದಿದ್ದೇನೆ' ಎಂದರು.

'ಮೇ 4ರಂದೇ ಕೈಲಾಸ ಮಠಕ್ಕೆ ಹೋಗುತ್ತಿದ್ದೇನೆ. 6ರಂದು ದೀಕ್ಷೆ ಪಡೆದು 8ರಂದು ಮಠಕ್ಕೆ ತೆರಳುತ್ತೇನೆ. ಮೇ 15ರಂದು ಪಟ್ಟಾಭಿಷೇಕ ಕೂಡ ನಡೆಯಲಿದೆ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸೇರಿದಂತೆ ವಿವಿಧ ರಾಜಕೀಯ ಪಕ್ಷಗಳ ಮುಖಂಡರು, 20 ಮಠಾಧೀಶರು ಭಾಗವಹಿಸಲಿದ್ದಾರೆ' ಎಂದು ವಿವರಿಸಿದರು.

ಗರ್ಭಪಾತ ನಿಷೇಧ ಕರಡು: ಜೋ ಬೈಡನ್ ಟೀಕೆ

ವಾಷಿಂಗ್ಟನ್(ರಾಯಿಟರ್ಸ್): ಗರ್ಭಪಾತವನ್ನು ರಾಷ್ಟ್ರವ್ಯಾಪಿ ಕಾನೂನುಬದ್ಧಗೊಳಿಸಿರುವ 1973ರ ರೋಯ್ ವಿ.ವೇಡ್ ನಿರ್ಧಾರವನ್ನು ರದ್ದು ಪಡಿಸುವ ಸುಪ್ರೀಂ ಕೋರ್ಟ್‌ನ ಕರಡನ್ನು ಅಮೆರಿಕ ಅಧ್ಯಕ್ಷ ಜೋ ಬೈಡನ್ ಮಂಗಳವಾರ ಟೀಕಿಸಿದ್ದಾರೆ.

'ಇದು ಅಮೆರಿಕದ ನ್ಯಾಯಾಂಗ ವ್ಯವಸ್ಥೆಯಲ್ಲಿ ಮೂಲಭೂತವಾದ ಬದಲಾವಣೆಯಾಗಿದೆ' ಎಂದು ಬೈಡನ್ ಹೇಳಿದ್ದಾರೆ. ಸಲಿಂಗ ವಿವಾಹ ಸೇರಿದಂತೆ ಇತರ ಹಕ್ಕುಗಳ ಮೇಲೂ ಇದರ ಪರಿಣಾಮ ಬೀರಲಿದೆ ಎಂದಿದ್ದಾರೆ.

ಸುಪ್ರೀಂ ಕೋರ್ಟ್‌ನ ಕರಡಿನ ಕುರಿತು 'ಪೊಲಿಟಿಕೊ' ಎಂಬ ಮಾಧ್ಯಮದಲ್ಲಿ ಪ್ರಕಟವಾಗಿರುವ ಸುದ್ದಿ ಅಧಿಕೃತವಾಗಿದೆ ಎಂದು ನ್ಯಾಯಾಲಯವು ದೃಢಪಡಿಸಿದೆ. ಆದರೆ, ಇದು ನ್ಯಾಯಮೂರ್ತಿಗಳ ಅಂತಿಮ ನಿರ್ಧಾರವನ್ನು ಪ್ರತಿನಿಧಿಸುವುದಿಲ್ಲ ಎಂದಿದೆ.

'ಭೂಮಿ ಶೋಷಣೆಯಲ್ಲಿ ಭಾರತದ ಪಾತ್ರವಿಲ್ಲ'

ಕೊಪನ್‌ಹೇಗನ್ (ಪಿಟಿಐ): 'ಭೂಮಿಯ ಶೋಷಣೆಯಲ್ಲಿ ಭಾರತ ಯಾವುದೇ ಪಾತ್ರವನ್ನು ಹೊಂದಿಲ್ಲ. ಬದಲಾಗಿ, ಜನರ ಬೆಂಬಲದೊಂದಿಗೆ ಭೂಮಿಯನ್ನು ಉಳಿಸುವ ಪ್ರಯತ್ನದಲ್ಲಿ ಭಾರತ ಮುಂಚೂಣಿಯಲ್ಲಿ ಇದೆ' ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಮಂಗಳವಾರ ಹೇಳಿದರು.

ಭಾರತೀಯರೊಂದಿಗೆ ಇಲ್ಲಿ ಸಂವಾದದಲ್ಲಿ ಮಾತನಾಡಿದ ಅವರು, ನವೀಕರಿಸಬಲ್ಲ ಇಂಧನ ಬಳಕೆಯನ್ನು ಉತ್ತೇಜಿಸಲು ಸರ್ಕಾರ ಕೈಗೊಂಡ ಕ್ರಮಗಳು ಹಾಗೂ ಗ್ಲಾಸ್ಗೋ ಹವಾಮಾನ ವೈಪರೀತ್ಯ ತಡೆ ಶೃಂಗ ಸಭೆಯಲ್ಲಿ ಭಾರತ ತೆಗೆದುಕೊಂಡ ಬದ್ಧತೆಗಳ ಬಗ್ಗೆಯೂ ಉಲ್ಲೇಖಿಸಿದರು.

'ಭಾರತ ತನ್ನ ಹವಾಮಾನ ಕ್ರಮಗಳನ್ನು ಪೂರೈಸಲು ಸಮರ್ಥವಾಗಿದೆ. ಏಕೆಂದರೆ, ಭಾರತವು ಇತರರಂತೆ ಭೂಮಿಯನ್ನು ಉಳಿಸುವ ಜವಾಬ್ದಾರಿಯನ್ನು ಕೇವಲ ಬಹುಪಕ್ಷೀಯ ಸಂಸ್ಥೆಗಳ ಮೇಲೆ ಹೊರಿಸಿಲ್ಲ. ಜಗತ್ತಿನ ರಕ್ಷಣೆ ಪ್ರತಿಯೊಬ್ಬ ನಾಗರಿಕನ ಜವಾಬ್ದಾರಿ ಎಂಬುದಾಗಿ ಪರಿಗಣಿಸಿದೆ' ಎಂದು ಅವರು ಹೇಳಿದರು.

ಈ ಸಂವಾದ ಕಾರ್ಯಕ್ರಮದಲ್ಲಿ ಡೆನ್ಮಾರ್ಕ್ ಪ್ರಧಾನಿ ಮೆಟ್ಟೆ ಫ್ರೆಡೆರಿಕ್‌ಸೆನ್ ಅವರೂ ಭಾಗವಹಿಸಿದ್ದರು. ಈ ವೇಳೆ ಮೋದಿ ಡೆನ್ಮಾರ್ಕ್ ಪ್ರಧಾನಿಯನ್ನು 'ಸ್ನೇಹಿತೆ' ಎಂದು ಜನರಿಗೆ ಪರಿಚಯಿಸಿದರು.

ಕಾರ್ಯಕ್ರಮದಲ್ಲಿ ಡೆನ್ಮಾರ್ಕ್‌ನಲ್ಲಿರುವ ಭಾರತೀಯ ವಿದ್ಯಾರ್ಥಿಗಳು, ಸಂಶೋಧಕರು, ವೃತ್ತಿಪರರು, ಉದ್ಯೋಗಿಗಳು ಸೇರಿದಂತೆ 1000ಕ್ಕೂ ಹೆಚ್ಚು ಮಂದಿ ಪಾಲ್ಗೊಂಡಿದ್ದರು.ಡ

ಅಪರಾಧಿ ಶಿಕ್ಷೆ ಹೆಚ್ಚಿಸಿದ ಹೈಕೋರ್ಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಾಲಕಿಯ ಮೇಲೆ ಅತ್ಯಾಚಾರವೆಸಗಿದ ಆರೋಪ ಸಾಬೀತಾದ ಹಿನ್ನೆಲೆಯಲ್ಲಿ ಮುಂಡರಗಿಯ ಶಂಕರಪ್ಪ ಎಂಬ ಅಪರಾಧಿಗೆ ವಿಚಾರಣಾ ನ್ಯಾಯಾಲಯ ವಿಧಿಸಿದ್ದ ಏಳು ವರ್ಷಗಳ ಶಿಕ್ಷೆಯನ್ನು, ಹೈಕೋರ್ಟ್ ಹತ್ತು ವರ್ಷಕ್ಕೆ ಹೆಚ್ಚಿಸಿದೆ.

ಶಿಕ್ಷೆ ಹೆಚ್ಚಳಕ್ಕೆ ಪ್ರಾಸಿಕ್ಯೂಷನ್ ಸಲ್ಲಿಸಿದ್ದ ಮೇಲ್ಮನವಿಯನ್ನು ಧಾರವಾಡ ಪೀಠದ ನ್ಯಾಯಮೂರ್ತಿ ಎಚ್.ಟಿ.ನರೇಂದ್ರ ಪ್ರಸಾದ್ ಮತ್ತು ನ್ಯಾಯಮೂರ್ತಿ ರಾಜೇಂದ್ರ ಬದಾಮಿಕರ್ ಅವರಿದ್ದ ವಿಭಾ ಗೀಯ ನ್ಯಾಯಪೀಠ ಮಾನ್ಯ ಮಾಡಿದೆ.

'ವಿಚಾರಣಾ ನ್ಯಾಯಾಲಯವು ಪೋಕ್ಸೊ ಕಾಯ್ದೆಯ ಕಲಂ 42 ಅನ್ನು ಆಧರಿಸಿ ಕೇವಲ ಏಳು ವರ್ಷಗಳ ಶಿಕ್ಷೆ ನೀಡಿರುವುದು ಸರಿಯಲ್ಲ. ಈ ಪ್ರಕರಣದಲ್ಲಿ ಪೋಕ್ಸೊ ಕಾಯ್ದೆ ಕಲಂ 6 376(2)(1) ಅನ್ವಯ 10 ವರ್ಷಗಳ ಶಿಕ್ಷೆ ವಿಧಿಸಬಹುದಾಗಿದೆ' ಎಂದು ನ್ಯಾಯಪೀಠ ಅಭಿಪ್ರಾಯಪಟ್ಟಿದೆ. ಅಪರಾಧಿಗೆ 2018ರ ಏಳು ವರ್ಷ ಶಿಕ್ಷೆ ವಿಧಿಸಲಾಗಿತ್ತು.

ಮುಂದುವರಿದ ಜೋರು ಮಳೆ



ನಗರದಲ್ಲಿ ಮಂಗಳವಾರ ರಾತ್ರಿ ಮಳೆ ಸುರಿದಿದ್ದರಿಂದ ಕಂಟೋನ್ಮೆಂಟ್ ಬಳಿಯ ಕೆಳಸೇತುವೆಯಲ್ಲಿ ನೀರು ಧಾರಾಕಾರವಾಗಿ ಹರಿಯಿತು



ರಸ್ತೆಯಲ್ಲಿ ಹರಿಯುತ್ತಿದ್ದ ನೀರಿನಲ್ಲೇ ಸಾರ್ವಜನಿಕರೊಬ್ಬರು ತಮ್ಮ ದ್ವಿಚಕ್ರ ವಾಹನ ತಳ್ಳಿಕೊಂಡು ಹೋದರು – ಪ್ರಜಾವಾಣಿ ಚಿತ್ರಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಕೆಲದಿನಗಳಿಂದ ಬಿಡುವು ಕೊಡುತ್ತಲೇ ಜೋರು ಮಳೆ ಆಗುತ್ತಿದ್ದು, ಮಂಗಳವಾರ ಸಂಜೆಯೂ ಹಲವೆಡೆ ಮಳೆ ಸುರಿಯಿತು.

ಬಹುತೇಕ ಪ್ರದೇಶಗಳಲ್ಲಿ ಮಂಗಳವಾರ ಬೆಳಿಗ್ಗೆಯಿಂದಲೇ ಬಿಸಿಲಿನ ಜೊತೆ, ಆಗಾಗ ಮೋಡ ಕವಿದ ವಾತಾವರಣ ಕಾಣಿಸಿಕೊಂಡಿತು. ಸಂಜೆ ವೇಳೆ ಸುರಿಯ ಲಾರಂಭಿಸಿದ ಮಳೆ, ರಾತ್ರಿಯವರೆಗೂ ಇತ್ತು.

ಗಾಂಧಿನಗರ, ಮೆಜೆಸ್ಟಿಕ್, ಎಂ.ಜಿ. ರಸ್ತೆ, ಶಿವಾಜಿನಗರ, ಅಶೋಕನಗರ, ಕೋರಮಂಗಲ, ಆಡುಗೋಡಿ, ಮಡಿವಾಳ, ಸುತ್ತಮುತ್ತ ಸ್ಥಳಗಳಲ್ಲಿ ಜೋರು ಮಳೆ ಇತ್ತು.

ರಾಜಾಜಿನಗರ, ವಿಜಯನಗರ, ಯಶವಂತಪುರ ಹಾಗೂ ಇತರೆ ಪ್ರದೇಶಗಳಲ್ಲಿ ತುಂತುರು ಮಳೆಯಾಯಿತು. ಕಂಟೋನ್ಮೆಂಟ್ ರೈಲ್ವೆ ನಿಲ್ದಾಣ ಬಳಿಯ ಕೆಳಸೇತುವೆಯಲ್ಲಿ ನೀರು ಧಾರಾಕಾರವಾಗಿ ಹರಿಯಿತು. ಅದರಲ್ಲೇ ವಾಹನಗಳು ಸಂಚರಿಸಿದವು. ಕೆಲ ವಾಹನಗಳು ಕೆಟ್ಟು ನಿಂತಿದ್ದವು. ಅವುಗಳನ್ನು ಸ್ಥಳೀಯರೇ ತಳ್ಳಿ ಸುರಕ್ಷಿತ ಸ್ಥಳಕ್ಕೆ ತಲುಪಿಸಿದರು.

ಕನ್ನಿಂಗಹ್ಯಾಮ್ ರಸ್ತೆ ಹಾಗೂ ಕೋರಮಂಗಲದ 17ನೇ ಮುಖ್ಯರಸ್ತೆಯಲ್ಲಿ ಮರದ ಕೊಂಬೆಗಳು ಬಿದ್ದಿದ್ದವು. ಇದನ್ನು ಹೊರತುಪಡಿಸಿ ಬೇರೆ ಯಾವುದೇ ಘಟನೆಗಳು ಸಂಭವಿಸಿಲ್ಲವೆಂದು ಬಿಬಿಎಂಪಿ ಸಹಾಯವಾಣಿ ಸಿಬ್ಬಂದಿ ತಿಳಿಸಿದ್ದಾರೆ.



ಅಪಘಾತ ನಡೆದ ಸ್ಥಳ

ಕಾರಿಗೆ ಗುದ್ದಿದ ಟಿಪ್ಪರ್: ದಂಪತಿ, ಮಗು ಸಾವು

ಕುಣಿಗಲ್ (ತುಮಕೂರು): ಹುಲಿಯೂರುದುರ್ಗದ ಬಳಿ ಮಂಗಳವಾರ ಮಧ್ಯಾಹ್ನ ಸಂಭವಿಸಿದ ಭೀಕರ ರಸ್ತೆ ಅಪಘಾತದಲ್ಲಿ ಚನ್ನಪಟ್ಟಣದ ದಂಪತಿ ಹಾಗೂ ಅವರ ಪುಟ್ಟ ಮಗು ಸ್ಥಳದಲ್ಲಿಯೇ ಸಾವನ್ನಪ್ಪಿದ್ದಾರೆ. ಮತ್ತೊಂದು ಮಗು ತೀವ್ರವಾಗಿ ಗಾಯಗೊಂಡಿದೆ.

ಅರಮನೆ ಹೊನ್ನಮಾಚನಹಳ್ಳಿ ಬಸವಣ್ಣ ದೇವಾಲಯದ ಬಳಿ ಕಾರಿಗೆ ಟಿಪ್ಪರ್ ಗುದ್ದಿದೆ. ಕಾರಿನಲ್ಲಿದ್ದ ಚನ್ನಪಟ್ಟಣದ ಶಾಮಿಯಾ ಮೊಹಲ್ಲಾದ ಸೈಯದ್ ಮಹಮ್ಮದ್ ನಜ್ಮಿ (42), ಪತ್ನಿ ನಾಜಿಯಾ (35) ಮತ್ತು ಒಂದೂವರೆ ವರ್ಷದ ಮಗು ಸೈಯದ್ ಕುಂದನ್ ಅಸೀ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಮೂರು ವರ್ಷದ ಮತ್ತೊಂದು ಮಗು ಸೈಯದ್ ಕುಂದನ್ ನಬೀ ತೀವ್ರ ಗಾಯಗೊಂಡಿದ್ದು, ಚುಂಚನಗಿರಿ ಆಸ್ಪತ್ರೆಗೆ ದಾಖಲಿಸಲಾಗಿದೆ.

ವಯನಾಡ್‌ನಲ್ಲಿ 18 ಪ್ರವಾಸಿಗರು ಅಸ್ವಸ್ಥ

ವಯನಾಡ್ (ಪಿಟಿಐ): ಕೇರಳದಲ್ಲಿ ಮತ್ತೊಂದು ಶಂಕಿತ ಕಲುಷಿತ ಸೇವನೆ ಪ್ರಕರಣ ವರದಿಯಾಗಿದ್ದು, ವಯನಾಡ್‌ನ ಕೆಲವು ರೆಸ್ಟೋರೆಂಟ್‌ಗಳಲ್ಲಿ ಆಹಾರ ಸೇವಿಸಿದ 18 ಮಂದಿ ಪ್ರವಾಸಿಗರಲ್ಲಿ ಆರೋಗ್ಯ ಸಮಸ್ಯೆ ಕಂಡುಬಂದಿದೆ.

23 ಮಂದಿ ಪ್ರವಾಸಿಗರು ತಿರುವನಂತಪುರದಿಂದ ವಯನಾಡ್‌ಗೆ ಬಂದಿದ್ದರು. ಇವರೆಲ್ಲ ಸೋಮವಾರ ರಾತ್ರಿ ವಯನಾಡ್‌ನ ವಿವಿಧೆಡೆಗಳಲ್ಲಿರುವ ರೆಸ್ಟೋರೆಂಟ್‌ಗಳಲ್ಲಿ ಆಹಾರ ಸೇವಿಸಿದ್ದರು ಎಂದು ವಯನಾಡ್‌ನ ಕಂಬಲಕ್ಕಾಡ್ ಪೊಲೀಸ್ ಠಾಣೆಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಯಾವ ರೆಸ್ಟೋರೆಂಟ್‌ನಲ್ಲಿ ಸೇವಿಸಿದ ಯಾವ ಆಹಾರದಿಂದ ಪ್ರವಾಸಿಗರಲ್ಲಿ ಆರೋಗ್ಯ ಸಮಸ್ಯೆ ಕಾಣಿಸಿಕೊಂಡಿದೆ ಎಂಬುದನ್ನು ಈಗಲೇ ತಿಳಿಸಲಾಗದು ಎಂದೂ ಅವರು ಹೇಳಿದ್ದಾರೆ.

ಕಲ್ಪೆಟ್ಟಾದಲ್ಲಿ ಸೋಮವಾರ ರಾತ್ರಿ ಆಹಾರ ಸೇವಿಸಿದ್ದ ಪ್ರವಾಸಿಗರು ಅಸ್ವಸ್ಥರಾಗಿದ್ದಾರೆ. ಪೊಲೀಸರು ಹಾಗೂ ಆರೋಗ್ಯಾಧಿಕಾರಿಗಳ ತಂಡ ಮೂರು ರೆಸ್ಟೋರೆಂಟ್‌ಗಳಿಗೆ ತೆರಳಿ ಪರಿಶೀಲನೆ ನಡೆಸಿದೆ ಎಂದು ಅವರು ಹೇಳಿದ್ದಾರೆ.

ಸದ್ಯ 18 ಮಂದಿಯ ಆರೋಗ್ಯ ಸ್ಥಿರವಾಗಿದೆ ಎಂದೂ ಪೊಲೀಸರು ಮಾಹಿತಿ ನೀಡಿದ್ದಾರೆ.

ಕೆಲವು ದಿನಗಳ ಹಿಂದೆ ಕಾಸರಗೋಡಿನಲ್ಲಿ ಕಲುಷಿತ ಆಹಾರ ಸೇವನೆಯಿಂದ 16 ವರ್ಷದ ಬಾಲಕಿಯೊಬ್ಬಳು ಮೃತಪಟ್ಟಿದ್ದು, 18 ಮಂದಿ ಅಸ್ವಸ್ಥರಾಗಿದ್ದರು.

₹89.92 ಲಕ್ಷ ಮೌಲ್ಯದ ಡ್ರಗ್ಸ್ ವಶ

ದೇವನಹಳ್ಳಿ: ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಆಸ್ಟ್ರೇಲಿಯಾಗೆ ₹89.92 ಲಕ್ಷ ಮೌಲ್ಯದ 4.496 ಕೆ.ಜಿ ಎಫೆಡ್ರಿನ್ ಡ್ರಗ್ಸ್ ರಫ್ತು ಮಾಡುತ್ತಿದ್ದ ಕೊರಿಯರ್ ಪೊಟ್ಟಣವನ್ನು ವಿಮಾನ ನಿಲ್ದಾಣ ಕಸ್ಟಮ್ಸ್ ಅಧಿಕಾರಿಗಳು ಕಳೆದ ಮುಟ್ಟುಗೋಲು ಹಾಕಿಕೊಂಡಿದ್ದಾರೆ.


ವಿಮಾನ ನಿಲ್ದಾಣದಿಂದ ಆಸ್ಟ್ರೇಲಿಯಾಗೆ ಎಫೆಡ್ರಿನ್ ಡ್ರಗ್ಸ್ ರಫ್ತು ಮಾಡಲು ಯತ್ನಿಸಿದ್ದ ಆರೋಪಿಗಳನ್ನು ಬಂಧಿಸುವಲ್ಲಿ ಬೆಂಗಳೂರು ಕಸ್ಟಮ್ ಅಧಿಕಾರಿಗಳ ತಂಡ ಯಶಸ್ವಿಯಾಗಿದೆ. ಅವರನ್ನು ಹೆಚ್ಚಿನ ವಿಚಾರಣೆಗಾಗಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.

ಪತ್ನಿಯ ಸಲುಗೆ ಪ್ರಶ್ನಿಸಿದ್ದಕ್ಕೆ ವ್ಯಾಪಾರಿ ಕೊಲೆ

ಪ್ರಜಾವಾಣಿ ವಾರ್ತೆ



ಜೋಯೆಬ್



ನದೀಮ್ ಪಾಷಾ

ಬೆಂಗಳೂರು: ಕಲಾಸಿಪಾಳ್ಯದ ಗುಜರಿ ವ್ಯಾಪಾರಿ ಜೋಯೆಬ್ ಅಬ್ರಾರ್ (33) ಅವರನ್ನು ಅಪಹರಿಸಿ ಕೊಲೆ ಮಾಡಿದ್ದ ಆರೋಪದಡಿ 7 ಮಂದಿಯನ್ನು ಚಂದ್ರಾಲೇಔಟ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಗಂಗೊಂಡನಹಳ್ಳಿ ನಿವಾಸಿ ಜೋಯೆಬ್, ಪತ್ನಿ ಹಾಗೂ ಪೋಷಕರ ಜೊತೆ ವಾಸವಿದ್ದರು. ಏಪ್ರಿಲ್ 30 ರಂದು ಅವರನ್ನು ಅಪಹರಿಸಿ, ಕೊಲೆ ಮಾಡಲಾಗಿತ್ತು. ಈ ಬಗ್ಗೆ ತಾಯಿ ದೂರು ನೀಡಿದ್ದರು. ಪ್ರಮುಖ ಆರೋಪಿ ನದೀಮ್ ಪಾಷಾ (23) ಹಾಗೂ ಆತನ ಸಹಚರರಾದ ಮೊಹಮ್ಮದ್ ಶಫಿ, ಶಬ್ಬೀರ್ ಹುಸೈನ್, ಹನ್ನಾನ್ ಪಾಷಾ, ಮೊಹಮ್ಮದ್ ಮುಬಾರಕ್, ತಬ್ರೇಜ್ ಪಾಷಾ, ತನ್ವೀರ್ ಪಾಷಾನನ್ನು ಬಂಧಿಸಲಾಗಿದೆ' ಎಂದು ಪೊಲೀಸರು ಹೇಳಿದರು.

'ಆರೋಪಿಗಳು ಕೃತ್ಯಕ್ಕೆ ಬಳಸಿದ್ದ ಟಾಟಾ ಏಸ್ ವಾಹನ, ಕಾರು ಹಾಗೂ ದ್ವಿಚಕ್ರ ವಾಹನವನ್ನು ಜಪ್ತಿ ಮಾಡಲಾಗಿದೆ. ತಲೆಮರೆಸಿಕೊಂಡಿರುವ ನಾಲ್ವರು ಆರೋಪಿಗಳ ಪತ್ತೆಗೆ ತನಿಖೆ ಮುಂದುವರಿದಿದೆ' ಎಂದೂ ತಿಳಿಸಿದರು.

ಪತ್ನಿ ಜೊತೆ ಸಲುಗೆ: 'ಜೋಯೆಬ್ ಪತ್ನಿಯ ಬಾಲ್ಯ ಸ್ನೇಹಿತನಾಗಿದ್ದ ಆರೋಪಿ ನದೀಮ್, ಗಂಗೊಂಡನಹಳ್ಳಿಯಲ್ಲಿ ಬಟ್ಟೆ ಅಂಗಡಿ ಇಟ್ಟುಕೊಂಡಿದ್ದ. ಈತನಿಗೂ ಮದುವೆ ಆಗಿತ್ತು. ಅಷ್ಟಾದರೂ ಆರೋಪಿ, ಜೋಯೆಬ್ ಪತ್ನಿಯ ಜೊತೆ ಸಲುಗೆ ಇಟ್ಟು ಕೊಂಡಿದ್ದನೆಂಬ ಮಾಹಿತಿ ಲಭ್ಯವಾಗಿದೆ' ಎಂದು ಪೊಲೀಸರು ಹೇಳಿದರು.

'ನದೀಮ್ ಹಾಗೂ ಜೋಯೆಬ್ ಪತ್ನಿ ಪರಸ್ಪರ ಮೊಬೈಲ್‌ನಲ್ಲಿ ಹೆಚ್ಚು ಹೊತ್ತು ಮಾತನಾಡುತ್ತಿದ್ದರು. ಆಗಾಗ ಭೇಟಿ ಸಹ ಆಗುತ್ತಿದ್ದರು. ಈ ಸಂಗತಿ ಗೊತ್ತಾಗುತ್ತಿದ್ದಂತೆ ಸಿಟ್ಟಾಗಿದ್ದ ಜೋಯೆಬ್, ನದೀಮ್ ಅಂಗಡಿ ಬಳಿ ಹೋಗಿ ಗಲಾಟೆ ಮಾಡಿದ್ದರು. ಪತ್ನಿ ಜೊತೆಗಿನ ಸಲುಗೆ ಪ್ರಶ್ನಿಸಿದ್ದರು. ಪತ್ನಿಯಿಂದ ದೂರವಿರುವಂತೆ ಎಚ್ಚರಿಕೆ ಸಹ ನೀಡಿದ್ದರು' ಎಂದೂ ತಿಳಿಸಿದರು.

ಸಹಚರರ ಜೊತೆ ಸೇರಿ ಕೊಲೆ: 'ಜೋಯೆಬ್ ಅವರನ್ನು ಅಪಹರಿಸಿ ಕೊಲೆ ಮಾಡಲು ನದೀಮ್ ಸಂಚು ರೂಪಿಸಿದ್ದ. ಇದಕ್ಕೆ ಸಹಚರರ ಸಹಕಾರ ಪಡೆದಿದ್ದ' ಎಂದು ಪೊಲೀಸರು ಹೇಳಿದರು.

'ಏಪ್ರಿಲ್ 30ರಂದು ರಾತ್ರಿ 10.45ರ ಸುಮಾರಿಗೆ ಜೋಯೆಬ್ ಹಾಲು ತರಲು ಅಂಗಡಿಗೆ ಹೊರಟಿದ್ದರು. ವಾಹನದಲ್ಲಿ ಬಂದಿದ್ದ ಆರೋಪಿಗಳು, ಜೋಯೆಬ್ ಅವರನ್ನು ಅಪಹರಿಸಿದ್ದರು ಮುಖಕ್ಕೆ ಬಟ್ಟೆ ಕಟ್ಟಿ, ಅದರ ಮೇಲೆ ಪ್ಲಾಸ್ಟರ್ ಸುತ್ತಿದ್ದರು. ಉಸಿರಾಡಲು ಸಾಧ್ಯವಾಗದೇ ಜೋಯೆಬ್ ವಾಹನದಲ್ಲೇ ಮೃತಪಟ್ಟಿದ್ದರು. ನಂತರ, ಆರೋಪಿಗಳು ಮೃತದೇಹವನ್ನು ಗಂಗೊಂಡನಹಳ್ಳಿ ಬಳಿ ಪಾದಚಾರಿ ಮಾರ್ಗದಲ್ಲಿ ಎಸೆದು ಹೋಗಿದ್ದರು' ಎಂದೂ ತಿಳಿಸಿದರು.

'ಪ್ರಕರಣದಲ್ಲಿ ಪತ್ನಿ ಪಾತ್ರದ ಬಗ್ಗೆ ಯಾವುದೇ ಪುರಾವೆಗಳು ಸಿಕ್ಕಿಲ್ಲ' ಎಂದು ತಿಳಿಸಿದರು.

ರೇಖಾ ಕದಿರೇಶ್ ಹತ್ಯೆ ಆರೋಪಿಗಳ ಜಾಮೀನು ಅರ್ಜಿ ವಜಾ

ಅಪರಾಧ ಸುದ್ದಿ

ಬೆಂಗಳೂರು: ಬಿಬಿಎಂಪಿ ಛಲವಾದಿಪಾಳ್ಯ ವಾರ್ಡ್‌ನ ಮಾಜಿ ಸದಸ್ಯೆ ರೇಖಾ ಕದಿರೇಶ್ ಹತ್ಯೆಯ ಮೂವರು ಆರೋಪಿಗಳ ಜಾಮೀನು ಅರ್ಜಿಯನ್ನು ನಗರದ ಸೆಷನ್ಸ್ ನ್ಯಾಯಾಲಯ ವಜಾಗೊಳಿಸಿದೆ.

ಕಾಟನ್ ಪೇಟೆಯ ಅಂಜನಪ್ಪ ಗಾರ್ಡನ್ ನಿವಾಸಿಗಳಾದ ಸ್ಟೀಫನ್, ಪುರುಷೋತ್ತಮ್ ಮತ್ತು ಅಜಯ್ ಸಲ್ಲಿಸಿದ್ದ ಜಾಮೀನು ಅರ್ಜಿಯನ್ನು 71ನೇ ಹೆಚ್ಚುವರಿ ಸಿಟಿ ಸಿವಿಲ್ ಮತ್ತು ಸೆಷನ್ಸ್ ನ್ಯಾಯಾಲಯದ ನ್ಯಾಯಾಧೀಶೆ ಎಸ್. ಸಂಧ್ಯಾ ವಿಚಾರಣೆ ನಡೆಸಿದರು.

'ಆರೋಪಿಗಳು 2021ರ ಜುಲೈ 5ರಿಂದ ನ್ಯಾಯಾಂಗ ಬಂಧನದಲ್ಲಿದ್ದಾರೆ ಎಂಬ ಏಕೈಕ ಸಮರ್ಥನೆಯನ್ನು ಆಧರಿಸಿ ಜಾಮೀನು ನೀಡಲು ಸಾಧ್ಯವಿಲ್ಲ. ಮಹಿಳೆಯರ ವಿರುದ್ಧದ ಅಪರಾಧಗಳನ್ನು ಗಂಭೀರವಾಗಿ ಪರಿಗಣಿಸಬೇಕು. ಇಲ್ಲವಾದಲ್ಲಿ ಸಮಾಜಕ್ಕೆ ಕೆಟ್ಟ ಸಂದೇಶ ರವಾನಿಸಿದಂತಾಗುತ್ತದೆ' ಎಂಬ ಅಭಿಪ್ರಾಯದೊಂದಿಗೆ ಅರ್ಜಿ ವಜಾಗೊಳಿಸಿದ್ದಾರೆ.

ಪ್ರಾಸಿಕ್ಯೂಷನ್ ವಾದ: 'ವಿಚಾರಣೆ ಮುಗಿಯುವ ತನಕ ಆರೋಪಿಗಳ ಮುಗ್ಧತೆ ಸಾಬೀತಾಗುವುದಿಲ್ಲ. ಒಂದು ವೇಳೆ ಜಾಮೀನು ಮಂಜೂರು ಮಾಡಿದರೆ ಅವರಿಂದ ಪ್ರಾಸಿಕ್ಯೂಷನ್ ಸಾಕ್ಷಿಗಳಿಗೆ ಬೆದರಿಕೆ ಎದುರಾಗಬಹುದು ಅಥವಾ ಆರೋಪಿಗಳೇ ನಾಪತ್ತೆಯಾಗಬಹುದು. ಜಾಮೀನು ಮಂಜೂರು ಮಾಡಬಾರದು' ಎಂದು ಪ್ರಾಸಿಕ್ಯೂಷನ್ ಜಾಮೀನು ಅರ್ಜಿಯನ್ನು ಬಲವಾಗಿ ವಿರೋಧಿಸಿತ್ತು. ಕದಿರೇಶ್ ಅವರ ಎರಡನೇ ಪತ್ನಿಯಾಗಿದ್ದ ರೇಖಾ ಅವರನ್ನು 2021ರ ಜೂನ್ 24ರಂದು ಫ್ಲವರ್ ಗಾರ್ಡನ್‌ನಲ್ಲಿರುವ ಅವರ ಕಚೇರಿ ಬಳಿ ಮಾರಕಾಸ್ತ್ರಗಳಿಂದ ಕೊಚ್ಚಿ ಕೊಲೆ ಮಾಡಲಾಗಿತ್ತು.

ಜೂಜಾಟ: ಅತಿಥಿ ಗೃಹ ಮೇಲೆ ಸಿಸಿಬಿ ದಾಳಿ

ಬೆಂಗಳೂರು: ಹಳೇ ವಿಮಾನ ನಿಲ್ದಾಣ ರಸ್ತೆಯಲ್ಲಿರುವ ಅತಿಥಿ ಗೃಹವೊಂದರ ಮೇಲೆ ಸಿಸಿಬಿ ಪೊಲೀಸರು ದಾಳಿ ಮಾಡಿದ್ದು, ಅಕ್ರಮವಾಗಿ ಜೂಜಾಡುತ್ತಿದ್ದ ಆರು ಆರೋಪಿಗಳನ್ನು ಬಂಧಿಸಿದ್ದಾರೆ.

'ಆಂಧ್ರಪ್ರದೇಶದ ನಿವಾಸಿಗಳಾದ ಆರು ಆರೋಪಿಗಳು, ನಗರಕ್ಕೆ ಬಂದು ವ್ಯವಸ್ಥಿತವಾಗಿ ಜೂಜು ಆಡುತ್ತಿದ್ದರು. ಅವರನ್ನು ಬಂಧಿಸಿ, ₹ 50,500 ನಗದು ಹಾಗೂ ಮೊಬೈಲ್ ಜಪ್ತಿ ಮಾಡಲಾಗಿದೆ. ಎಲ್ಲರ ವಿರುದ್ಧ ಜೀವನ್ ಭೀಮಾನಗರ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ' ಎಂದು ಪೊಲೀಸರು ಹೇಳಿದರು.

'ಹಳೇ ವಿಮಾನ ನಿಲ್ದಾಣ ರಸ್ತೆಯ ಎನ್.ಆರ್. ಛೇಂಬರ್ ಕಟ್ಟಡದ 5ನೇ ಮಹಡಿಯಲ್ಲಿ ಅತಿಥಿ ಗೃಹ ಇತ್ತು. ಆರೋಪಿಗಳು ಜೂಜು ಆಡುತ್ತಿದ್ದರು' ಎಂದೂ ತಿಳಿಸಿದರು.

ಅಂಗೂರ್‌ಗೆ ಜಾಮೀನು


ಬೆಂಗಳೂರು: ಆರ್ಥಿಕ ಅಪರಾಧಕ್ಕೆ ಸಂಬಂಧಿಸಿದಂತೆ ಜೈಲಿನಲ್ಲಿರುವ ಅಲಯನ್ಸ್ ವಿಶ್ವವಿದ್ಯಾಲಯದ ಮಾಜಿ ಕುಲಪತಿ ಮಧುಕರ ಅಂಗೂರ್ ಅವರಿಗೆ ಹೈಕೋರ್ಟ್ ಜಾಮೀನು ನೀಡಿದೆ. ಈ ಸಂಬಂಧ ಮಧುಕರ ಜಿ. ಅಂಗೂರ್ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ವಿ.ಶ್ರೀಶಾನಂದ ಅವರಿದ್ದ ಏಕ ಸದಸ್ಯ ನ್ಯಾಯಪೀಠ ಜಾಮೀನು ನೀಡಿದೆ.

'ಪ್ರಕರಣಕ್ಕೆ ಸಂಬಂಧಿಸಿದ ಅಗತ್ಯ ದಾಖಲೆಗಳನ್ನು ಜಾರಿ ನಿರ್ದೇಶನಾಲಯ (ಇ.ಡಿ) ಈಗಾಗಲೇ ಮುಟ್ಟುಗೋಲು ಹಾಕಿಕೊಂಡಿದೆ. ಅರ್ಜಿದಾರರ ಆಸ್ತಿಗಳನ್ನೂ ನಿಯಂತ್ರಣಕ್ಕೆ ಪಡೆದಿದೆ. ಹೀಗಾಗಿ, ಅರ್ಜಿದಾರರನ್ನು ಬಿಡುಗಡೆ ಮಾಡಿದರೆ ಅಕ್ರಮ ಹಣ ವರ್ಗಾವಣೆ ಮುಂದುವರಿಕೆಗೆ ಕಾರಣ ವಾಗಬಹುದು ಎಂಬ ತನಿಖಾಧಿಕಾರಿಗಳ ವಾದದಲ್ಲಿ ಹುರುಳಿಲ್ಲ' ಎಂದು ನ್ಯಾಯಪೀಠ ಅಭಿಪ್ರಾಯಪಟ್ಟಿದೆ.

ಪ್ರಕರಣವೇನು? : 'ಅಲಯನ್ಸ್ ವಿ.ವಿಗೆ ಸಂಬಂಧಿಸಿದ ಪ್ರಕರಣದಲ್ಲಿ ಯಾವುದೇ ಆರ್ಥಿಕ ವಹಿವಾಟು ನಡೆಸಬಾರದು ಎಂದು ಬೆಂಗಳೂರು ಸಿವಿಲ್ ನ್ಯಾಯಾಲಯ ಅಂಗೂರ್ ಅವರಿಗೆ ನಿರ್ದೇಶಿಸಿತ್ತು. ಆದರೂ ಅವರು, ಮೆಸರ್ಸ್ ಅಲಯನ್ಸ್ ವಿ.ವಿಯ ಮತ್ತು ಮೆಸರ್ಸ್ ಶ್ರೀವಾರಿ ಶೈಕ್ಷಣಿಕ ಸೇವೆಗಳು ಹೆಸರಿನ ಸಂಸ್ಥೆಯ ಅಡಿಯಲ್ಲಿ 2016ರಿಂದ 2017ರ ನಡುವೆ ಪ್ರತ್ಯೇಕ ಖಾತೆ ತೆರೆದು 4,500 ವಿದ್ಯಾರ್ಥಿಗಳಿಂದ ₹107 ಕೋಟಿಯನ್ನು ತಮ್ಮ ಖಾತೆಗೆ ವರ್ಗಾಯಿಸಿಕೊಂಡಿದ್ದಾರೆ' ಎಂದು ಆರೋಪಿಸಲಾಗಿತ್ತು.

ಈ ಆರೋಪಕ್ಕೆ ಸಂಬಂಧಿಸಿದಂತೆ ಆನೇಕಲ್, ಜೆ.ಪಿ ನಗರ, ಮಡಿವಾಳ ಮತ್ತು ಶಂಕರಪುರ ಪೊಲೀಸ್ ಠಾಣೆಗಳಲ್ಲಿ ಐಪಿಸಿ ಕಲಂ 420ರ ಅಡಿಯಲ್ಲಿ ನಾಲ್ಕು ಪ್ರತ್ಯೇಕ ಪ್ರಕರಣ ದಾಖಲು ಮಾಡಿ, ಅಂಗೂರ್ ಅವರನ್ನು ಇ.ಡಿ, ಅಕ್ರಮ ಹಣ ವರ್ಗಾವಣೆ ಕಾಯ್ದೆ ಅಡಿಯಲ್ಲಿ ಬಂಧಿಸಿತ್ತು.

ಬ್ಯಾಟರಿ ಇಲ್ಲದ ಗ್ಯಾಜೆಟ್‌ಗಳು



ಈಗ ಸ್ಮಾರ್ಟ್‌ಫೋನ್ ಕಂಪನಿಗಳು ಹೊಸ ಹಾದಿ ಹಿಡಿಯಲು ಆರಂಭಿಸಿವೆ. ಬ್ಯಾಟರಿಗಳ ಬದಲಿಗೆ ಪರ್ಯಾಯ ಶಕ್ತಿಮೂಲವನ್ನು ಹುಡುಕುವ ಹಲವು ಪ್ರಯತ್ನಗಳನ್ನು ಶುರು ಮಾಡಿವೆ. ಸಣ್ಣ ಸಣ್ಣ ಗ್ಯಾಜೆಟ್‌ಗಳಿಗೆ ಬ್ಯಾಟರಿ ಬದಲಿಗೆ ರೇಡಿಯೋ ಸಿಗ್ನಲ್‌ಗಳ ಮೂಲಕ ವಿದ್ಯುತ್ತನ್ನು ಒದಗಿಸಬಹುದೆ?

ಕೃಷ್ಣ ಭಟ್



ಯಾವುದೇ ಎಲೆಕ್ಟ್ರಾನಿಕ್ ಸಾಧನಕ್ಕೂ ಬ್ಯಾಟರಿಯೇ ಜೀವಾಳ. ಬ್ಯಾಟರಿಯೊಂದು ಇಲ್ಲದ ಗ್ಯಾಜೆಟ್ ನಿಷ್ಕ್ರಿಯ ವಸ್ತುವಷ್ಟೆ. ಅದು ಸಣ್ಣ ಸ್ಮಾರ್ಟ್ ವಾಚ್‌ನಿಂದ ಕಂಪ್ಯೂಟರ್‌ವರೆಗೆ – ಎಲ್ಲಕ್ಕೂ ಬ್ಯಾಟರಿ ಎಂಬ ಜೀವಧಾರಕ ವಸ್ತು ಬೇಕೇ ಬೇಕು.



ಒಂದೆಡೆ ಎಲೆಕ್ಟ್ರಿಕ್ ವಾಹನಗಳಲ್ಲಿ ಬ್ಯಾಟರಿಯ ದಕ್ಷತೆ ಹೆಚ್ಚಿಸುವುದು ಹೇಗೆ ಎಂದು ಸಂಶೋಧನೆ ನಡೆಯುತ್ತಿದೆ. ಇದೇ ಸಂಶೋಧನೆಯನ್ನು ಕೆಲವು ವರ್ಷಗಳ ಹಿಂದೆ ಸ್ಮಾರ್ಟ್‌ಫೋನ್ ಕಂಪನಿಗಳು ನಡೆಸುತ್ತಿದ್ದವು. ಆಗ ಜನರು ಸ್ಮಾರ್ಟ್‌ಫೋನ್ ಕೈಯಲ್ಲಿ ಹಿಡಿದು ಬ್ಯಾಗ್‌ನಲ್ಲೊಂದು ಇಟ್ಟಿಗೆಯಂಥ ಪವರ್ ಬ್ಯಾಂಕ್ ಇಟ್ಟುಕೊಳ್ಳುತ್ತಿದ್ದರು. ಆದರೆ, ಈಗ ಸ್ಮಾರ್ಟ್‌ಫೋನ್ ಚಾರ್ಜಿಂಗ್ ಎಂಬುದು ದೊಡ್ಡ ಸಮಸ್ಯೆಯೇನೂ ಅಲ್ಲ. ಒಂದು ದಿನ ಇಡೀ ಬಳಕೆ ಮಾಡಬಹುದಾದಷ್ಟು ಚಾರ್ಜ್ ನಿಲ್ಲುವ ಸ್ಮಾರ್ಟ್‌ಫೋನ್‌ಗಳು ಮಾರುಕಟ್ಟೆಯಲ್ಲಿ ಕೈಗೆಟಕುವ ಬೆಲೆಯಲ್ಲೇ ಇವೆ. ಆದರೆ, ಈಗ ಸ್ಮಾರ್ಟ್‌ಫೋನ್ ಕಂಪನಿಗಳು ಹೊಸ ಹಾದಿ ಹಿಡಿಯಲು ಆರಂಭಿಸಿವೆ. ಈ ಬ್ಯಾಟರಿಯ ಬದಲಿಗೆ ಪರ್ಯಾಯ ಶಕ್ತಿಮೂಲವನ್ನು ಹುಡುಕುವ ಹಲವು ಪ್ರಯತ್ನಗಳನ್ನು ಇವು ಶುರು ಮಾಡಿವೆ.

ಇತ್ತೀಚೆಗೆ ಚೀನಾ ಮೂಲದ ಸ್ಮಾರ್ಟ್‌ಫೋನ್ ತಯಾರಿಕಾ ಕಂಪನಿ 'ಒಪ್ಪೊ' ತನ್ನದೊಂದು ಪ್ರಸ್ತಾಪವನ್ನು ಕಾಗದದ ರೂಪದಲ್ಲಿ ಮಂಡಿಸಿದೆ. ಈ ಪ್ರಸ್ತಾವನೆಯ ಪ್ರಕಾರ ಸಣ್ಣ ಸಣ್ಣ ಗ್ಯಾಜೆಟ್‌ಗಳಿಗೆ ಬ್ಯಾಟರಿ ಬದಲಿಗೆ ರೇಡಿಯೋ ಸಿಗ್ನಲ್‌ಗಳ ಮೂಲಕ ವಿದ್ಯುತ್ತನ್ನು ಒದಗಿಸಬಹುದು! ಹೀಗೆಂದು ಇನ್ನೊಂದೆರಡು ವರ್ಷಗಳಲ್ಲಿ ಬ್ಯಾಟರಿಯೇ ಇಲ್ಲದ ಸ್ಮಾರ್ಟ್‌ಫೋನ್‌ಗಳು ಇ-ಕಾಮರ್ಸ್ ವೆಬ್‌ಸೈಟ್‌ಗಳಲ್ಲಿ ರಾರಾಜಿಸುತ್ತವೆ ಎಂದುಕೊಳ್ಳುವುದು ಸಾಧ್ಯವಿಲ್ಲ. ಏಕೆಂದರೆ, ಒಪ್ಪೊ ಪ್ರಸ್ತಾಪಿಸುತ್ತಿರುವ ಈ ತಂತ್ರಜ್ಞಾನ ಕೇವಲ ಸಣ್ಣ ಗ್ಯಾಜೆಟ್‌ಗಳಿಗೆ ಮಾತ್ರ. ಸಣ್ಣ ಗ್ಯಾಜೆಟ್‌ಗಳಿಗೆ ಅತ್ಯಂತ ಕಡಿಮೆ ಪವರ್ ಸಾಕಾಗುತ್ತದೆ. ಹೀಗಾಗಿ, ಇವುಗಳಿಗೆ ವೇವ್‌ಗಳಿಂದ ಸಿಗುವ ಪವರ್ ಸಾಲಬಹುದು. ಒಪ್ಪೊ ಹೇಳುವ ಪ್ರಕಾರ ದೊಡ್ಡ ದೊಡ್ಡ ಉದ್ಯಮಗಳು, ಸಾರಿಗೆ ಹಾಗೂ ಸ್ಮಾರ್ಟ್ ಹೋಮ್ ಅಪ್ಲಿಕೇಶನ್‌ಗಳಲ್ಲೂ ಇದನ್ನು ಯಶಸ್ವಿಯಾಗಿ ಪರೀಕ್ಷೆ ಮಾಡಿದೆ.

ನಮ್ಮ ಸುತ್ತ ಹಲವು ರೀತಿಯ ರೇಡಿಯೋ ವೇವ್‌ಗಳು ತೇಲುತ್ತಿರುತ್ತವೆ. ಎಫ್‌ಎಂ ಟವರ್‌ಗಳ ಸಿಗ್ನಲ್‌ಗಳು (ಮೊದಲು ಮೀಡಿಯಂ ವೇವ್ ರೇಡಿಯೋ ಸಿಗ್ನಲ್‌ಗಳು), ಟಿವಿ ಟವರ್‌ಗಳು (ಈಗ ಇವುಗಳ ಸಂಖ್ಯೆ ಕಡಿಮೆ ಇವೆ), ಮೊಬೈಲ್ ನೆಟ್‌ವರ್ಕ್‌ಗಳು, ವೈಫೈ ಸಿಗ್ನಲ್‌ಗಳು ಸೇರಿದ ಹಾಗೆ ಹಲವು ರೀತಿಯ ರೇಡಿಯೋ ಫ್ರೀಕ್ವೆನ್ಸಿಗಳಿರುತ್ತವೆ. ನಗರದಲ್ಲಿ ಕನಿಷ್ಠ 8-10 ರೇಡಿಯೋ ಫ್ರೀಕ್ವೆನ್ಸಿ ಸಿಗುತ್ತವೆ. ಗ್ರಾಮೀಣ ಭಾಗದಲ್ಲಿ ಕನಿಷ್ಠ ಒಂದೆರಡಾದರೂ ಸಿಗುತ್ತವೆ.


ಬ್ಯಾಟರಿ ಇಲ್ಲದ ಗ್ಯಾಜೆಟ್‌ಗಳ ಅನುಕೂಲ ಮುಖ್ಯವಾಗಿ ಎರಡು ರೀತಿಯವು. ಯಾವುದೇ ಗ್ಯಾಜೆಟ್‌ನಲ್ಲಿ ಬ್ಯಾಟರಿ ವೆಚ್ಚವೇ ಮುಖ್ಯ ಭಾಗವಾಗಿರುತ್ತದೆ. ಇನ್ನೊಂದು, ಬ್ಯಾಟರಿಯಿಂದ ಗ್ಯಾಜೆಟ್ ಬಾಳಿಕೆ ಸೀಮಿತವಾಗುತ್ತದೆ. ಇವೆರಡೂ ಒಂದು ಗ್ಯಾಜೆಟ್‌ನಲ್ಲಿ ನಮಗೆ ಕಾಣಿಸುವ ಮುಖ್ಯ ಸಮಸ್ಯೆ. ಗ್ಯಾಜೆಟ್‌ಗೆ ಬೇಕಾಗುವ ಪವರ್ ಅನ್ನು ಬೇರೆ ಮೂಲದಿಂದ ತರುವಂತಾದರೆ ಈ ಎರಡೂ ಸಮಸ್ಯೆ ನಿವಾರಣೆಯಾಗುತ್ತದೆ. ಅದರಲ್ಲೂ ಗ್ಯಾಜೆಟ್ ಬಾಳಿಕೆ ವಿಚಾರದಲ್ಲಂತೂ, ರೇಡಿಯೋ ಫ್ರೀಕ್ವೆನ್ಸಿಯನ್ನು ಬಳಸಿದರೆ ಬ್ಯಾಟರಿ ಇಲ್ಲದೇ ಒಂದು ಗ್ಯಾಜೆಟ್ ತುಂಬ ಕಾಲದವರೆಗೆ ಬಾಳಿಕೆ ಬರಬಹುದು.

ಆದರೆ, ಕಂಪನಿ ಹೇಳಿಕೊಳ್ಳುವ ಹಾಗೆ ಝೀರೋ ಪವರ್ ಬಳಕೆ ಸಂವಹನ ತಂತ್ರಜ್ಞಾನವು ರೇಡಿಯೋ ಫ್ರೀಕ್ವೆನ್ಸಿಯಿಂದ ಗಮನಾರ್ಹ ಪ್ರಮಾಣದ ವಿದ್ಯುತ್ತನ್ನ ಉತ್ಪಾದನೆ ಮಾಡಲು ಸಾಧ್ಯವಿಲ್ಲ. ಹೀಗಾಗಿ, ಸದ್ಯಕ್ಕೆ ಇವು ಕೇವಲ ಸಣ್ಣ ಸಣ್ಣ ಗ್ಯಾಜೆಟ್‌ಗಳ ಬಳಕೆಗೆ ಮಾತ್ರ ಸೀಮಿತವಾಗುತ್ತದೆ. ಸದ್ಯದ ಮಟ್ಟಿಗಂತೂ ಈ ರೇಡಿಯೋ ಫ್ರೀಕ್ವೆನ್ಸಿಯನ್ನೇ ಬಳಸಿಕೊಂಡು ಒಂದು ಸ್ಮಾರ್ಟ್‌ಫೋನ್ ರನ್ ಮಾಡುವುದು ಸಾಧ್ಯವೇ ಇಲ್ಲ.

ಸದ್ಯಕ್ಕೆ ಈ ಝೀರೋ ಪವರ್ ಕಮ್ಯೂನಿಕೇಶನ್ ಪರಿಕಲ್ಪನೆಯನ್ನು ಐಒಟಿ ಸಾಧನಗಳಿಗೆ ಬಳಸಬಹುದು. ಅಂದರೆ, ಸ್ಮಾರ್ಟ್‌ವಾಚ್‌ಗಳು, ಮೆಡಿಕಲ್ ಸೆನ್ಸರ್‌ಗಳಿಗೆ ಬಳಕೆ ಮಾಡಬಹುದು. ಅಲ್ಲದೆ, ಟ್ರ್ಯಾಕರ್‌ಗಳಿಗೆ ಇದರ ಬಳಕೆ ಅತ್ಯಂತ ಮುಖ್ಯವಾಗುತ್ತದೆ. ಟ್ರ್ಯಾಕರ್‌ಗಳಿಗೆ ಬ್ಯಾಟರಿಯೇ ಒಂದು ದೊಡ್ಡ ಅಡ್ಡಿಯಾಗಿತ್ತು. ಬ್ಯಾಟರಿ ಖಾಲಿಯಾದ ನಂತರ ಟ್ರ್ಯಾಕರ್‌ಗಳು ಕೆಲಸ ಮಾಡುವುದಿಲ್ಲ. ಇದು ಟ್ರ್ಯಾಕರ್‌ನ ಮೂಲ ಉದ್ದೇಶವನ್ನೂ ಗೌಣವಾಗಿಸಿಬಿಡುತ್ತಿವೆ. ಒಂದು ವೇಳೆ, ಈ ತಂತ್ರಜ್ಞಾನ ವ್ಯಾಪಕವಾಗಿ ಬಳಕೆಗೆ ಬಂದಲ್ಲಿ ಎಲ್ಲ ಪ್ರಮುಖ ಗ್ಯಾಜೆಟ್‌ಗಳ ಟ್ರ್ಯಾಕರ್‌ಗಳಿಗೂ ಈ ತಂತ್ರಜ್ಞಾನವನ್ನು ಅಳವಡಿಸಬಹುದೇನೋ!

ಹೀಗೆಂದು, ಈ ಪ್ರಸ್ತಾವನೆಯೇನೂ ಹೊಸತಲ್ಲ. ಈಗಾಗಲೇ ಸ್ಯಾಮ್‌ಸಂಗ್, ರೇಡಿಯೋ ಫ್ರೀಕ್ವೆನ್ಸಿ ಬಳಸಿ ಕೆಲಸ ಮಾಡುವ ಟಿವಿ ರಿಮೋಟ್‌ಗಳನ್ನು ವರ್ಷಾಂತ್ಯದ ಒಳಗೆ ಬಿಡುಗಡೆ ಮಾಡುವುದಾಗಿ ಹೇಳಿದೆ. ಸ್ಯಾಮ್‌ಸಂಗ್ ಅದಾಗಲೇ ಮನೆ ಒಳಗಿನ ಬೆಳಕು ಮತ್ತು ಹೊರಗಿನ ಬೆಳಕನ್ನು ಬಳಸಿ ಚಾರ್ಜ್ ಆಗುವ ರಿಮೋಟ್ ಅನ್ನೂ ಬಿಡುಗಡೆ ಮಾಡಿತ್ತು. ಇದರ ಜೊತೆಗೆ ಈಗ ರೇಡಿಯೋ ಫ್ರೀಕ್ವೆನ್ಸಿಯನ್ನು ಪವರ್‌ಗೆ ಬಳಸಿಕೊಳ್ಳುವ ರಿಮೋಟ್ ಅನ್ನೂ ಅಭಿವೃದ್ಧಿಪಡಿಸುತ್ತಿರುವುದಾಗಿ ಹೇಳಿದೆ. ಇದು ಸೆಲ್ಫ್ ಚಾರ್ಜಿಂಗ್ ಸಾಧನಗಳ ಕಡೆಗೆ ತಂತ್ರಜ್ಞಾನ ಸಾಗುತ್ತಿರುವುದರ ಮೊದಲ ಹೆಜ್ಜೆಯೂ ಆದೀತು. ❖

ಪ್ರಥಮ ಸ್ವದೇಶಿ ಓಟಿಪಿ ಮೆಮೊರಿ





ಸುಧೀರ ಎಚ್. ಎಸ್.


ಪ್ರತಿಯೊಮ್ಮೆ ನಾವು ಫೋಟೋಗಳನ್ನು ಮತ್ತು ವೀಡಿಯೊಗಳನ್ನು ಕ್ಲೌಡ್‌ಗೆ ಅಪ್‌ಲೋಡ್ ಮಾಡುವಾಗ ನಮ್ಮ ಕೆಲವು ಅತ್ಯವಶ್ಯಕ ಖಾಸಗಿ ಮಾಹಿತಿಯನ್ನು ರಕ್ಷಿಸಲು ಡೇಟಾ ಎನ್‌ಕ್ರಿಪ್ಶನ್ ಅಗತ್ಯವಿದೆ. ಇದಲ್ಲದೆ ಕೃತಕ ಬುದ್ಧಿಮತ್ತೆಯನ್ನು ಬಳಸಿ ಸಿದ್ಧವಾಗುವ ಹೊಸ ಅಪ್ಲಿಕೇಶನ್‌ಗಳಿಂದ ಸೃಷ್ಟಿಯಾಗುವ ಲಾಭಗಳಿಗೆ ಮಿತಿಯೇ ಇಲ್ಲ. ಇದರ ಬೆನ್ನಲ್ಲೇ ಜಾಗತಿಕವಾಗಿ ಮೆಮೊರಿ ತಂತ್ರಜ್ಞಾನಗಳು ಹೆಚ್ಚು ಪ್ರಾಮುಖ್ಯವನ್ನು ಪಡೆಯುತ್ತಿವೆ.

ಇದಲ್ಲದೆ ಸಿಲಿಕಾನ್ ಚಿಪ್-ಆಧಾರಿತ ಎಲೆಕ್ಟ್ರಾನಿಕ್ ಸರ್ಕ್ಯೂಟ್‌ಗಳು, ಮೊಬೈಲ್ ಫೋನ್‌ಗಳು, ಲ್ಯಾಪ್‌ಟಾಪ್‌ಗಳು, ವೈಫೈ ರೂಟರ್‌ಗಳು ಮತ್ತು ಸ್ಮಾರ್ಟ್ ಸಾಧನಗಳಲ್ಲಿ ಲಾಜಿಕ್ ಸರ್ಕ್ಯೂಟ್‌ಗಳು ಇರುತ್ತವೆ. ಇವುಗಳಲ್ಲಿ ಸಾಧನದ ಐಡೆಂಟಿಟಿ ಅಥವಾ ಭದ್ರತಾ ಕೀಯಂತಹ ಡೇಟಾವನ್ನು ಹಿಡಿದಿಟ್ಟುಕೊಳ್ಳಲು ಕೆಲವು ಮೆಮೊರಿ ಅಂಶಗಳ ಅಗತ್ಯವಿರುತ್ತದೆ. ಹಣಕಾಸಿನ ವಹಿವಾಟುಗಳು, ನೆಟ್‌ಫ್ಲಿಕ್ಸ್‌ನಂತಹ ಚಂದಾದಾರಿಕೆಗಳು ಅಥವಾ ನಮ್ಮ ವೈಯಕ್ತಿಕ ಡೇಟಾವನ್ನು ಸುರಕ್ಷಿತವಾಗಿಡಲು ಭದ್ರತಾ ಕೀ ಬಹಳ ಅವಶ್ಯಕ. ಹಾಗಾಗಿ ಮೆಮೊರಿ ತಂತ್ರಜ್ಞಾನದಲ್ಲಿಯ ನಾವೀನ್ಯವು ಅರೆವಾಹಕಗಳ (ಸೆಮಿಕಂಡಕ್ಟರ್) ಉದ್ಯಮವನ್ನು ಒಂದು ಮಟ್ಟದಲ್ಲಿ ಮುಂದೆ ಸಾಗಿಸುತ್ತಿದೆ.

ಇಂದು ಇ-ಕಾಮರ್ಸ್ ಪೋರ್ಟಲ್‌ಗಳಲ್ಲಿ ನಮ್ಮ ಐಡೆಂಟಿಟಿಯನ್ನು ಸುರಕ್ಷಿತಗೊಳಿಸಬೇಕಾಗಿದೆ. ನಮ್ಮ ಮಾಹಿತಿಯನ್ನು ಕ್ಲೌಡ್‌ನಲ್ಲಿ ಇಡುತ್ತಿರುವುದರಿಂದ ಇದರ ಸುರಕ್ಷತೆ ಪ್ರಾಮುಖ್ಯವನ್ನು ಪಡೆದಿದೆ. ನಮ್ಮ ದೇಶದ ಭದ್ರತೆಯ ನಿಟ್ಟಿನಲ್ಲಿ ಕೂಡ ಹೊರ ದೇಶದ ಮೆಮೊರಿ ತಂತ್ರಜ್ಞಾನದ ಅವಲಂಬನೆ ಅಸುರಕ್ಷಿತ. ಹೀಗಾಗಿ ನಮ್ಮ ದೇಶದಲ್ಲೆ ಮೆಮೊರಿ ತಂತ್ರಜ್ಞಾನವನ್ನು ಅಭಿವೃದ್ಧಿ ಪಡಿಸುವುದು ಅನಿವಾರ್ಯವಾಗಿತ್ತು.

ಇದರ ಹಿನ್ನೆಲೆಯಲ್ಲಿಯೇ ಐಐಟಿ ಬಾಂಬೆಯ ಎಲೆಕ್ಟ್ರಿಕಲ್ ಇಂಜಿನಿಯರಿಂಗ್ ವಿಭಾಗದ ಪ್ರೊ. ಉದಯನ್ ಗಂಗೂಲಿ ಮತ್ತು ಅವರ ತಂಡವು ಇಂತಹ ಸುರಕ್ಷಿತ ಅಪ್ಲಿಕೇಶನ್‌ಗಳಿಗಾಗಿ ದೇಶೀಯ ಸೆಮಿಕಂಡಕ್ಟರ್ ಮೆಮೊರಿಯನ್ನು ರಚಿಸುವ ಪ್ರಯತ್ನವನ್ನು ಮಾಡಿದ್ದಾರೆ. ಲ್ಯಾಬ್‌ನಿಂದ ಫ್ಯಾಬ್‌ಗೆ ಒಯ್ಯಲಾಗುತ್ತಿರುವ ಮೊದಲ ದೇಶೀಯ ಮೆಮೊರಿ ತಂತ್ರಜ್ಞಾನವನ್ನು ಅಭಿವೃದ್ಧಿ ಪಡಿಸಿರುವ ಕೀರ್ತಿ ಇವರದ್ದಾಗಿದೆ.

ಚಂಡೀಗಢದ ಸೆಮಿಕಂಡಕ್ಟರ್ ಲ್ಯಾಬ್‌ಗಳ ಸಹಭಾಗಿತ್ವದಲ್ಲಿ, ಪ್ರೊ. ಗಂಗೂಲಿ ಮತ್ತು ಅವರ ತಂಡವು, ಒಮ್ಮೆ ಮಾತ್ರ ಪ್ರೋಗ್ರಾಂ ಮಾಡಬಲ್ಲ ಮೆಮೊರಿ (ಒನ್-ಟೈಮ್-ಪ್ರೊಗ್ರಾಮೆಬಲ್, ಓಟಿಪಿ) ಮೆಮೊರಿ, ತಂತ್ರಜ್ಞಾನವನ್ನು ಪ್ರದರ್ಶಿಸಿದ್ದಾರೆ. ಇದನ್ನು ಸುರಕ್ಷಿತ ಮೆಮೊರಿ, ಹಾರ್ಡ್‌ವೇರ್ ಎನ್‌ಕ್ರಿಪ್ಶನ್ ಮತ್ತು ಕೃತಕ ಬುದ್ಧಿಮತ್ತೆಯಲ್ಲಿ ಬಳಸಬಹುದು.



ಸಂಶೋಧಕರು ಮೆಮೊರಿ ಕೋಶಕ್ಕೆ ನ್ಯಾನೊಸ್ಕೇಲ್ ರಚನೆಯನ್ನು ಅಳವಡಿಸಿದ್ದಾರೆ. ಎರಡು ಲೋಹದ ಪದರಗಳ ನಡುವೆ ಸಿಲಿಕಾನ್ ಆಕ್ಸೈಡ್‌ನ ತೆಳುವಾದ ಪದರವನ್ನು ಸ್ಯಾಂಡ್ವಿಚ್ ಮಾಡಲಾಗಿದೆ. ಈ ಸಿಲಿಕಾನ್ ಆಕ್ಸೈಡ್ ಪದರವು ಕೇವಲ 2.5 ನ್ಯಾನೊಮೀಟರ್ ಇರುತ್ತದೆ. ಅಂದರೆ ಇದು ಕೇವಲ 15 ಪರಮಾಣುಗಳಷ್ಟು ದಪ್ಪ! ಈ ರಚನೆಯು ನ್ಯಾನೊಕ್ಯಾಪ್ಯಾಸಿಟರ್ ಅನ್ನು ರೂಪಿಸುತ್ತದೆ ಮತ್ತು ಕರೆಂಟ್ ಹಾದುಹೋಗಲು ಬಿಡುವುದಿಲ್ಲ. ಈ ರೀತಿಯಲ್ಲಿ ಸೇರಿದ ಶುದ್ಧ ಸಿಲಿಕಾನ್ ಆಕ್ಸೈಡ್ ಒಂದು ಬಗೆಯ ಶೂನ್ಯಸ್ಥಿತಿಯಂತೆ ರೂಪಿಸಲಾಗುತ್ತದೆ.

ಒನ್-ಟೈಮ್-ಪ್ರೋಗ್ರಾಮೆಬಲ್ (ಓಟಿಪಿ) ಮೆಮೊರಿಯನ್ನು ಹೇಗೆ ಮಾಡಲಾಗುತ್ತದೆ ಎಂಬುದನ್ನು ಪ್ರೊ. ಗಂಗೂಲಿ ವಿವರಿಸುತ್ತಾರೆ: 'ನಾವು ಈ ಕೆಪಾಸಿಟರ್ ಒಳಗೆ ಮಿಂಚಿನ ಸಮಾನತೆಯ ಕರೆಂಟನ್ನು ಹಾಯಿಸಿದರೆ, ಇನ್ಸುಲೇಟರ್ ಹಾಳಾಗುತ್ತದೆ ಮತ್ತು ಕರೆಂಟ್ ಹಾದುಹೋಗಲು ಸಾಧ್ಯವಾಗುತ್ತದೆ. ಈ ಹಾಳಾದ ಇನ್ಸುಲೇಟರ್ ಒಳಗೆ ಒಂದು ಲೈನ್ ಶಾಶ್ವತವಾಗಿ ಉಳಿದುಕೊಳ್ಳುತ್ತದೆ. ಹಾಗಾಗಿ ಕರೆಂಟ್ ಸಾಗಲು ಅನುವು ಆಗುತ್ತದೆ. ಇದರಿಂದಾಗಿ, ಎರಡು ಸ್ಥಿತಿಗಳು ರಚನೆಯಾದಂತೆ ಆಗುತ್ತದೆ. ಒಂದು, ಕರೆಂಟ್ ಸಾಗದ ಶುದ್ಧವಾದ ಸಿಲಿಕಾನ್ ಆಕ್ಸೈಡ್ ಹೊಂದಿದ ಶೂನ್ಯ ಸ್ಥಿತಿ; ಇನ್ನೊಂದು, ಹೆಚ್ಚಿನ ಕರೆಂಟ್ ಸಾಗಲು ಅನುವು ಮಾಡುವ ಹಾಳಾದ ಇನ್ಸುಲೇಟರ್ ಲೈನ್. ಈ ಬಗೆಯ ಪ್ರೋಗ್ರಾಮಿಂಗ್ ಅನ್ನು ಕೇವಲ ಒಮ್ಮೆ ಮಾಡಬಹುದು ಹೊರತು, ಆದರೆ ಇದನ್ನು ಶಾಶ್ವತವಾಗಿ ಹಲವಾರು ಬಾರಿ ಓದಬಹುದು.'

ಹಲವಾರು ಉತ್ಪಾದನಾ ಸಿದ್ಧತೆ ಮಟ್ಟವನ್ನು ಹಾದುಹೋದ ನಂತರ, ತಂತ್ರಜ್ಞಾನವು ಉತ್ಪಾದನೆಗೆ ಸಿದ್ಧವಾಗಿದೆ. ಇಂಜಿನಿಯರ್‌ಗಳು ಮೂಲಭೂತ ಉತ್ಪಾದನಾ ಪ್ರಕ್ರಿಯೆಯನ್ನು ಒಟ್ಟು ಎಂಟು ಹಂತಗಳಲ್ಲಿ ರೂಪಿಸಿದ್ದಾರೆ. ಮೊದಲ ಪೈಲಟ್ ಹಂತದಲ್ಲಿ ಕಡಿಮೆ ಮಟ್ಟದಲ್ಲಿ ಉತ್ಪಾದನೆಯನ್ನು ಮಾಡಿದ್ದು, ಈಗ ಸಂಪೂರ್ಣ ರೀತಿಯಲ್ಲಿ ಉತ್ಪಾದನೆ ಮಾಡಲು ಸಾಮರ್ಥ್ಯ ಬಂದಿದೆ.

ಈ ತಂತ್ರಜ್ಞಾನವನ್ನು ಅಭಿವೃದ್ಧಿ ಪಡಿಸಿರುವುದರಿಂದ ಇದನ್ನು ಬಳಸಬಹುದಾದ ಅಪ್ಲಿಕೇಷನ್‌ಗಳು ಆಗಲೇ ಸೂಚಿಸಿದಂತೆ ಸಾಕಷ್ಟಿದೆ.

ಇದನ್ನು ಬಳಸಬಹುದಾದ ಗಮನಾರ್ಹವಾದ ಅಪ್ಲಿಕೇಶನ್‌ಗಳೆಂದರೆ ಇ-ಪಾಸ್‌ಪೋರ್ಟ್‌ಗಳಂತಹ ಸರ್ಕಾರಿ ಗುರುತಿಸುವಿಕೆಗಳು; ಇದಕ್ಕೆ ವರ್ಷಕ್ಕೆ ಸುಮಾರು ನಾಲ್ಕು ಕೋಟಿ ಚಿಪ್‌ಗಳನ್ನು ಬೇಕಾಗುತ್ತದೆ. ಇನ್ನು ನಿಯರ್ ಫೀಲ್ಡ್ ಕಮ್ಯುನಿಕೇಷನ್ ಮತ್ತು ಟಚ್‌ಲೆಸ್ ನಗದು ರಹಿತ ವಹಿವಾಟು ಹೊಂದಿರುವ ಮೊಬೈಲ್ ಫೋನ್‌ಗಳು ಓಟಿಪಿ ಮೆಮೊರಿ ತಂತ್ರಜ್ಞಾನವನ್ನು ಬಳಸಬಹುದು. ಇದಲ್ಲದೆ ಸುರಕ್ಷಿತ ನಾವಿಕ್ ಐಸಿ, ಜಿಪಿಎಸ್ ಮತ್ತು ಹಲವಾರು ದೇಶದ ಭದ್ರತಾ ನಿಟ್ಟಿನಲ್ಲಿ ಬಳಸಬಹುದಾದ ಅಪ್ಲಿಕೇಶನ್‌ಗಳು ಮತ್ತು ಎಂಬೆಡೆಡ್ ಸಿಸ್ಟಮ್‌ಗಳಲ್ಲಿ ಇದನ್ನು ಬಳಸಬಹುದು.

ಅಪ್ಲಿಕೇಶನ್‌ಗಳ ದೃಢೀಕರಣ ಮತ್ತು ಡೇಟಾ ಸುರಕ್ಷತೆಯನ್ನು ಸಕ್ರಿಯಗೊಳಿಸುವ ಹಾರ್ಡ್‌ವೇರ್ ಎನ್‌ಕ್ರಿಪ್ಶನ್, ಎನ್‌ಕ್ರಿಪ್ಟ್ ಮಾಡಿದ ಡೇಟಾವನ್ನು ಹೊಂದಲು ಮೆಮೊರಿಗಳನ್ನು ಸಕ್ರಿಯಗೊಳಿಸುವ ಸುರಕ್ಷಿತ ಮೆಮೊರಿ, ಬಾಹ್ಯಾಕಾಶ ಅಪ್ಲಿಕೇಶನ್‌ಗಳಿಗಾಗಿ ರೇಡಿಯೇಷನ್ ಹಾರ್ಡ್ ಮೆಮೊರಿ ಮತ್ತು ಓಟಿಪಿ ತಂತ್ರಜ್ಞಾನದ ಆಧಾರದ ಮೇಲೆ ನ್ಯೂರಲ್ ನೆಟ್‌ವರ್ಕ್ ಚಿಪ್‌ಗಳು, ಎಲ್ಲ ಈ ಹೊಸ ತಂತ್ರಜ್ಞಾನದ ಪ್ರಯೋಜನ ಪಡೆಯಬಹುದು.

ಈ ತಂತ್ರಜ್ಞಾನ ಒಂದು ಮೈಲಿಗಲ್ಲನ್ನು ಸಾಧಿಸಿದ ನಂತರ, ದೇಶದ ಭದ್ರತೆ ಮತ್ತು ಇತರೆ ವಾಣಿಜ್ಯ ಕ್ಷೇತ್ರಗಳಲ್ಲಿ ಇದರ ಬಳಕೆಯನ್ನು ಸಾಧ್ಯವಾಗಿಸುತ್ತದೆ. ಜಾಗತಿಕವಾಗಿ ಓಟಿಪಿ ಮೆಮೊರಿ ತಂತ್ರಜ್ಞಾನದ ಅಂದಾಜು ಮಾರುಕಟ್ಟೆ ಸುಮಾರು 14 ಕೋಟಿ ಅಮೆರಿಕನ್ ಡಾಲರ್‌ನಷ್ಟು ಎಂದು ಊಹಿಸಲಾಗಿದೆ.

ಭಾರತದದ್ದೇ ಆದ ತಂತ್ರಜ್ಞಾನ ಮತ್ತು ವಿನ್ಯಾಸವು ರಾಷ್ಟ್ರೀಯ ಭದ್ರತೆಯ ದೃಷ್ಟಿಯಿಂದ ಹೆಚ್ಚು ಪ್ರಾಮುಖ್ಯವನ್ನು ಪಡೆಯುತ್ತದೆ. ❖

ವಿಂಡೋಸ್ 11

ಕೆಲಸ ಸುಲಭವಾಗಲು ಟಿಪ್ಸ್

ಅವಿನಾಶ್ ಬಿ.

ಕಂಪ್ಯೂಟರ್ (ಡೆಸ್ಕ್‌ಟಾಪ್ ಅಥವಾ ಲ್ಯಾಪ್‌ಟಾಪ್) ಬಳಸುತ್ತಿರುವವರಲ್ಲಿ ಹೆಚ್ಚಿನ ಮಂದಿ ಇತ್ತೀಚೆಗೆ ಹೊಚ್ಚ ಹೊಸ ವಿಂಡೋಸ್ 11 ಕಾರ್ಯಾಚರಣೆ ವ್ಯವಸ್ಥೆಗೆ ಅಪ್‌ಗ್ರೇಡ್ ಆಗಿರಬಹುದು ಅಥವಾ ಹೊಸ ವಿಂಡೋಸ್ ಸಾಧನ ಖರೀದಿಸಿದಾಗ ವಿಂಡೋಸ್ 11 ಜೊತೆಯಾಗಿ ಬಂದಿರಬಹುದು. ಹೊಸ ಕಾರ್ಯಾಚರಣೆ ವ್ಯವಸ್ಥೆ (ಒಎಸ್) ಬಂದಾಗಲೆಲ್ಲಾ ಏನೋ ವಿಶೇಷವಿದೆ ಎಂಬ ಬಗ್ಗೆ ಕುತೂಹಲ ಸಹಜ. ಹಿಂದಿನ ಸಾಧನಗಳಂತಲ್ಲದ ವಿಂಡೋಸ್ 11 ಒಎಸ್, ಅತ್ಯಾಧುನಿಕ ವೈಶಿಷ್ಟ್ಯಗಳೊಂದಿಗೆ ಗಮನ ಸೆಳೆಯುತ್ತದೆ. ಇಂಥದ್ದರಲ್ಲಿ, ಈ ಅತ್ಯಾಧುನಿಕ ಕಾರ್ಯಾಚರಣಾ ವ್ಯವಸ್ಥೆಯ ಪರಿಪೂರ್ಣ ಪ್ರಯೋಜನಕ್ಕೆ ಸಹಕರಿಸಬಲ್ಲ ಕೆಲವೊಂದು ಟಿಪ್ಸ್ ಇಲ್ಲಿವೆ.

ಹಿಂದಿನ ಸ್ಥಾನಕ್ಕೆ ಟಾಸ್ಕ್‌ಬಾರ್

ವಿಂಡೋಸ್‌ನಲ್ಲಿ ಸ್ಟಾರ್ಟ್ ಬಟನ್ ಹಾಗೂ ಟಾಸ್ಕ್ ಬಾರ್‌ನಲ್ಲಿರುವ (ಕೆಳಭಾಗದಲ್ಲಿ ಅಪ್ಲಿಕೇಶನ್‌ಗಳ ಐಕಾನ್‌ಗಳಿರುವ ಪಟ್ಟಿ) ಐಕಾನ್‌ಗಳು ಈಗ ಮಧ್ಯಭಾಗಕ್ಕೆ ಬಂದಿರುವುದನ್ನು ಹೆಚ್ಚಿನವರು ಗಮನಿಸಿರಬಹುದು. ಬಹುತೇಕರಿಗೆ ಇದು ಇಷ್ಟವಾಗಿದೆ. ಆದರೆ, ಹಿಂದಿನ ರೀತಿಯಲ್ಲೇ ಎಡಭಾಗದಲ್ಲೇ ಈ ಟಾಸ್ಕ್ ಬಾರ್ ಗೋಚರಿಸಬೇಕೆಂದಾದರೆ, ಟಾಸ್ಕ್ ಬಾರ್ ಮೇಲೆ ಬಲ-ಕ್ಲಿಕ್ ಮಾಡಿ, ಟಾಸ್ಕ್‌ಬಾರ್ ಸೆಟ್ಟಿಂಗ್ಸ್ ಆಯ್ಕೆ ಮಾಡಿ, ಕೆಳಭಾಗದಲ್ಲಿ 'ಟಾಸ್ಕ್‌ಬಾರ್ ಬಿಹೇವಿಯರ್ಸ್' ವಿಭಾಗಕ್ಕೆ ಹೋದಾಗ, ಆರಂಭದಲ್ಲಿರುವ 'ಟಾಸ್ಕ್‌ಬಾರ್ ಅಲೈನ್‌ಮೆಂಟ್'ನ ಬಲಕ್ಕಿರುವ ಡ್ರಾಪ್‌ಡೌನ್ ಮೆನುವಿನಿಂದ 'ಎಡ' ಆಯ್ಕೆ ಮಾಡಿದರಾಯಿತು.

ವಿಂಡೋಗಳ ಜೋಡಣೆ

ಹೆಚ್ಚು ಅಪ್ಲಿಕೇಶನ್‌ಗಳನ್ನು ತೆರೆದಿಟ್ಟು ಹಲವು ವಿಂಡೋಗಳಲ್ಲಿ ಕೆಲಸ ಮಾಡಬೇಕಾಗಿ ಬಂದಾಗ, ಸ್ಕ್ರೀನ್‌ನಲ್ಲಿ ಇವು ಒಂದೇ ಕಡೆ ಗೋಚರಿಸಿದರೆ ಅನುಕೂಲವಾಗುತ್ತದೆ. ಇದಕ್ಕೆ ವಿಂಡೋಸ್ 11ರ 'ಸ್ನ್ಯಾಪ್' ವೈಶಿಷ್ಟ್ಯ ನೆರವಿಗೆ ಬರುತ್ತದೆ. ಯಾವುದೇ ವಿಂಡೋದ ಬಲ ಮೇಲ್ಭಾಗದಲ್ಲಿರುವ ದೊಡ್ಡದಾಗಿಸುವ/ಕಿರಿದಾಗಿಸುವ ಐಕಾನ್ (ಚೌಕಾಕೃತಿ) ಮೇಲೆ ಮೌಸ್ ಅನ್ನು ಹೋವರ್ ಮಾಡಿದರೆ (ಕ್ಲಿಕ್ ಮಾಡದೆ ಪಾಯಿಂಟರ್ ಮಾತ್ರ ತೋರಿಸಿದಾಗ), ತೆರೆದಿರುವ ವಿಂಡೋಗಳನ್ನು ಯಾವ ವಿನ್ಯಾಸದಲ್ಲಿ ಸ್ಕ್ರೀನ್ ಮೇಲೆ ಕಾಣಿಸುವಂತೆ ಜೋಡಿಸಬೇಕೆಂಬ (ಕೊಲಾಜ್ ರೂಪದಲ್ಲಿ) ಟೆಂಪ್ಲೇಟ್ ಕಾಣಿಸುತ್ತದೆ. ನಮಗೆ ಬೇಕಾಗಿರುವ ವಿನ್ಯಾಸದ (ಲೇಔಟ್) ಮೇಲೆ ಕ್ಲಿಕ್ ಮಾಡಿದರಾಯಿತು.

ಸೆಟ್ಟಿಂಗ್ಸ್‌ಗೆ ನೇರವಾಗಿ ಹೋಗಲು

ಕಂಪ್ಯೂಟರ್‌ನ ಸೆಟ್ಟಿಂಗ್ಸ್ ವಿಭಾಗಕ್ಕೆ ನೇರವಾಗಿ ಹೋಗಲು ಶಾರ್ಟ್‌ಕಟ್ ವಿಧಾನ ಎಂದರೆ ಕೀಬೋರ್ಡ್‌ನಲ್ಲಿರುವ ವಿಂಡೋಸ್ ಬಟನ್ ಹಾಗೂ ಐ (I) ಅಕ್ಷರಗಳನ್ನು ಏಕಕಾಲಕ್ಕೆ ಒತ್ತುವುದು.

ಫೋಕಸ್ ಅಸಿಸ್ಟ್

ತುಂಬ ತುರ್ತಾದ ಮತ್ತು ಏಕಾಗ್ರತೆ ಬಯಸುವ ಕೆಲಸ ಮಾಡುತ್ತಿರುವಾಗ, ನೋಟಿಫಿಕೇಶನ್‌ಗಳಿಂದ ತೊಂದರೆಯಾಗದಂತೆ ವ್ಯವಸ್ಥೆಗೊಳಿಸುವ ವೈಶಿಷ್ಟ್ಯವೇ ಫೋಕಸ್ ಅಸಿಸ್ಟ್. ನೋಟಿಫಿಕೇಶನ್‌ಗಳ ಮೇಲೆ ನಿಯಂತ್ರಣ ಹೇರಲು, ಸೆಟ್ಟಿಂಗ್ಸ್ ತೆರೆದು, 'ಸಿಸ್ಟಂ' ವಿಭಾಗದಲ್ಲಿ 'ಫೋಕಸ್ ಅಸಿಸ್ಟ್' ಎಂಬುದನ್ನು ಆಯ್ಕೆ ಮಾಡಿಕೊಳ್ಳಿ. ಅಲ್ಲಿ ಅಲಾರಂ ಮಾತ್ರ ಎಂದು ಆಯ್ಕೆ ಮಾಡಿದಲ್ಲಿ, ಅಲಾರಂ ಹೊರತಾಗಿ ಬೇರೆಲ್ಲ ನೋಟಿಫಿಕೇಶನ್‌ಗಳು ಕಾಣಿಸುವುದಿಲ್ಲ. ಇಲ್ಲೇ ಆದ್ಯತೆಯುಳ್ಳವನ್ನು ಮಾತ್ರ ಅನುಮತಿ ನೀಡಲು ಆಯ್ಕೆ ಮಾಡಿಕೊಳ್ಳಬಹುದು. ಯಾವ ಸಮಯದಲ್ಲಿ 'ಫೋಕಸ್ ಅಸಿಸ್ಟ್' ಸ್ವಯಂಚಾಲಿತವಾಗಿ ಚಾಲೂ ಆಗಬೇಕೆಂದು ಸಮಯವನ್ನು ಹೊಂದಿಸುವ ಆಯ್ಕೆಯೂ ಇಲ್ಲೇ ಇದೆ.

ವಿಂಡೋಗಳನ್ನು ಬದಲಿಸಲು


ತೆರೆದಿರುವ ವಿಂಡೋಗಳು ಮತ್ತು ಅಪ್ಲಿಕೇಶನ್‌ಗಳ ನಡುವೆ ಬದಲಾಯಿಸಿಕೊಳ್ಳುವುದಕ್ಕಾಗಿ ಆಲ್ಟ್ + ಟ್ಯಾಬ್ ಕೀಲಿಯನ್ನು ಹೆಚ್ಚಿನವರು ಬಳಸಿರಬಹುದು. ವಿಂಡೋಸ್ 11ರಲ್ಲಿ ಹೊಸ ವೈಶಿಷ್ಟ್ಯವೇನೆಂದರೆ, ಬ್ರೌಸರ್‌ನಲ್ಲಿ ತೆರೆದಿರುವ ಹಲವು ಟ್ಯಾಬ್‌ಗಳಲ್ಲಿ ತೆರೆದುಕೊಂಡಿರುವ ಪ್ರತ್ಯೇಕ ಪುಟಗಳಿಗೂ ಇದೇ ಕೀಲಿ ಸಂಯೋಜನೆಯನ್ನು ಬಳಸಬಹುದಾಗಿದೆ. ಇದು ಬೇಡವೆಂದಾದರೆ, ಸೆಟ್ಟಿಂಗ್ಸ್ > ಸಿಸ್ಟಂ ಎಂಬಲ್ಲಿರುವ Alt + Tab ಪಕ್ಕದಲ್ಲಿರುವ ಡ್ರಾಪ್‌ಡೌನ್ ಮೆನುವಿನಲ್ಲಿ 'ಓಪನ್ ವಿಂಡೋಸ್ ಓನ್ಲಿ' ಆಯ್ಕೆ ಮಾಡಿಕೊಂಡರಾಯಿತು.

ವಿಜೆಟ್‌ಗಳ ಶಾರ್ಟ್ ಕಟ್

ಟಾಸ್ಕ್ ಬಾರ್‌ನಲ್ಲಿರುವ ನೀಲಿ ಬಣ್ಣದ ಬಟನ್ ಅಥವಾ ಕೀಬೋರ್ಡ್‌ನಲ್ಲಿರುವ ವಿಂಡೋಸ್ ಬಟನ್ ಒತ್ತಿದಾಗ, ಒಂದು ವಿಂಡೋದಲ್ಲಿ ಹಲವು ಆ್ಯಪ್‌ಗಳ ವಿಜೆಟ್ ಕಾಣಿಸುತ್ತದೆ. ಹೆಚ್ಚು ಬಳಸುವ ಆ್ಯಪ್ ಅಥವಾ ಅಪ್ಲಿಕೇಶನ್‌ಗಳನ್ನು ಈ ಜಾಗದಲ್ಲಿ ಶಾರ್ಟ್‌ಕಟ್ ರೂಪದಲ್ಲಿ ಜೋಡಿಸಿಟ್ಟುಕೊಳ್ಳಬಹುದು. ಇದಕ್ಕಾಗಿ, ಈ ಬಟನ್ ಕ್ಲಿಕ್ ಮಾಡಿದಾಗ, ಆ್ಯಪ್ ಶಾರ್ಟ್‌ಕಟ್ಸ್ ಕಾಣಿಸುತ್ತವೆ. ಅವುಗಳ ಮೇಲೆ ಬಲ-ಕ್ಲಿಕ್ ಮಾಡಿದಾಗ, ಬೇಕಾದವುಗಳನ್ನು ಸೇರಿಸುವ, ಬೇಡದಿರುವ ಆ್ಯಪ್‌ಗಳನ್ನು ಅಲ್ಲಿಂದ ತೆಗೆಯುವ ಆಯ್ಕೆಗಳು ಕಾಣಿಸುತ್ತವೆ.

ಪ್ರೋಗ್ರಾಂಗಳು, ಅಪ್ಲಿಕೇಶನ್‌ಗಳಿಗೆ ಶಾರ್ಟ್‌ಕಟ್ಸ್

ವಿಂಡೋಸ್ 11ರ ವಿಭಿನ್ನ ಅಪ್ಲಿಕೇಶನ್‌ಗಳಿಗೆ ಹೋಗುವುದಕ್ಕಾಗಿರುವ ಮೆನುವನ್ನು ನೋಡುವುದಕ್ಕಾಗಿ ಸುಲಭವಾದ ವಿಧಾನವೆಂದರೆ, ಸ್ಟಾರ್ಟ್ ಬಟನ್ (ನಾಲ್ಕು ನೀಲಿ ಚೌಕಗಳಿರುವ) ಮೇಲೆ ಬಲ-ಕ್ಲಿಕ್ ಮಾಡಿ ಅಥವಾ ಕೀಬೋರ್ಡ್‌ನಲ್ಲಿರುವ ವಿಂಡೋಸ್ ಬಟನ್ ಹಾಗೂ X ಕೀ ಒತ್ತಿದರೆ ಸಾಕಾಗುತ್ತದೆ.



ಟಾಸ್ಕ್ ಬಾರ್ ಮರೆಯಾಗಿಸುವುದು

ಸ್ಕ್ರೀನ್‌ನ ತಳಭಾಗದಲ್ಲಿ ಹಲವು ಆ್ಯಪ್‌ಗಳಿಗೆ ಶಾರ್ಟ್‌ಕಟ್ ಐಕಾನ್‌ಗಳಿರುವ ಟಾಸ್ಕ್ ಬಾರ್ ಇರುತ್ತದೆಯಲ್ಲವೇ? ಇದನ್ನು ತಾತ್ಕಾಲಿಕವಾಗಿ ಮರೆಯಾಗಿಸಿದರೆ, ಕೆಲಸ ಮಾಡುವ ವಿಂಡೋವನ್ನು ಪೂರ್ಣ ಪರದೆಯಲ್ಲಿ ನೋಡಬಹುದು. ಇದಕ್ಕಾಗಿ ಟಾಸ್ಕ್‌ಬಾರ್‌ನ ಖಾಲಿ ಜಾಗದಲ್ಲಿ ಬಲ-ಕ್ಲಿಕ್ ಮಾಡಿದಾಗ, ಟಾಸ್ಕ್ ಬಾರ್ ಸೆಟ್ಟಿಂಗ್ಸ್ ಕಾಣಸಿಗುತ್ತದೆ. ತಳಭಾಗದಲ್ಲಿರುವ ಟಾಸ್ಕ್‌ಬಾರ್ ಬಿಹೇವಿಯರ್ಸ್ ವಿಭಾಗದಲ್ಲಿ, ಟಾಸ್ಕ್‌ಬಾರ್ ಅನ್ನು ಸ್ವಯಂ ಆಗಿ ಮರೆಯಾಗಿಸುವ (Automatically hide the taskbar) ಚೆಕ್ ಬಾಕ್ಸ್ ಮೇಲೆ ಕ್ಲಿಕ್ ಮಾಡಿದರಾಯಿತು. ಹೀಗೆ ಮಾಡಿದರೆ, ನೀವು ಮೌಸ್ ಪಾಯಿಂಟರನ್ನು ಸ್ಕ್ರೀನ್‌ನ ಕೆಳಭಾಗಕ್ಕೆ ತಂದಾಗ ಮಾತ್ರವೇ ಟಾಸ್ಕ್‌ಬಾರ್ ಕಾಣಿಸುತ್ತದೆ.

ನೇರವಾಗಿ ಡೆಸ್ಕ್‌ಟಾಪ್ ನೋಡಲು

ಎಲ್ಲ ವಿಂಡೋಗಳನ್ನು ಬದಿಗಿಟ್ಟು, ನೇರವಾಗಿ ಡೆಸ್ಕ್‌ಟಾಪ್ ಸ್ಕ್ರೀನ್‌ಗೆ ಹೋಗಬೇಕೆಂದಾದರೆ, ಕೀಬೋರ್ಡ್‌ನಲ್ಲಿರುವ ವಿಂಡೋಸ್ ಬಟನ್ ಜೊತೆಗೆ H ಕೀಲಿ ಒತ್ತಿದರೆ, ಬೇರೆಲ್ಲ ವಿಂಡೋಗಳು ಅಡಗಿ, ಡೆಸ್ಕ್‌ಟಾಪ್ ಮಾತ್ರವೇ ಗೋಚರಿಸುತ್ತದೆ. ❖

ಬೊಮ್ಮಾಯಿ ಸರ್ಕಾರದ ನಡೆಗೆ ಗೃಹ ಸಚಿವರ ಶಹಬ್ಬಾಸ್

'ಎನ್‌ಇಪಿ' ಜಾರಿಗೆ ಶಾ ಮೆಚ್ಚುಗೆ

ಬೆಂಗಳೂರು: 'ಇಡೀ ದೇಶದಲ್ಲಿ ಮೊತ್ತ ಮೊದಲ ಬಾರಿಗೆ ಹೊಸ 'ರಾಷ್ಟ್ರೀಯ ಶಿಕ್ಷಣ ನೀತಿ' (ಎನ್‌ಇಪಿ) ಜಾರಿಗೆ ತಂದಿರುವ ಕರ್ನಾಟಕದ ನಡೆ ಶ್ಲಾಘನೀಯ. ಇತರೆಲ್ಲ ರಾಜ್ಯಗಳಿಗೆ ಇದೊಂದು ಮಾದರಿ' ಎಂದು ಕೇಂದ್ರ ಗೃಹ ಮತ್ತು ಸಹಕಾರ ಸಚಿವ ಅಮಿತ್ ಶಾ ಬಣ್ಣಿಸಿದರು.

ಕೇಂದ್ರ ಸರ್ಕಾರದ ರಾಷ್ಟ್ರೀಯ ಉನ್ನತ ಶಿಕ್ಷಣ ಅಭಿಯಾನದಡಿ ರಾಜ್ಯದಲ್ಲಿ ಸ್ಥಾಪಿಸಿರುವ 'ನೃಪತುಂಗ ಏಕೀಕೃತ ವಿಶ್ವವಿದ್ಯಾಲಯ'ವನ್ನು ಮಂಗಳವಾರ ಅಧಿಕೃತವಾಗಿ ಉದ್ಘಾಟಿಸಿ ಮಾತನಾಡಿದ ಅವರು, ಶಿಕ್ಷಣ ವ್ಯವಸ್ಥೆಯಲ್ಲಿ ಹೊಸ ನೀತಿ ಪರಿಚಯಿಸುವ ಕ್ರಾಂತಿಕಾರಿ ಹೆಜ್ಜೆ ಇಟ್ಟ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನೇತೃತ್ವದ ರಾಜ್ಯ ಸರ್ಕಾರವನ್ನು ಕೊಂಡಾಡಿದರು.


'ಭಾರತವನ್ನು ಸಶಕ್ತವಾಗಿ ಕಟ್ಟಿ ಜಾಗತಿಕ ಮಟ್ಟದಲ್ಲಿ ಪ್ರತಿಷ್ಠಾಪಿಸುವುದು ಮತ್ತು ಯುವಜನರಿಗೆ ಉಜ್ವಲ ಅವಕಾಶಗಳನ್ನು ಒದಗಿಸಬೇಕೆನ್ನುವುದೇ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರದ ಸಂಕಲ್ಪ. ಈ ಕ್ರಾಂತಿಕಾರಕ ಬದಲಾವಣೆಗಳನ್ನು ತರಲೆಂದೇ ಹೊಸ ರಾಷ್ಟ್ರೀಯ ಶಿಕ್ಷಣ ನೀತಿ ಜಾರಿಗೆ ತರಲಾಗಿದೆ. ಈ ನೀತಿಯ ಮೂಲಕ ಭಾರತವನ್ನು ಜ್ಞಾನಾಧರಿತ 'ಸೂಪರ್ ಪವರ್' ಮಾಡುವ ಉದ್ದೇಶವಿದೆ. ಆ ಹಾದಿಯಲ್ಲಿ ಕರ್ನಾಟಕ ಮೂಂಚೂಣಿಯಲ್ಲಿ ನಿಂತಿದೆ' ಎಂದೂ ಹೊಗಳಿದರು.

'ದೇಶದಲ್ಲಿ ಸಂಭವಿಸುತ್ತಿರುವ ಶೈಕ್ಷಣಿಕ ಕ್ರಾಂತಿಯಲ್ಲಿ ಭಾರತೀಯ ಪ್ರಾದೇಶಿಕ ಭಾಷೆಗಳಿಗೆ ಮಹತ್ವದ ಸ್ಥಾನವಿದೆ' ಎಂದರು.

ಒಂದು ದೇಶ ದೊಡ್ಡದೊಡ್ಡ ಸಾಧನೆಗಳನ್ನು ಮಾಡಲು ವ್ಯಕ್ತಿಗಳ ಚಿಕ್ಕಚಿಕ್ಕ ಸಂಕಲ್ಪಗಳು ನಿರ್ಣಾಯಕ ಕೊಡುಗೆ ಕೊಡುತ್ತವೆ. ಈ ನಿಟ್ಟಿನಲ್ಲಿ, ದೇಶವನ್ನು ಪ್ರೀತಿಸುವಂಥ ಶಿಕ್ಷಣವನ್ನು ಎನ್‌ಇಪಿ ಅಡಿಯಲ್ಲಿ ಒದಗಿಸಲಾಗುವುದು. ಇದು ಸಂಪೂರ್ಣ ಭಾರತೀಯ ದೃಷ್ಟಿಕೋನವನ್ನು ಹೊಂದಿದೆ. ದೇಶದ ಪ್ರಗತಿ ದೃಷ್ಟಿಯಿಂದ ಮುಂದಿನ 25 ವರ್ಷ ಅತ್ಯಂತ ಮಹತ್ವದ್ದು. ಭಾರತವು ವಿಶ್ವಗುರು ಎನಿಸಿಕೊಳ್ಳುವುದು ನಿಶ್ಚಿತ' ಎಂದು ಪ್ರತಿಪಾದಿಸಿದ ಶಾ, 'ಎಂಟು ವರ್ಷಗಳಿಂದೀಚೆಗೆ ದೇಶದ ಗ್ರಾಮೀಣ ಭಾಗದಲ್ಲಿ 410 ಉನ್ನತ ಶಿಕ್ಷಣ ಸಂಸ್ಥೆಗಳನ್ನು ಅಸ್ತಿತ್ವಕ್ಕೆ ತರಲಾಗಿದೆ. ಜತೆಗೆ, ಜಮ್ಮು-ಕಾಶ್ಮೀರದ ಲಡಾಖ್ ಮತ್ತು ಈಶಾನ್ಯ ಭಾರತ ಸೇರಿದಂತೆ ಉದ್ದಗಲಕ್ಕೂ ಕೇಂದ್ರೀಯ ವಿಶ್ವವಿದ್ಯಾಲಯಗಳು, ಏಮ್ಸ್, ಐಐಟಿಗಳು, ವೈದ್ಯಕೀಯ ಕಾಲೇಜುಗಳು ಮತ್ತು ಹೊಸ ಜ್ಞಾನಶಾಖೆಗಳ ವಿಶ್ವವಿದ್ಯಾಲಯಗಳನ್ನು ಆರಂಭಿಸಲಾಗಿದೆ' ಎಂದು ವಿವರಿಸಿದರು.


ಪ್ರಸ್ತುತಿ: ಪಿ.ವಿ. ಬ್ರ್ಯಾಂಡ್ ಸ್ಪಾಟ್

'ಎನ್‌ಇಪಿಯಿಂದ ಸಮಗ್ರ ಪರಿವರ್ತನೆ: ಬೊಮ್ಮಾಯಿ




'ಇದು ಪರಿವರ್ತನೆಯ ಪರ್ವಕಾಲ. ಜನಸಂಖ್ಯೆಯಲ್ಲಿ ಶೇ 46ರಷ್ಟಿರುವ ಯುವಜನರನ್ನು ದೇಶದ ಆಸ್ತಿಯೆಂದು ಭಾವಿಸಲಾಗಿದೆ. ಯುವಜನರಿಗೆ ಶಿಕ್ಷಣ, ಉದ್ಯೋಗ ಮತ್ತು ಸಬಲೀಕರಣ ಇವೇ ನಮ್ಮ ಸರ್ಕಾರದ ಮೂಲಮಂತ್ರ ಕ್ಯಾಂಪಸ್ ಸಂದರ್ಶನ, ಸ್ವ-ಉದ್ಯೋಗಕ್ಕೆ ಒತ್ತು ಕೊಡುವುದರ ಜತೆಗೆ ಪ್ರತ್ಯೇಕ ಉದ್ಯೋಗ ನೀತಿಯನ್ನೇ ರಾಜ್ಯದಲ್ಲಿ ರೂಪಿಸಲಾಗಿದೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ನೃಪತುಂಗ ವಿ.ವಿ.ಗೆ ಕೇಂದ್ರ ಸರ್ಕಾರ ₹ 55 ಕೋಟಿ ಅನುದಾನ ಮಂಜೂರು ಮಾಡಿದೆ. ಇದಕ್ಕೆ ಅಗತ್ಯವಿರುವ ಬಾಕಿ ಹಣವನ್ನು ರಾಜ್ಯ ಸರ್ಕಾರ ಒದಗಿಸಲಿದೆ. ಕಾಲದ ಜತೆಯಲ್ಲಿ ಬದಲಾವಣೆಗೆ ತೆರೆದುಕೊಳ್ಳದೆ ಹೋದರೆ ಅವಕಾಶಗಳು ಕೈತಪ್ಪಿ ಹೋಗಲಿವೆ. ಹೀಗಾಗಿ, ರಾಜ್ಯದಲ್ಲಿ ಎನ್‌ಇಪಿ ಜಾರಿಗೊಳಿಸುತ್ತಿದ್ದು, ಪೂರ್ವ ಪ್ರಾಥಮಿಕ ಹಂತದಿಂದ ಹಿಡಿದು ಸ್ನಾತಕೋತ್ತರ ಮಟ್ಟದವರೆಗೂ ಇನ್ನು ಮುಂದೆ ಸಮಗ್ರ ಪರಿವರ್ತನೆ ಕಾಣಿಸಿಕೊಳ್ಳಲಿದೆ. ನೃಪತುಂಗ ವಿಶ್ವವಿದ್ಯಾಲಯವು ಎನ್‌ಇಪಿ ನೀತಿಯನ್ನು ಸಂಪೂರ್ಣವಾಗಿ ಅಳವಡಿಸಿಕೊಂಡಿದೆ. ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ಅವರು ಉನ್ನತ ಶಿಕ್ಷಣದಲ್ಲಿ ಎನ್‌ಇಪಿ ಅಳವಡಿಸಲು ಎರಡು ವರ್ಷಗಳಿಂದ ಎಡೆಬಿಡದೆ ಶ್ರಮಿಸುತ್ತಿದ್ದಾರೆ' ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.



ದೇಶದ ಭವಿಷ್ಯವಾಗಿರುವ ವಿದ್ಯಾರ್ಥಿಗಳಲ್ಲಿ ದೇಶಭಕ್ತಿಯ ಸಂಸ್ಕಾರ ಬೆಳೆಸುವುದು ಕೇಂದ್ರ ಸರ್ಕಾರದ ಪ್ರತಿಜ್ಞೆ. ಕರ್ನಾಟಕ ಅದಕ್ಕೆ ಪೂರಕವಾಗಿ ಸ್ಪಂದಿಸಿದೆ

ಬೆಂಗಳೂರಿನಲ್ಲಿ ಮಂಗಳವಾರ 'ನೃಪತುಂಗ ವಿಶ್ವವಿದ್ಯಾಲಯ' ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಕೇಂದ್ರ ಗೃಹ ಮತ್ತು ಸಹಕಾರ ಸಚಿವ ಅಮಿತ್ ಶಾ ಮಾತನಾಡಿದರು



'ಶೀಘ್ರದಲ್ಲಿ ಇನ್ನೂ ಏಳು ವಿವಿ'

'ನವಭಾರತ ನಿರ್ಮಾಣಕ್ಕಾಗಿ ನವಕರ್ನಾಟಕವು ತನ್ನ ಮೌಲಿಕ ಕೊಡುಗೆ ನೀಡಲಿದೆ' ಎಂದು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ಹೇಳಿದರು.

'ಕಳೆದ ಎರಡು ವರ್ಷಗಳಲ್ಲಿ ರಾಜ್ಯದಲ್ಲಿ ಆರು ವಿಶ್ವವಿದ್ಯಾಲಯಗಳನ್ನು ಸ್ಥಾಪಿಸಲಾಗಿದೆ. ಸದ್ಯದಲ್ಲೇ ಇನ್ನೂ ಏಳು ವಿಶ್ವವಿದ್ಯಾಲಯಗಳು ಅಸ್ತಿತ್ವಕ್ಕೆ ಬರಲಿವೆ. ಒಟ್ಟಿನಲ್ಲಿ ಒಂದು ಜಿಲ್ಲೆಗೆ ಒಂದು ವಿಶ್ವವಿದ್ಯಾಲಯವಾದರೂ ಇರುವಂತೆ ಮುಂದಡಿ ಇಡಲಾಗುವುದು' ಎಂದೂ ಅವರು ಹೇಳಿದರು.

'ಅಪರಾಧಿಗಳಿಗೆ ಯಾರೂ ರಕ್ಷಣೆ ನೀಡಬಾರದು'

ಬೆಂಗಳೂರು: 'ನಾವು ಅಪರಾಧಿಗಳ ವಿರುದ್ಧ ಇದ್ದೇವೆ. ಅಪರಾಧ ಮತ್ತು ಅಪರಾಧಿಗಳಿಗೆ ಯಾರೂ ರಕ್ಷಣೆ ನೀಡಬಾರದು' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ನೃಪತುಂಗ ವಿಶ್ವವಿದ್ಯಾಲಯ ಉದ್ಘಾಟನಾ ಸಮಾರಂಭದಲ್ಲಿ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ರಾಜ್ಯ ಪೊಲೀಸ್ ಇಲಾಖೆಯ ಇ-ಬೀಟ್ (ಸ್ಮಾರ್ಟ್ ಪೊಲೀಸಿಂಗ್) ವ್ಯವಸ್ಥೆ ಮತ್ತು ಬಳ್ಳಾರಿಯ ಪ್ರಾದೇಶಿಕ ವಿಧಿವಿಜ್ಞಾನ ಪ್ರಯೋಗಾಲಯ ಉದ್ಘಾಟಿಸಿದರು. ಈ ವೇಳೆ ಬೊಮ್ಮಾಯಿ ಮಾತನಾಡಿದರು.

'ಕೇಂದ್ರ ಗೃಹ ಸಚಿವರು ನಿರ್ಭಯಾ ಯೋಜನೆಯಡಿ ₹ 750 ಕೋಟಿ ಕರ್ನಾಟಕಕ್ಕೆ ಒದಗಿಸಿದ್ದಾರೆ. ಬೆಂಗಳೂರಿನಲ್ಲಿ 7,000ಕ್ಕಿಂತ ಹೆಚ್ಚು ಸಿಸಿಟಿವಿ ಕ್ಯಾಮೆರಾಗಳನ್ನು ಅಳವಡಿಸಲಾಗಿದೆ. ಗೃಹ ಇಲಾಖೆ ವತಿಯಿಂದ ಎಲ್ಲ ವಿಭಾಗಗಳಲ್ಲಿ ಎಫ್‌ಎಸ್‌ಎಲ್ ಪ್ರಯೋಗಾಲಯಗಳನ್ನು ತೆರೆಯಲಾಗಿದೆ. ಅಪರಾಧಗಳನ್ನು ತಡೆಯಲು ಹಾಗೂ ಅಪರಾಧಿಗಳನ್ನು ಪತ್ತೆ ಹಚ್ಚಲು ಇದರಿಂದ ನೆರವಾಗಲಿದೆ' ಎಂದು ಅವರು ತಿಳಿಸಿದರು.

ಗೃಹ ಸಚಿವ ಆರಗ ಜ್ಞಾನೇಂದ್ರ ಮಾತನಾಡಿ, 'ಗುಜರಾತಿನಲ್ಲಿರುವ ವಿಧಿವಿಜ್ಞಾನ ವಿಶ್ವವಿದ್ಯಾಲಯದ ಒಂದು ಕ್ಯಾಂಪಸ್ ರಾಜ್ಯದಲ್ಲಿ ತೆರೆಯಬೇಕು. ಈ ಉದ್ದೇಶಕ್ಕೆ 50 ಎಕರೆ ಜಾಗ ಮೀಸಲಿಡಲಾಗಿದೆ ಎಂದು ಕೇಂದ್ರಕ್ಕೆ ಮನವಿ ಸಲ್ಲಿಸಲಾಗಿದೆ. ಇದಕ್ಕೆ ಶಾ ಅವರು ಭಾಗಶಃ ಒಪ್ಪಿಗೆ ಸೂಚಿಸಿದ್ದಾರೆ' ಎಂದು ಅವರು ಹೇಳಿದರು.

ಕೇಂದ್ರ ಸಚಿವ ಪ್ರಲ್ಹಾದ ಜೋಷಿ, ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥ ನಾರಾಯಣ, ಸಂಸದ ಪಿ.ಸಿ. ಮೋಹನ್, ಡಿಜಿಪಿ ಪ್ರವೀಣ ಸೂದ್ ಇದ್ದರು.



ಖೇಲೊ ಇಂಡಿಯಾ ವಿಶ್ವವಿದ್ಯಾಲಯಗಳ ಕ್ರೀಡಾಕೂಟದ ಸಮಗ್ರ ಚಾಂಪಿಯನ್ ಪಟ್ಟ ಗಳಿಸಿದ ಜೈನ್ ವಿವಿಗೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಟ್ರೋಫಿ ವಿತರಿಸಿದರು.

ದಿನವಿಡೀ ಗೃಹ ಸಚಿವರ ಸುತ್ತಾಟ: ಹೋಳಿಗೆ ಊಟ

ರಾಜಧಾನಿಯಲ್ಲಿ ಅಮಿತ್ ಶಾ ಸಂಚಲನ

ಬೆಂಗಳೂರು: ಮಂಗಳವಾರ ಬೆಳಿಗ್ಗೆಯಿಂದ ರಾತ್ರಿಯವರೆಗೂ ನಗರದಲ್ಲಿ ಎಡೆಬಿಡದೆ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡ ಕೇಂದ್ರ ಗೃಹ ಸಚಿವ ಅಮಿತ್ ಶಾ, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿಯವರ ಅಧಿಕೃತ ನಿವಾಸದಲ್ಲಿ ಮಧ್ಯಾಹ್ನ ಹೋಳಿಗೆ ಊಟ ಸವಿದರು.

ಬೆಳಿಗ್ಗೆಯೇ ಬಸವೇಶ್ವರ ವೃತ್ತದಲ್ಲಿ ನಡೆದ ಬಸವ ಜಯಂತಿಯಲ್ಲಿ ಪಾಲ್ಗೊಂಡರು. ಅಲ್ಲಿಂದ ನೃಪತುಂಗ ರಸ್ತೆಯಲ್ಲಿರುವ ನೃಪತುಂಗ ವಿಶ್ವವಿದ್ಯಾಲಯದ ಆವರಣದಲ್ಲಿ ನಡೆದ ಸಮಾರಂಭದಲ್ಲಿ ಭಾಗವಹಿಸಿ, ವಿಶ್ವವಿದ್ಯಾಲಯವನ್ನು ಉದ್ಘಾಟಿಸಿದರು. ಬಳ್ಳಾರಿಯಲ್ಲಿ ನೂತನವಾಗಿ ಸ್ಥಾಪಿಸಿರುವ ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ ಅಲ್ಲಿಂದಲೇ ಚಾಲನೆ ನೀಡಿದರು. ಬೆಂಗಳೂರು ನಗರ ಜಿಲ್ಲೆಯ ಸಾತನೂರು ಗ್ರಾಮಕ್ಕೆ ಭೇಟಿನೀಡಿದ ಅಮಿತ್ ಶಾ, ಅಲ್ಲಿ ನಿರ್ಮಿಸಿರುವ ವಿಕೋಪ ನಿರ್ವಹಣೆಗೆ ಸಂಬಂಧಿಸಿದ 'ನ್ಯಾಟ್ ಗ್ರಿಡ್ ಡಿಸಾಸ್ಟರ್ ರಿಕವರಿ ಸೆಂಟರ್' ಉದ್ಘಾಟಿಸಿದರು.



ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಮಂಗಳವಾರ ಮಧ್ಯಾಹ್ನ ಮುಖ್ಯಮಂತ್ರಿಯವರ ಅಧಿಕೃತ ನಿವಾಸದಲ್ಲಿ ಭೋಜನ ಸವಿದರು. ಕೇಂದ್ರ ಸಚಿವ ಪ್ರಲ್ಹಾದ ಜೋಶಿ, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹಾಗೂ ಬಿಜೆಪಿ ಶಾಸಕ ಬಿ.ಎಸ್. ಯಡಿಯೂರಪ್ಪ ಇದ್ದರು

ಸಿಎಂ ಔತಣಕೂಟ

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮಂಗಳವಾರ ಮಧ್ಯಾಹ್ನ ಆಯೋಜಿಸಿದ್ದ ಭೋಜನ ಕೂಟದಲ್ಲಿ ಅಮಿತ್ ಶಾ ಭಾಗವಹಿಸಿದ್ದರು.

ಬಸವ ಜಯಂತಿ ಮತ್ತು ಅಕ್ಷಯ ತೃತೀಯ ಪ್ರಯುಕ್ತ ಹೋಳಿಗೆ ಊಟ ಏರ್ಪಡಿಸಲಾಗಿತ್ತು. ಶಾ ಅವರ ಜತೆ ಮುಖ್ಯಮಂತ್ರಿ ಬೊಮ್ಮಾಯಿ, ಕೇಂದ್ರ ಸಚಿವ ಪ್ರಲ್ಹಾದ ಜೋಶಿ, ಶಾಸಕ ಬಿ.ಎಸ್.ಯಡಿಯೂರಪ್ಪ ಮತ್ತು ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಅವರು ಒಟ್ಟಿಗೆ ಕುಳಿತು ಮಾತನಾಡುತ್ತಾ ಬೆಳ್ಳಿ ತಟ್ಟೆಯಲ್ಲಿ ಭೋಜನ ಸೇವಿಸಿದರು.

ಭೋಜನ ಕೂಟಕ್ಕೆ ಎಲ್ಲ ಶಾಸಕರು ಮತ್ತು ಸಂಸದರಿಗೂ ಆಹ್ವಾನ ನೀಡಿದ್ದರೂ ಬೆಂಗಳೂರಿನಲ್ಲಿ ಇದ್ದವರು ಮಾತ್ರ ಹಾಜರಿದ್ದರು.

ಭೋಜನದ ಬಳಿಕ ಬಿಜೆಪಿ ಕಚೇರಿಯಲ್ಲಿ ನಡೆಯಬೇಕಿದ್ದ ಪಕ್ಷದ ಪದಾಧಿಕಾರಿಗಳ ಸಭೆಯನ್ನು ರದ್ದುಗೊಳಿಸಿ ಶಾ ಅವರು ಜಿಂದಾಲ್‌ಗೆ ತೆರಳಿದರು. ಜಿಂದಾಲ್ ಸಂಸ್ಥೆಯ ಮುಖ್ಯಸ್ಥ ಡಾ.ಸೀತಾರಾಂ ಅವರ ಆರೋಗ್ಯ ವಿಚಾರಿಸಿದರು. ಅಲ್ಲಿಂದ ಹಿಂದಿರುಗಿ ಕಂಠೀರವ ಕ್ರೀಡಾಂಗಣದಲ್ಲಿ ನಡೆದ ಖೇಲೋ ಇಂಡಿಯಾ ಕ್ರೀಡಾಕೂಟದ ಸಮಾರೋಪ ಸಮಾರಂಭದಲ್ಲಿ ಭಾಗವಹಿಸಿದರು.

ಒಲಿಂಪಿಕ್ಸ್‌ನಲ್ಲಿ ಭಾರತಕ್ಕೆ ಅಗ್ರ ಐದರಲ್ಲಿ ಸ್ಥಾನದ ಗುರಿ: ಅಮಿತ್ ಶಾ



ಕೇಂದ್ರ ಗೃಹ ಮತ್ತು ಸಹಕಾರ ಸಚಿವ ಅಮಿತ್ ಶಾ ಅವರನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸನ್ಮಾನಿಸಿದರು

ಬೆಂಗಳೂರು: ಭಾರತವು ಬಲಿಷ್ಠ ಕ್ರೀಡಾರಾಷ್ಟ್ರವಾಗಿ ಬೆಳೆಯುತ್ತಿದ್ದು 2047ರ ವೇಳೆಗೆ ಒಲಿಂಪಿಕ್ಸ್‌ನ ಪದಕ ಪಟ್ಟಿಯಲ್ಲಿ ದೇಶಕ್ಕೆ ಅಗ್ರ ಐದರಲ್ಲಿ ಸ್ಥಾನ ದೊರಿಕಿಸಿಕೊಡುವ ಪ್ರಯತ್ನ ನಡೆಯುತ್ತಿದೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಹೇಳಿದರು.

ನಗರದಲ್ಲಿ ನಡೆದ ಖೇಲೊ ಇಂಡಿಯಾ ವಿಶ್ವವಿದ್ಯಾಲಯಗಳ ಕ್ರೀಡಾಕೂಟದ ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಅವರು ಖೇಲೊ ಇಂಡಿಯಾ, ಫಿಟ್ ಇಂಡಿಯಾ ಮುಂತಾದ ಯೋಜನೆಗಳಿಂದ ರಾಷ್ಟ್ರದ ಕ್ರೀಡಾಶಕ್ತಿ ಹೆಚ್ಚುತ್ತಿದೆ. ಸ್ವಾತಂತ್ರ್ಯದ ಶತಮಾನೋತ್ಸವದ ಸಂದರ್ಭದಲ್ಲಿ ದೇಶವನ್ನು ಇನ್ನಷ್ಟು ಬಲಿಷ್ಠಗೊಳಿಸಲಾಗುವುದು ಎಂದರು.

'ದೇಶದಲ್ಲಿ ಕ್ರೀಡಾ ಸೌಲಭ್ಯಗಳನ್ನು ಹೆಚ್ಚಿಸಲಾಗುತ್ತಿದೆ. ಕ್ರೀಡಾ ವಿಜ್ಞಾನ ಕೇಂದ್ರಗಳನ್ನು ಸ್ಥಾಪಿಸಲಾಗುತ್ತಿದೆ. ಸಾಮೂಹಿಕ ತರಬೇತಿ ಸೌಲಭ್ಯಗಳು ಹೆಚ್ಚುತ್ತಿವೆ. ವಾರ್ಷಿಕ ಕ್ರೀಡಾಕೂಟಗಳ ಆಯೋಜನೆ ಮತ್ತು ಅಂತರರಾಷ್ಟ್ರೀಯ ಮಟ್ಟದ ಕೋಚ್‌ಗಳನ್ನು ತಯಾರು ಮಾಡುವುದಕ್ಕೆ ಆದ್ಯತೆ ನೀಡಲಾಗುತ್ತಿದೆ' ಎಂದು ಅಮಿತ್ ಶಾ ವಿವರಿಸಿದರು.

'ಖೇಲೊ ಇಂಡಿಯಾ ವಾರ್ಸಿಟಿ ಕ್ರೀಡಾಕೂಟವನ್ನು ಯಶಸ್ವಿಯಾಗಿ ಆಯೋಜಿಸಿದ ಜೈನ್ ವಿವಿ ಆವರಣದಲ್ಲಿ ಎರಡು ಸಾವಿರ ಕ್ರೀಡಾಪಟುಗಳಿಗೆ ವಸತಿಸಹಿತ ತರಬೇತಿ ನೀಡಲು ವ್ಯವಸ್ಥೆ ಮಾಡಲಾಗುವುದು, 300 ಕೋಚ್‌ಗಳಿಗೂ ಅಲ್ಲಿ ಅವಕಾಶ ಸಿಗಲಿದೆ' ಎಂದರು.

'ದೇಶದಲ್ಲಿ ಈ ಹಿಂದೆ ಕ್ರಿಕೆಟ್ ಹೊರತುಪಡಿಸಿ ಬೇರೆ ಕ್ರೀಡೆಗಳಿಗೆ ಆದ್ಯತೆ ಸಿಗುತ್ತಿರಲಿಲ್ಲ. ಈಗ ಪರಿಸ್ಥಿತಿ ಬದಲಾಗಿದೆ. ಈಚಿನ ಕೆಲವು ವರ್ಷಗಳಿಂದ ದೇಶದಲ್ಲಿ ಕ್ರೀಡಾ ಸಂಸ್ಕೃತಿ ಬದಲಾಗಿದೆ. ಹೀಗಾಗಿ ಕಳೆದ ಒಲಿಂಪಿಕ್ಸ್‌ನಲ್ಲಿ ಮತ್ತು ಪ್ಯಾರಾಲಿಂಪಿಕ್ಸ್‌ನಲ್ಲಿ ಭಾರತ ಹೆಚ್ಚು ಪದಕಗಳನ್ನು ಗೆದ್ದುಕೊಂಡಿದೆ' ಎಂದರು.

'ಖೇಲೊ ಇಂಡಿಯಾ ವಾರ್ಸಿಟಿ ಕ್ರೀಡಾಕೂಟದ ಎರಡನೇ ಆವೃತ್ತಿಯ ಸ್ಪರ್ಧೆಗಳು ಕಳೆದ ವರ್ಷ ನಡೆಯಬೇಕಾಗಿತ್ತು. ಆದರೆ ಕೋವಿಡ್–19ರಿಂದಾಗಿ ಈ ವರ್ಷಕ್ಕೆ ಮುಂದೂಡಲಾಯಿತು. 2020ರಲ್ಲಿ ಒಡಿಶಾದಲ್ಲಿ ನಡೆದ ಕೂಟದಲ್ಲಿ 138 ವಿಶ್ವವಿದ್ಯಾಲಯಗಳಿಂದ 3100 ಕ್ರೀಡಾಪಟುಗಳು ಪಾಲ್ಗೊಂಡಿದ್ದರು. ಈ ಬಾರಿ 208 ವಿವಿಗಳಿಂದ 3900 ಮಂದಿ ಭಾಗವಹಿಸಿದ್ದಾರೆ. ಇದು, ಕ್ರೀಡಾಕೂಟದ ಯಶಸ್ಸು ಮತ್ತು ಜನಪ್ರಿಯತೆಯನ್ನು ಸೂಚಿಸುತ್ತದೆ' ಎಂದು ಅವರು ಅಭಿಪ್ರಾಯಪಟ್ಟರು.

ಸೋಲು-ಗೆಲುವು ಕ್ರೀಡೆಯ ಭಾಗ. ಆದರೆ ಕ್ರೀಡೆಯಲ್ಲಿ ತೊಡಗಿಸಿಕೊಂಡವರು ಜೀವನದಲ್ಲಿ ಎಂದಿಗೂ ಸೋಲುವುದಿಲ್ಲ. ಆಟವಾಡಲು ಗೊತ್ತಿರುವವನಿಗೆ ಜೀವನದಲ್ಲಿ ಸಾಧನೆ ಮಾಡುವುದಕ್ಕೂ ಗೊತ್ತಿರುತ್ತದೆ' ಎಂದು ಅವರು ಹೇಳಿದರು.



ಬಸವೇಶ್ವರ ಪುತ್ಥಳಿಗೆ ಶಾ ನಮನ

ಬೆಂಗಳೂರು: ಬಸವ ಜಯಂತಿಯ ದಿನವಾದ ಮಂಗಳವಾರ ಬೆಂಗಳೂರಿನಲ್ಲಿದ್ದ ಕೇಂದ್ರ ಗೃಹ ಸಚಿವ ಅಮಿತ್ ಶಾ, ನಗರದ ಬಸವೇಶ್ವರ ವೃತ್ತದಲ್ಲಿರುವ ಬಸವೇಶ್ವರ ಪ್ರತಿಮೆ ಬಳಿ ನಡೆದ ಕಾರ್ಯಕ್ರಮದಲ್ಲಿ ಭಾಗಿಯಾದರು. ಜಗಜ್ಯೋತಿ ಬಸವೇಶ್ವರರ ಪುತ್ಥಳಿಗೆ ಪುಷ್ಪನಮನ ಸಲ್ಲಿಸಿದರು.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಕೇಂದ್ರ ಸಚಿವ ಪ್ರಲ್ಹಾದ ಜೋಶಿ, ಬಿಜೆಪಿ ರಾಜ್ಯ ಉಸ್ತುವಾರಿ ಅರುಣ್ ಸಿಂಗ್, ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್, ಸಚಿವರಾದ ಆರಗ ಜ್ಞಾನೇಂದ್ರ, ಮುರುಗೇಶ ನಿರಾಣಿ, ವಿ. ಸುನಿಲ್ ಕುಮಾರ್, ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ. ರವಿ, ಶಾಸಕ ಅರವಿಂದ ಬೆಲ್ಲದ ಸೇರಿದಂತೆ ಹಲವರು ಅಮಿತ್ ಶಾ ಅವರೊಂದಿಗೆ ಇದ್ದರು.

ಬಸವ ಜಯಂತಿಯಲ್ಲಿ ಪಾಲ್ಗೊಂಡ ಅಮಿತ್ ಶಾ ಅವರಿಗೆ ಬಸವೇಶ್ವರರ ಪುತ್ಥಳಿಯನ್ನು ನೆನಪಿನ ಕಾಣಿಕೆಯನ್ನಾಗಿ ನೀಡಿ ಗೌರವಿಸಲಾಯಿತು.

ಸುಭಾಷಿತ

ದೇವಲೋಕ, ಮರ್ತ್ಯಲೋಕವೆಂಬುದು ಬೇರಿಲ್ಲ ಕಾಣಿರೋ! ಸತ್ಯವ ನುಡಿವುದೇ ದೇವಲೋಕ, ಮಿಥ್ಯವ ನುಡಿವುದೇ ಮರ್ತ್ಯಲೋಕ.

-ಬಸವಣ್ಣ

ದ್ವೇಷ ಭಾಷಣಗಳಿಗೆ 'ಸುಪ್ರೀಂ' ಚಾಟಿ ದಾಳವಾಗುತ್ತಿರುವ ಧಾರ್ಮಿಕ ಮುಖಂಡರು

ದೇಶದ ಧಾರ್ಮಿಕ ಅಲ್ಪಸಂಖ್ಯಾತ ಸಮುದಾಯದವರನ್ನು ಉದ್ದೇಶಿಸಿ ಕೆಲವರು ಮಾಡುತ್ತಿರುವ ದ್ವೇಷದ ಭಾಷಣಗಳನ್ನು ಸುಪ್ರೀಂ ಕೋರ್ಟ್ ತೀಕ್ಷ್ಣವಾಗಿ ಖಂಡಿಸಿದೆ. ದ್ವೇಷದ ಭಾಷಣಗಳು ಮತ್ತೆ ಮತ್ತೆ ಕೇಳಲಾರಂಭಿಸಿವೆ, ತೀರಾ ಒರಟು ಮಾತುಗಳನ್ನು ಕೆಲವರು ಆಡುತ್ತಿದ್ದಾರೆ. 'ಧಾರ್ಮಿಕ' ಎಂದು ಕರೆಸಿಕೊಂಡ ವೇದಿಕೆಗಳಿಂದ ವಿಷಕಾರಿ ಮಾತುಗಳನ್ನು ಆಡುವುದನ್ನು ತಡೆಯಲು ಕ್ರಮ ಕೈಗೊಳ್ಳಬೇಕು ಎಂದು ಕೋರ್ಟ್ ಹೇಳಿದೆ. ಧಾರ್ಮಿಕ ಕಾರ್ಯಕ್ರಮಗಳಲ್ಲಿ ದ್ವೇಷ ಭಾಷಣ ನಿಯಂತ್ರಿಸಲು ಯಾವ ಕ್ರಮ ಕೈಗೊಳ್ಳಲಾಗಿದೆ ಎಂಬುದನ್ನು ತಿಳಿಸುವಂತೆ ಉತ್ತರಾಖಂಡ ಹಾಗೂ ಹಿಮಾಚಲ ಪ್ರದೇಶ ಸರ್ಕಾರಗಳಿಗೆ ಹೇಳಿದೆ. ಕೋರ್ಟ್ ಮಧ್ಯಪ್ರವೇಶವು ಒಂದಿಷ್ಟು ಪರಿಣಾಮ ಉಂಟುಮಾಡಿರುವುದು ಕಾಣಿಸುತ್ತಿದೆ. ಕೋರ್ಟ್ ಸೂಚನೆಯ ನಂತರದಲ್ಲಿ, ಉತ್ತರಾಖಂಡದ ರೂರ್ಕಿ ಎಂಬಲ್ಲಿ ಧರ್ಮ ಸಂಸತ್ ಆಯೋಜನೆಗೆ ಅಲ್ಲಿನ ಆಡಳಿತವು ಅವಕಾಶ ಕೊಟ್ಟಿಲ್ಲ. ನ್ಯಾಯಾಲಯವು ಈ ಎರಡು ರಾಜ್ಯಗಳ ಸರ್ಕಾರಗಳಿಗೆ ಸರಿಯಾಗಿಯೇ ಬಿಸಿ ಮುಟ್ಟಿಸಿದೆ. ದ್ವೇಷದ ಭಾಷಣ ತಡೆಯಲು ಮುಂಚಿತವಾಗಿಯೇ ಏಕೆ ಕ್ರಮ ಕೈಗೊಳ್ಳಲಿಲ್ಲ ಹಾಗೂ ಅಂತಹ ಭಾಷಣ ಮಾಡಿದವರ ವಿರುದ್ಧ ಕ್ರಮ ಏಕೆ ಕೈಗೊಂಡಿಲ್ಲ ಎಂದು ಕೋರ್ಟ್ ಪ್ರಶ್ನಿಸಿದೆ. ಇಂತಹ ಪ್ರಕರಣಗಳಲ್ಲಿ ರಾಜ್ಯ ಸರ್ಕಾರಗಳು ಕ್ರಮ ಕೈಗೊಳ್ಳಲೇಬೇಕು ಎಂದು ಕೂಡ ಕೋರ್ಟ್ ಸ್ಪಷ್ಟಪಡಿಸಿದೆ.



ಧರ್ಮದ ಆಧಾರದಲ್ಲಿ ಮಾಡುವ ರಾಜಕಾರಣವು ಯಾರಿಗೂ ಒಳಿತು ಮಾಡುವುದಿಲ್ಲ

ಡಿಸೆಂಬರ್‌ನಲ್ಲಿ ಹರಿದ್ವಾರದಲ್ಲಿ ನಡೆದ ಧಾರ್ಮಿಕ ಕಾರ್ಯಕ್ರಮವೊಂದರಲ್ಲಿ ಗಾಜಿಯಾಬಾದ್‌ನ ದೇವಸ್ಥಾನವೊಂದರ ಮುಖ್ಯ ಅರ್ಚಕ ನರಸಿಂಹಾನಂದ ಸರಸ್ವತಿ ಅವರು ಮುಸ್ಲಿಮರ ಹತ್ಯೆಗೆ ಕರೆ ನೀಡಿದ್ದರು. ಪೊಲೀಸರು ಬಹಳಷ್ಟು ಹಿಂದೆ-ಮುಂದೆ ನೋಡಿ ನಂತರ ನರಸಿಂಹಾನಂದ ಅವರನ್ನು ಬಂಧಿಸಿದರು. ಆದರೆ, ಜಾಮೀನು ಪಡೆದು ಹೊರಬಂದ ನಂತರವೂ ನರಸಿಂಹಾನಂದ ಅವರು ಉದ್ರೇಕಕಾರಿ ಭಾಷಣ ಮಾಡುತ್ತಿದ್ದಾರೆ. ಈ ರೀತಿ ಪ್ರಚೋದನಕಾರಿಯಾಗಿ ಭಾಷಣ ಮಾಡುತ್ತಿರುವವರು ಹಲವರಿದ್ದಾರೆ. ಹಿಂದೂ ಧರ್ಮವು ಅಪಾಯದಲ್ಲಿದೆ, ಧರ್ಮವನ್ನು ರಕ್ಷಿಸಲು ಶಸ್ತ್ರಾಸ್ತ್ರ ಕೈಗೆತ್ತಿಕೊಳ್ಳಬೇಕು ಎಂದು ಕರೆ ನೀಡುತ್ತಿದ್ದಾರೆ. ಬಹುಸಂಖ್ಯಾತರಲ್ಲಿ ತಾವು ಬಲಿಪಶುಗಳಾಗಿದ್ದೇವೆ ಎಂಬ ಭಾವನೆ ಮೂಡಿಸುವ, ಎಲ್ಲರನ್ನೂ ಸಮಾನವಾಗಿ ಕಾಣುವ ಸಂವಿಧಾನವನ್ನು ಪರೋಕ್ಷವಾಗಿ ಹಾಗೂ ನೇರವಾಗಿ ದೂಷಿಸುವ ಕೆಲಸ ಆಗುತ್ತಿದೆ. ದ್ವೇಷ ಹರಡುತ್ತಿರುವ ವ್ಯಕ್ತಿಗಳ ವಿರುದ್ಧ ಕ್ರಮ ಜರುಗಿಸಲು ಪೊಲೀಸರು ಮುಂದಾಗುತ್ತಿಲ್ಲ. ಡಿಸೆಂಬರ್‌ನಲ್ಲಿ ನಡೆದ ಕಾರ್ಯಕ್ರಮವೊಂದರಲ್ಲಿ 'ಯಾವುದೇ ಸಮುದಾಯದ ವಿರುದ್ಧ ನಿರ್ದಿಷ್ಟವಾಗಿ ಯಾವುದೇ ಮಾತು ಆಡಿಲ್ಲ' ಎಂದು ದೆಹಲಿ ಪೊಲೀಸರು ಈಚೆಗೆ ಸುಪ್ರೀಂ ಕೋರ್ಟ್‌ಗೆ ಹೇಳಿದ್ದರು. ಆದರೆ ಆ ಕಾರ್ಯಕ್ರಮದಲ್ಲಿ ಆಡಿದ ಬಹುತೇಕ ಮಾತುಗಳು ಮುಸ್ಲಿಮರನ್ನು ಗುರಿಯಾಗಿಸಿಕೊಂಡಿದ್ದವು ಎಂಬುದು ಸ್ಪಷ್ಟ. ಹೆಚ್ಚು ಸಮರ್ಪಕವಾಗಿರುವ ಪ್ರಮಾಣಪತ್ರ ಸಲ್ಲಿಸುವಂತೆ ಪೊಲೀಸರಿಗೆ ನ್ಯಾಯಾಲಯವೇ ಹೇಳಬೇಕಾಯಿತು.

ಕೋಮು ಪ್ರಚೋದನಕಾರಿ ಭಾಷಣಗಳನ್ನು ಧಾರ್ಮಿಕ ವೇದಿಕೆಗಳಿಂದ ಮಾತ್ರವೇ ಮಾಡುತ್ತಿಲ್ಲ. ಧರ್ಮವು ಅಪಾಯದಲ್ಲಿ ಇದೆ ಎಂಬ ಮಾತುಗಳನ್ನು ಶುದ್ಧ ಧಾರ್ಮಿಕ ಮನಸ್ಸಿನ ವ್ಯಕ್ತಿಗಳು ಹೇಳುತ್ತಿಲ್ಲ. ಧರ್ಮ ಆಧಾರಿತ ರಾಜಕಾರಣದಲ್ಲಿ ತೊಡಗಿರುವವರು ಇಂತಹ ಮಾತುಗಳನ್ನು ಹೇಳುತ್ತಿದ್ದಾರೆ. ಕೆಲವು ಧಾರ್ಮಿಕ ನಾಯಕರು ರಾಜಕೀಯ ನಾಯಕರಿಂದ ಒಂದಿಷ್ಟು ಪ್ರೇರಣೆ ಪಡೆದಿದ್ದಾರೆ. ಧಾರ್ಮಿಕ ಅಲ್ಪ-ಸಂಖ್ಯಾತರ ಬಗ್ಗೆ ದ್ವೇಷ ಮೂಡಿಸುವುದು ಕೂಡ ಒಂದು ರಾಜಕೀಯ ಉದ್ದೇಶ ಹೊಂದಿದೆ. ಧಾರ್ಮಿಕ ವೇದಿಕೆಗಳಿಂದ ನಡೆಯುವ ದ್ವೇಷ ಭಾಷಣಗಳಿಗೆ ಬರುವ ರಾಜಕೀಯ ಪ್ರತಿಕ್ರಿಯೆಗಳು ಇದನ್ನು ಸ್ಪಷ್ಟಪಡಿಸುತ್ತವೆ. ನೂರಕ್ಕೂ ಹೆಚ್ಚು ಮಂದಿ ನಿವೃತ್ತ ಅಧಿಕಾರಿಗಳು ಮತ್ತು ಮಾಜಿ ರಾಯಭಾರಿಗಳು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಬರೆದ ಪತ್ರದಲ್ಲಿ ಇದನ್ನು ಉಲ್ಲೇಖಿಸಲಾಗಿದೆ. ದ್ವೇಷ ಭಾಷಣದ ವಿಚಾರದಲ್ಲಿ ಪ್ರಧಾನಿಯವರ ಮೌನವು ಸರಿಯಲ್ಲ ಎಂದೂ ಅವರು ಹೇಳಿದ್ದಾರೆ. ಧರ್ಮದ ಆಧಾರದಲ್ಲಿ ಮಾಡುವ ರಾಜಕಾರಣವು ಯಾರಿಗೂ ಒಳಿತು ಮಾಡುವುದಿಲ್ಲ. ಬಹುಸಂಖ್ಯಾತರನ್ನು ರಕ್ಷಿಸುತ್ತೇವೆ ಎಂದು ಹೇಳಿಕೊಳ್ಳುತ್ತ, ಅಲ್ಪಸಂಖ್ಯಾತರನ್ನು ಕೆಟ್ಟದ್ದಾಗಿ ಚಿತ್ರಿಸುವ ರಾಜಕಾರಣದಿಂದ ಬಹುಸಂಖ್ಯಾತ ಸಮುದಾಯದವರಿಗೆ ವಾಸ್ತವದಲ್ಲಿ ಯಾವ ಪ್ರಯೋಜನವೂ ಆಗುವುದಿಲ್ಲ. ಇಂತಹ ರಾಜಕಾರಣವು ಸಮಾಜವನ್ನು ಇನ್ನಷ್ಟು ಒಡೆಯುತ್ತದೆಯೇ ವಿನಾ, ಸಮಾಜದ ಅಗತ್ಯಗಳನ್ನು ಈಡೇರಿಸುವುದಿಲ್ಲ. ಹೇಳಿಕೊಳ್ಳಲು ಯಾವ ಸಾಧನೆಯೂ ಇಲ್ಲದ ರಾಜಕಾರಣಿಗಳು ಜಾತಿ, ಧರ್ಮದ ಹೆಸರಿನಲ್ಲಿ ದ್ವೇಷ ಹುಟ್ಟಿಸುವ ಕೆಲಸ ಮಾಡುತ್ತಾರೆ. ಕೆಲವು ಧಾರ್ಮಿಕ ವ್ಯಕ್ತಿಗಳು ಇಂತಹ ರಾಜಕಾರಣಿಗಳ ಕೈಯಲ್ಲಿ ದಾಳವಾಗುತ್ತಿದ್ದಾರೆ. ಇದು ಪ್ರಸ್ತುತ ಕಾಲಘಟ್ಟದ ಅತ್ಯಂತ ವಿಷಾದಕರ ವಿದ್ಯಮಾನ.

ದಿನದ ಟ್ವೀಟ್

ಸದುದ್ದೇಶ ಇರದವರು...



ಲಂಚ ಕೊಟ್ಟು ಸರ್ಕಾರಿ ನೌಕರಿ ಪಡೆಯಲೇಬೇಕೆಂಬ ಹಟ ಯಾರಿಗಿರುತ್ತದೆ? ಅಕ್ರಮ ಹಣ ಮಾಡುವ ಉದ್ದೇಶ ಇರುವವರು, ಕೆಲಸ ಮಾಡದೆ ಓತ್ಲಾ ಹೊಡೆಯುವವರು, ಕೊನೆತನಕ ಯಾವುದೇ ತೊಂದರೆ ಇಲ್ಲದೆ ಜೀವನ ಕಳೆಯುವ ಆಲೋಚನೆ ಇರುವವರು. ಇವರಲ್ಲಿ ಯಾರಿಗೂ ದೇಶ ಅಥವಾ ನಾಗರಿಕರ ಸೇವೆ ಮಾಡುವ ಸದುದ್ದೇಶ ಇರುವುದಿಲ್ಲ. ದುಡ್ಡು ಕೊಟ್ಟು ಸೇರಿ ಮರು ದುಡ್ಡು ಮಾಡದೇ ಇರುವರೆ?

ರೋಹಿತ್ ಸಿಂಹ, ಎಂಜಿನಿಯರ್

ಕಿಡಿನುಡಿ



ದೇಶದಲ್ಲಿನ ಜನ- ಯಾವುದೇ ಸಿದ್ಧಾಂತದ ಬೆಂಬಲಿಗರಾಗಿರಲಿ- ರಾಜಕಾರಣಿಗಳ ವೈಯಕ್ತಿಕ ಜೀವನದ ಬಗ್ಗೆ ಹೆಚ್ಚು ತಲೆಕೆಡಿಸಿಕೊಳ್ಳುವುದೇಕೆ? ಅವರೂ ನಮ್ಮಂತೆಯೇ ಮನುಷ್ಯರು ಮತ್ತು ತಮ್ಮ ಸ್ನೇಹಿತರೊಂದಿಗೆ ಹೊರಗೆ ಮೋಜು ಮಾಡುವ ಎಲ್ಲ ಹಕ್ಕುಗಳನ್ನೂ ಹೊಂದಿರುತ್ತಾರೆ ಎಂಬುದನ್ನು ನಾವು ಮರೆಯಬಾರದು. ಅವರೇನೂ ವಿರಕ್ತರಲ್ಲ.

ರಾಮಚಂದ್ರ ಎಂ., ನಾಗರಿಕ

25 ವರ್ಷಗಳ ಹಿಂದೆ

ಭಾನುವಾರ, 4-5-1997

• **ವ್ಯಾಪಕ ಹಿಂಸಾಚಾರ ಕಂಡ ಬಿಹಾರ ಬಂದ್: ಗಾಳಿಯಲ್ಲಿ ಗುಂಡು**

ಪಟ್ನಾ, ಮೇ 3 (ಪಿಟಿಐ, ಯುಎನ್ಐ)- ಮೇವು ಹಗರಣದಲ್ಲಿ ಬಿಹಾರದ ಮುಖ್ಯಮಂತ್ರಿ ಲಾಲೂ ಪ್ರಸಾದ್ ಯಾದವ್ ಅವರನ್ನು ವಿಚಾರಣೆಗೆ ಗುರಿಪಡಿಸುವ ಸಿಬಿಐ ನಿರ್ಧಾರದ ಹಿನ್ನೆಲೆಯಲ್ಲಿ ಅವರ ರಾಜೀನಾಮೆಗೆ ಆಗ್ರಹಿಸಿ ಬಿಜೆಪಿ- ಸಮತಾ ಪಕ್ಷ ಕರೆ ನೀಡಿದ್ದ ಬಂದ್ ದಿನವಾದ ಇಂದು ಕೆಲವೆಡೆ ಹಿಂಸಾಚಾರ, ಗುಂಪು ಘರ್ಷಣೆ, ಲಾಠಿ ಪ್ರಹಾರ ನಡೆದಿದೆ.

ರಾಜ್ಯದಾದ್ಯಂತ ನಡೆದ ವ್ಯಾಪಕ ಹಿಂಸಾಚಾರದಲ್ಲಿ ಕನಿಷ್ಠ 155 ಮಂದಿ ಗಾಯಗೊಂಡಿದ್ದಾರೆ. ವಿಧಾನಸಭೆಯ ವಿರೋಧ ಪಕ್ಷದ ನಾಯಕ ಸುಶೀಲ್ ಕುಮಾರ್ ಮೋದಿ, ಬಿಜೆಪಿ ನಾಯಕ ಯಶವಂತ್ ಸಿನ್ಹಾ, ಸಮತಾ ಪಕ್ಷದ ನೇತಾರ ನಿತೀಶ್ ಕುಮಾರ್ ಸೇರಿದಂತೆ ಒಟ್ಟು 1200 ಮಂದಿಯನ್ನು ಬಂಧಿಸಲಾಗಿದೆ ಎಂದು ಅಧಿಕೃತ ಮೂಲಗಳು ತಿಳಿಸಿವೆ.

ಗಾಳಿಯಲ್ಲಿ ಗುಂಡು: ಖಗರಿಯದಲ್ಲಿ ದೊಂಬಿಯಲ್ಲಿ ತೊಡಗಿದ್ದ ಬಂದ್ ಬೆಂಬಲಿಗರ ಗುಂಪನ್ನು ಚದುರಿಸಲು ಪೊಲೀಸರು ಗಾಳಿಯಲ್ಲಿ ಗುಂಡು ಹಾರಿಸಬೇಕಾಯಿತು ಎಂದು ರಾಜ್ಯ ಗೃಹಖಾತೆಯ ಕಾರ್ಯದರ್ಶಿ ಡಿ.ಪಿ.ಮಹೇಶ್ವರಿ ಅವರು ತಿಳಿಸಿದ್ದಾರೆ.

• **ಭಿನ್ನಮತೀಯರಿಗೆ ಪಟೇಲ್ ತರಾಟೆ**

ನವದೆಹಲಿ, ಮೇ 3- 'ಕೆಲವು ಶಾಸಕರು ಅನವಶ್ಯಕವಾಗಿ ಒಂದು ಕಡೆ ಸೇರಿ ತಿನ್ನುವುದು, ಮಾತನಾಡುವುದನ್ನು ಬಿಟ್ಟರೆ ಅವರಿಗೆ ಬೇರೇನೂ ಕೆಲಸವಿಲ್ಲ'.

ಕರ್ನಾಟಕ ಜನತಾದಳದ ಭಿನ್ನಮತೀಯ ಶಾಸಕರು ಶುಕ್ರವಾರ ಬೆಂಗಳೂರಿನಲ್ಲಿ ನಡೆಸಿದ ಸಭೆಯ ಬಗೆಗೆ ಇಂದು ಇಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಕೇಳಿದ ಪ್ರಶ್ನೆಗೆ ಮುಖ್ಯಮಂತ್ರಿ ಜೆ.ಎಚ್.ಪಟೇಲ್ ಉತ್ತರಿಸಿದ ಬಗೆ ಇದು.

50 ವರ್ಷಗಳ ಹಿಂದೆ

ಗುರುವಾರ, 4-5-1972

• **ಮಹಾಜನ್ ವರದಿಗೇ ಕೇಂದ್ರವನ್ನು ಒಪ್ಪಿಸಿ: ರಾಜ್ಯ ಸರ್ಕಾರಕ್ಕೆ ಆಗ್ರಹ**

ಬೆಂಗಳೂರು, ಮೇ 3- ಮಹಾಜನ್ ತೀರ್ಪನ್ನು ಬದಿಗೊತ್ತುವ ಪ್ರಯತ್ನಕ್ಕೆ ಬಲಿ ಬೀಳದೆ ಕೇಂದ್ರ ಸರ್ಕಾರ ತೀರ್ಪನ್ನು ಪೂರ್ಣವಾಗಿ ಒಪ್ಪಿಕೊಳ್ಳುವಂತೆ ಪ್ರಯತ್ನ ಮಾಡಬೇಕೆಂದು ಪ್ರದೇಶ ಕಾಂಗ್ರೆಸ್ಸಿನ (ಸಂಸ್ಥಾ) ಕಾರ್ಯ ಸಮಿತಿ ರಾಜ್ಯ ಸರ್ಕಾರವನ್ನು ಒತ್ತಾಯ ಮಾಡಿದೆ.

• **ಬೆಳಗಾವಿ ವಿಭಜನೆ: ಕೇಂದ್ರದ ಯತ್ನ ಬಗ್ಗೆ ಜನರ ದಿಗ್ಭ್ರಾಂತಿ**

ಬೆಳಗಾವಿ, ಮೇ 3- ಬೆಳಗಾವಿ ನಗರದ ವಿಭಜನೆಗೆ ಕೇಂದ್ರ ನಡೆಸಿದೆ ಎನ್ನಲಾದ ಯತ್ನದ ವರದಿ ಇಲ್ಲಿಯ ಎಲ್ಲ ವರ್ಗಗಳ ಜನರಿಗೂ ದಿಗ್ಭ್ರಾಂತಿಯನ್ನುಂಟುಮಾಡಿದೆ.

ಮಹಾರಾಷ್ಟ್ರ ಪರ ಅಥವಾ ಕರ್ನಾಟಕ ಪರ ವಾದಿಗಳಾಗಲಿ, ಬೆಳಗಾವಿ ವಿಭಜನೆಗೆ ಒಪ್ಪುವ ಹಾಗಿಲ್ಲ. ನಗರ ಸಮಗ್ರವಾಗಿರಬೇಕೆಂಬುದೇ ಎರಡೂ ಗುಂಪುಗಳ ಆಶಯ.

ನಮಗೆ ಬೇಕಿರುವುದು ಸ್ಮಾರ್ಟ್ ಸಿಟಿಗಳಲ್ಲ, ವಾಯುಮಾಲಿನ್ಯಕ್ಕೆ ಎಡೆಮಾಡಿಕೊಡದ ಸುಸ್ಥಿರ ನಗರಗಳು

ವಾಯುಗುಣ ಹದಗೆಡಿಸುವ ನಗರಗಳು



ವಿಶ್ಲೇಷಣೆ

ಗುರುರಾಜ್ ಎಸ್. ದಾವಣಗೆರೆ

ಒಂದು ಸಾಧಾರಣ ಮಳೆಗೆ ಕೆರೆ- ಕಾಲುವೆಗಳಂತಾಗುತ್ತಿರುವ ಬೆಂಗಳೂರಿನ ಕೆಲವು ಮುಖ್ಯ ರಸ್ತೆ- ಬಡಾವಣೆಗಳು ಈ ಸಲದ ಮಾನ್ಸೂನ್ ಮಳೆಗೆ ಪರಿಸ್ಥಿತಿ ಮತ್ತಷ್ಟು ಗಂಭೀರವಾಗಲಿದೆ ಎಂಬ ಸೂಚನೆ ನೀಡುತ್ತಿವೆ. ಸುರಿಯುವ ನಾಲ್ಕಾರು ಸೆಂಟಿಮೀಟರ್ ಮಳೆಗೆ ತತ್ತರಿಸಿ ಹೋಗುವ ನಗರಗಳೇ ನಮ್ಮಲ್ಲಿ ಅಧಿಕ. ಬೀಳುವ ಮಳೆಯನ್ನು ಸಂಗ್ರಹಿಸಿ ಇಟ್ಟುಕೊಂಡು ಮರುಬಳಕೆ ಮಾಡುವ ನಗರಗಳು ನಮ್ಮ ದೇಶದಲ್ಲಿ ಬೆರಳೆಣಿಕೆಯಷ್ಟು ಮಾತ್ರ.

ಮಹಾನಗರಗಳ ಸುಧಾರಣೆಗೆ ವರ್ಷದಿಂದ ವರ್ಷಕ್ಕೆ ಬಜೆಟ್‌ನಲ್ಲಿ ಮೀಸಲಿರಿಸುವ ಹಣ ಹೆಚ್ಚುತ್ತಲೇ ಇದೆ. ಹಾಗೆಯೇ ರಸ್ತೆ, ಚರಂಡಿ, ಕಸ ನಿರ್ವಹಣೆಯ ಸವಾಲುಗಳು ಸಹ ಏರುತ್ತಿವೆ. ಉಸಿರಾಡುವ ಗಾಳಿಯಲ್ಲಿನ ತೇಲುಕಣಗಳ ಪ್ರಮಾಣ 2.5 ಪಿಪಿಎಂ ದಾಟಿದ್ದು, ವಾಯುಮಾಲಿನ್ಯದಿಂದಾಗಿ ಎಳೆಯ ಮಕ್ಕಳ ಬೆಳವಣಿಗೆ ಸರಿಯಾಗಿ ಆಗುತ್ತಿಲ್ಲ. ವೃದ್ಧರು ನಗರ-ಜೀವನಕ್ಕೆ ಯೋಗ್ಯರಲ್ಲ ಎಂಬ ವಿಷಮ ಪರಿಸ್ಥಿತಿ ನಿರ್ಮಾಣಗೊಂಡಿದೆ. ವಾಹನಗಳು ಉಗುಳುವ ಹೊಗೆ, ಹುಟ್ಟಿಸುವ ಓಝೋನ್ ಕಣಗಳು ಮನುಷ್ಯನ ಶ್ವಾಸಕೋಶವನ್ನು ಛಿದ್ರಗೊಳಿಸುತ್ತಿವೆ. ಮೈಲುದ್ದ ನಿಲ್ಲುವ ವಾಹನಗಳು, ಟ್ರಾಫಿಕ್ ಜಾಮ್, ಜನದಟ್ಟಣೆಯು ನಗರವಾಸಿಗಳ ಪಾಲಿಗೆ ದುಃಸ್ವಪ್ನದಂತೆ ಕಾಡುತ್ತಿವೆ. ವಾಯುಗುಣ ಸುಧಾರಣೆಗೆ ಮಾದರಿಯಾಗಬೇಕಿದ್ದ ನಗರಗಳು ವಾಯುಗುಣ ವೈಪರೀತ್ಯಕ್ಕೆ ಕುಮ್ಮಕ್ಕು ನೀಡುತ್ತಿವೆ.

ಭೂಮಿಯ ಕೇವಲ ಶೇಕಡ 1ರಷ್ಟು ಜಾಗವನ್ನು ಆಕ್ರಮಿಸಿರುವ ನಗರಗಳು ಜಗತ್ತಿನ ಒಟ್ಟು ಇಂಗಾಲದ ಶೇ 75ರಷ್ಟು ಹೊಮ್ಮಿಸುತ್ತವೆ. ವಾಯುಗುಣ ಪ್ರಕೋಪಕ್ಕೆ ಅತಿ ಹೆಚ್ಚು ಕೊಡುಗೆ ನೀಡುತ್ತಿರುವ ನಗರಗಳಿಗೆ ಅಷ್ಟೇ ದೊಡ್ಡ ಮಟ್ಟದ ಅನನುಕೂಲಗಳು ಎದುರಾಗುತ್ತಿವೆ. ಭರಪೂರ ಮಳೆ ಬಂದು ಕಾಲುವೆ ತುಂಬಿ ಹರಿದು ಬಡಾವಣೆಗಳ ಮನೆಗಳಿಗೆ ನೀರು ನುಗ್ಗುವುದನ್ನು ಪ್ರತಿವರ್ಷ ಕಾಣುತ್ತಿದ್ದೇವೆ. ನಂತರದ ದಿನಗಳಲ್ಲಿ ಕುಡಿಯಲು ಬಳಸುವ ನೀರಿಗೆ ಹಾಹಾಕಾರ ಶುರುವಾಗುತ್ತದೆ. ನಗರಗಳಾದ್ಯಂತ ಹಸಿರು ಮಾಯವಾಗಿ ಕಾಂಕ್ರೀಟು ನೆಲ- ಕಟ್ಟಡಗಳೇ ಆವರಿಸಿರುವುದರಿಂದ ನೀರು ನೆಲಕ್ಕೆ ಇಂಗದೆ ಅಂತರ್ಜಲ ಮಟ್ಟವೂ ಏರುವುದಿಲ್ಲ. ಸ್ಥಳೀಯವಾಗಿ ಮಳೆ ನೀರು ಸಂಗ್ರಹದ ವ್ಯವಸ್ಥೆಗಳಿಲ್ಲ. ಕೆರೆ, ಹೊಂಡಗಳಲ್ಲಿ ನೀರಿಗಿಂತ ಊರಿನ ತ್ಯಾಜ್ಯ, ಹೂಳೇ ಹೆಚ್ಚು. ಬಹುತೇಕ ಕೆರೆಗಳು ವಸತಿ ತಾಣ, ಸ್ಟೇಡಿಯಂ, ಮನರಂಜನಾ ಕೇಂದ್ರ, ಬಸ್ ನಿಲ್ದಾಣಗಳಾಗಿ ಬದಲಾಗಿವೆ. ಸ್ಥಳೀಯ ನೀರಿನ ಮೂಲಗಳನ್ನು ಒಣಗಿಸಿ ನೂರಾರು ಮೈಲಿ ದೂರದಿಂದ ನೀರು ತರುವ ಯೋಜನೆಗಳನ್ನು ರೂಪಿಸಲಾಗುತ್ತಿದೆ. ನಾಲೆ, ಕೊಳವೆ ಹಾದು ಬರುವ ದಾರಿಯುದ್ದಕ್ಕೂ ಪರಿಸರದ ಮಾರಣಹೋಮ ನಡೆಯುತ್ತದೆ. ಅಭಿವೃದ್ಧಿಯ ಹೆಸರಿನಲ್ಲಿ ಅದು ಅನಿವಾರ್ಯ ಎನ್ನುವವರೂ ಇದ್ದಾರೆ.

ಈಗ ಬಿರು ಬೇಸಿಗೆ. ನಗರಗಳ ಉಷ್ಣಾಂಶ ದಿನೇ ದಿನೇ ಹೆಚ್ಚುತ್ತಿದೆ. ಮನೆ, ವಾಣಿಜ್ಯ ಕಟ್ಟಡಗಳು ಒತ್ತೊತ್ತಾಗಿ ಇರುವುದರಿಂದ ಗಾಳಿಯಾಡಲೂ ಜಾಗವಿಲ್ಲ. ಸೂರ್ಯನ ಬಿಸಿಲು ಹೆಚ್ಚಿರುವ ನಮ್ಮ ದೇಶದ ಮನೆಗಳಲ್ಲಿ ಹಿಂದೆಲ್ಲ ಕಿಟಕಿ- ಬಾಗಿಲುಗಳ ಮೇಲೆ ಸಜ್ಜಾ ಕಟ್ಟಿರುತ್ತಿದ್ದರು. ಈಗ ಸಜ್ಜಾ ಮಾಯವಾಗಿ ಸೂರ್ಯನ ಬಿಸಿಕಿರಣ ನೇರ ಮನೆಯೊಳಗೇ ಪ್ರವೇಶಿಸುವುದರಿಂದ ಒಳಾಂಗಣದ ಉಷ್ಣತೆ ಹೆಚ್ಚುತ್ತದೆ. ಈ ಉಷ್ಣತೆಯನ್ನು ಕಡಿಮೆಗೊಳಿಸಲು ಫ್ಯಾನು, ಏರ್‌ಕಂಡೀಷನರ್‌ಗಳ ಬಳಕೆ ಹೆಚ್ಚುತ್ತಿದೆ. ಅದಕ್ಕಾಗಿ ಹೆಚ್ಚಿನ ವಿದ್ಯುತ್ ಬೇಕಾಗುತ್ತದೆ. ಏರ್‌ಕಂಡೀಷನರ್‌ಗಳಿಂದ ಹೊಮ್ಮುವ ಕ್ಲೋರೊಫ್ಲೋರೊಕಾರ್ಬನ್ ಓಝೋನ್ ಪದರಕ್ಕೆ ಧಕ್ಕೆ ತಂದು ವಾತಾವರಣದ ಉಷ್ಣಾಂಶ ಹೆಚ್ಚಿಸುತ್ತಿದೆ. ಬೇಸಿಗೆಯ ಈ ದಿನಗಳಲ್ಲಿ ಮಹಾನಗರಗಳಲ್ಲಿ ಅತಿ ಹೆಚ್ಚು ಮಾರಾಟಗೊಳ್ಳುತ್ತಿರುವ ಎಲೆಕ್ಟ್ರಾನಿಕ್ ವಸ್ತುಗಳಲ್ಲಿ ಹವಾನಿಯಂತ್ರಕ ಯಂತ್ರ ಅಗ್ರ ಸ್ಥಾನದಲ್ಲಿದೆ. ಸಿಎಫ್‌ಸಿ ಹೊಮ್ಮಿಸುವ ರೆಫ್ರಿಜಿರೇಟರ್‌ಗಳ ಮಾರಾಟವೂ ಜೋರಾಗಿದೆ.

ಮೊದಲೆಲ್ಲ ಸ್ವಂತ ಮನೆಗಳಲ್ಲಿ ಮಾತ್ರ ಎ.ಸಿ. ವ್ಯವಸ್ಥೆ ಇರುತ್ತಿತ್ತು. ಈಗ ಬಾಡಿಗೆ ಮನೆಗಳವರೂ ಎ.ಸಿ. ಮೊರೆ ಹೋಗುತ್ತಿದ್ದಾರೆ. ನಗರಗಳ ಮಾಲಿನ್ಯ ಪಕ್ಕದ ಊರು, ಗ್ರಾಮಗಳಿಗೆ ವರ್ಗಾವಣೆಗೊಂಡು ಅಲ್ಲಿನ ಬೆಳೆ ಕುಂಠಿತಗೊಳ್ಳುತ್ತಿದೆ. ವಾರ್ಷಿಕ ಹತ್ತು ಕೋಟಿ ಜನರ ಆಹಾರ ಉತ್ಪಾದನೆ ಕಡಿಮೆಯಾಗಿದೆ ಎಂಬ ಮಾಹಿತಿ ಇದೆ. ಒಂದು ಲಕ್ಷಕ್ಕೂ ಹೆಚ್ಚು ಜನಸಂಖ್ಯೆ ಇರುವ ನಗರಗಳಲ್ಲಿ ನೀರು- ಗಾಳಿ ಕಲುಷಿತಗೊಂಡಿವೆ. ಈಗ ವಿಶ್ವದ ನಗರವಾಸಿಗಳ ಜನಸಂಖ್ಯೆ 420 ಕೋಟಿ. ವಿಶ್ವಸಂಸ್ಥೆಯ ಸುಸ್ಥಿರ ಅಭಿವೃದ್ಧಿಯ 11ನೇ ಗುರಿ 'ಸುಸ್ಥಿರ ನಗರ'ಗಳ ಅನಿವಾರ್ಯವನ್ನು ಒತ್ತಿ ಹೇಳುತ್ತದೆ. ಬೇಕಾದ ಮುಕ್ತತೆ ಮತ್ತು ವಿಪುಲ ಉದ್ಯೋಗಾವಕಾಶಗಳಿಗಾಗಿ ನಗರಗಳಿಗೆ ಹೆಚ್ಚಿನ ಜನ ಬರುತ್ತಾರೆ. ಇವರ ವಸತಿಗಾಗಿ ನಗರ ವಿಸ್ತಾರಗೊಳ್ಳುತ್ತಲೇ ಹೋಗುತ್ತದೆ. ನಗರದ ಹೊರವಲಯದಲ್ಲಿ ಇದ್ದುಕೊಂಡು ಪ್ರತಿನಿತ್ಯ ನಗರಗಳಿಗೆ ಕೆಲಸಕ್ಕೆ ಬರುವ ಬಹುಸಂಖ್ಯೆಯ ಜನರಿಂದ ಜನ- ವಾಹನ ದಟ್ಟಣೆ ಸೃಷ್ಟಿಯಾಗುತ್ತಿದೆ. ಮನೆಯಿಂದ ಕೆಲಸದ ಜಾಗಕ್ಕೆ ತಲುಪಲು ಬೇಕಾಗುವ ಸಮಯ ಸರಾಸರಿ ಮುಕ್ಕಾಲು ಗಂಟೆಯಷ್ಟಾಗಿದೆ. ಸಮರ್ಪಕ ರಸ್ತೆಗಳ ಕೊರತೆಯಿಂದ ಸಾರ್ವಜನಿಕ ವಾಹನ ವ್ಯವಸ್ಥೆ ಇಲ್ಲ. ಆಗ ಸ್ವಂತ ವಾಹನಗಳು ಉರಿಸುವ ಡೀಸೆಲ್-ಪೆಟ್ರೋಲ್‌ಗಳಿಂದ ವಾತಾವರಣದ ಬಿಸಿ ಏರುತ್ತದೆ.

ಶ್ರೀಮಂತರು ಮತ್ತು ಅನುಕೂಲಸ್ಥರನ್ನೇ ದೃಷ್ಟಿಯಲ್ಲಿ ಇಟ್ಟುಕೊಂಡು ನಿರ್ಮಿಸಲಾಗಿದ್ದ ಆಫ್ರಿಕಾದ ಕೇಪ್‌ಟೌನ್‌ನಲ್ಲಿ 2018ರಲ್ಲಿ ನೀರಿನ ಅಭಾವ ತೀವ್ರವಾದಾಗ 'ಡೇ ಜೀರೊ' ಆಚರಿಸಲಾಗಿತ್ತು. ಊರಿನ ನಲ್ಲಿಗಳನ್ನೆಲ್ಲ ಬಂದ್ ಮಾಡಿದಾಗ ಪ್ರತೀ ಮನೆಯವರು 25 ಲೀಟರ್ ನೀರಿಗಾಗಿ ಸರತಿ ಸಾಲಿನಲ್ಲಿ ನಿಲ್ಲುವಂತಾಗಿತ್ತು. ಹತ್ತು ಲಕ್ಷ ಕಟ್ಟಡಗಳಲ್ಲಿ ಮಳೆ ನೀರು ಸಂಗ್ರಹದ ವ್ಯವಸ್ಥೆ ಇರುವ ನಮ್ಮ ಚೆನ್ನೈ ನಗರವು ಅಸಮರ್ಪಕ ನಿರ್ವಹಣೆಯಿಂದಾಗಿ ಇನ್ನೊಂದು ಕೇಪ್‌ಟೌನ್ ಆಗುವ ದಿನ ದೂರವಿಲ್ಲ ಎನ್ನುತ್ತಾರೆ ತಜ್ಞರು. ಹಣವಂತರ ಐಷಾರಾಮಿ ಕಟ್ಟಡಗಳಿಗಾಗಿ ಚೆನ್ನೈನ ಕೂವಮ್ ನದಿ, ಬಕಿಂಗ್‌ಹ್ಯಾಂ ಕಾಲುವೆಗಳನ್ನು ಮುಚ್ಚಲಾಗಿದೆ. ನೀರಿನ ಸರಬರಾಜು ಮತ್ತು ಚರಂಡಿ ನೀರಿನ ವಿಲೇವಾರಿಯನ್ನು ಸಮರ್ಪಕವಾಗಿ ಮಾಡುತ್ತಿದ್ದ ವ್ಯವಸ್ಥೆಗಳಿಲ್ಲದೆ ಸಾಮಾನ್ಯ ಮಳೆಯೂ ಪ್ರವಾಹ ಸೃಷ್ಟಿಸುತ್ತಿದೆ.

ನಮ್ಮ ನಗರಗಳು ಆರ್ಥಿಕತೆಯ ಶಕ್ತಿ ತಾಣಗಳು. ದೇಶದ ಒಟ್ಟು ಉತ್ಪನ್ನದ 80 ಭಾಗ ನಗರಗಳಿಂದಲೇ ಬರುತ್ತದೆ. ಜಗತ್ತಿನಲ್ಲಿ ಉತ್ಪಾದನೆಯಾಗುತ್ತಿರುವ ಶಕ್ತಿಯ ಮೂರನೇ ಎರಡು ಭಾಗವನ್ನು ನಗರಗಳೇ ಬಳಸುತ್ತಿವೆ. ಇದರಿಂದಾಗಿ ವಿಶ್ವದ ಇಂಗಾಲ ಹೊರ-ಸೂಸುವಿಕೆಯಲ್ಲಿ ನಗರಗಳ ಪಾಲು ಶೇ 75ರಷ್ಟಿದೆ. ಕೇವಲ 25 ನಗರಗಳು ಇಡೀ ವಿಶ್ವ ಹೊಮ್ಮಿಸುವ ಶಾಖ-ವರ್ಧಕಗಳ ಪಾಲಿನ ಅರ್ಧದಷ್ಟನ್ನು ಹೊಮ್ಮಿಸುತ್ತಿವೆ. ಇವು ನಗರಗಳ ಮಾಲಿನ್ಯವನ್ನು ಹೆಚ್ಚಿಸುವುದರ ಜೊತೆಗೆ ವಿಶ್ವದ ವಾಯುಗುಣದ ಮೇಲೂ ನಕಾರಾತ್ಮಕ ಪ್ರಭಾವ ಬೀರುತ್ತಿವೆ. ವಾತಾವರಣದ ಬಿಕ್ಕಟ್ಟು ಎದುರಿಸಲಿರುವ ವಿಶ್ವದ 100 ನಗರಗಳ ಪೈಕಿ 43 ನಮ್ಮಲ್ಲೇ ಇವೆ.

ನಮಗೆ ಬೇಕಿರುವುದು ಸ್ಮಾರ್ಟ್ ಸಿಟಿಗಳಲ್ಲ. ಬೀಳುವ ಮಳೆಯ ಪ್ರತೀ ಹನಿಯನ್ನೂ ಸಂಗ್ರಹಿಸಿ, ಶುದ್ಧೀಕರಿಸಿ ಮರುಬಳಕೆ ಮಾಡುವ, ಮನೆಯಿಂದ ಹೊಮ್ಮುವ ತ್ಯಾಜ್ಯ ನೀರು- ಕಸವನ್ನು ಸಂಸ್ಕರಿಸುವ, ಬಿಸಿಲನ್ನು ಶಕ್ತಿಯನ್ನಾಗಿ ಬಳಸುವ, ಸಾರ್ವಜನಿಕ ವಾಹನ ವ್ಯವಸ್ಥೆಗೆ ಒತ್ತು ನೀಡುವ ಸುಸ್ಥಿರ ನಗರಗಳು ನಮಗೆ ಬೇಕು. ಬೆಂಗಳೂರಿನಲ್ಲಿ ಹೆಸರಿಗೆ ಮಾತ್ರ ಎರಡು ಲಕ್ಷ ಕಟ್ಟಡ-ಗಳಲ್ಲಿ ಮಳೆ ನೀರು ಸಂಗ್ರಹದ ವ್ಯವಸ್ಥೆ ಇದೆ. ವಾಹನ ದಟ್ಟಣೆ ತಡೆಯಲು ಹೊಸ ರಸ್ತೆ ನಿರ್ಮಿಸುವುದರ ಬದಲಿಗೆ ಸಾರ್ವಜನಿಕ ವಾಹನ ವ್ಯವಸ್ಥೆ ಸುಧಾರಿಸಬೇಕು. ನೂರು ದಿನಗಳ ಉದ್ಯೋಗ ಮತ್ತು ಆದಾಯದ ಖಾತರಿ ನೀಡುವ ನರೇಗಾ ಯೋಜನೆಯು ನಗರಗಳಿಗೆ ಜನ ವಲಸೆ ಬರುವುದನ್ನು ಕಡಿಮೆ ಮಾಡಿದೆ. ಇದು ಇನ್ನಷ್ಟು ಬಲಗೊಳ್ಳಬೇಕು. ಅವರಿರುವಲ್ಲಿಯೇ ದುಡಿಯಲು ಅವಕಾಶ ಹೆಚ್ಚಬೇಕು.

ಲೇಖಕ: ಪ್ರಾಚಾರ್ಯ, ವಿಡಿಯಾ ಪೂರ್ಣಪ್ರಜ್ಞ ಪದವಿ ಪೂರ್ವ ಕಾಲೇಜು, ಬೆಂಗಳೂರು



ಚುರುಮುರಿ



ಕರುಣೆ ಇಲ್ಲದ ಜನ!

• ಗುರು ಪಿ.ಎಸ್.

'ಕರ್ನಾಟಕ ರಾಜ್ಯ ಪೊಲೀಸ್ ಆದ ನಾನು ಸಾರ್ವಜನಿಕ ಹಕ್ಕುಗಳನ್ನು ರಕ್ಷಿಸಲು ಪ್ರತಿಜ್ಞಾಬದ್ಧನಾಗಿದ್ದೇನೆ. ಎಲ್ಲರಿಗೂ ವಿಳಂಬವಿಲ್ಲದೆ ನ್ಯಾಯ ದೊರಕುವಂತೆ ಮಾಡಲು ಇತರ ಎಲ್ಲ ಇಲಾಖೆಗಳೊಡನೆ ಸಹಕರಿಸುತ್ತೇನೆ. ರಾಜಕೀಯ ವ್ಯತ್ಯಾಸಗಳನ್ನು ಎಣಿಸದೆ ಎಲ್ಲರನ್ನೂ ಸಮಾನವಾಗಿ ನೋಡುತ್ತೇನೆ. ಪೊಲೀಸ್ ಇಲಾಖೆಯ ಕೆಲಸದಲ್ಲಿ ಆಧುನಿಕ ವಿಧಾನಗಳನ್ನು ಅಳವಡಿಸಿಕೊಳ್ಳುತ್ತೇನೆ...'

ಕೊರಳುಬ್ಬಿಸಿಕೊಂಡು, ಕಣ್ತುಂಬಿಕೊಂಡು, ಅಳುತ್ತಾ ಪೊಲೀಸರ ಧ್ಯೇಯೋದ್ದೇಶಗಳನ್ನು ಬಾಯಿಪಾಠ ಮಾಡ್ತಿದ್ದ ಮುದ್ದಣ್ಣ.

'ಮಾಡೋದೆಲ್ಲ ಮಾಡಿ ಈಗ ಅತ್ತರೆ ಏನ್ ಪ್ರಯೋಜನ...' ಬೈದ ವಿಜಿ.

'ಏನ್ ಮಾಡಿದೀನಿ ಸರ್, ಅಂಥದ್ದೇನ್ ಮಾಡಿದೀನಿ ನಾನು...?! ಪೊಲೀಸ್ ಆಗೋಕೂ ಮುಂಚೆನೇ ಅದರ ಧ್ಯೇಯೋದ್ದೇಶಗಳನ್ನೆಲ್ಲ ಪಾಲಿಸಿದ್ದೇ ತಪ್ಪಾ? ನನ್ನ 20ಕ್ಕೂ ಹೆಚ್ಚು ಫ್ರೆಂಡ್ಸ್‌ಗೆ ಎಕ್ಸಾಮ್ ಬರೆಯೋಕೆ ಎಲ್ಲ 'ಸಹಕಾರ' ನೀಡಿ ಅವರ ಹಕ್ಕುಗಳನ್ನು ರಕ್ಷಿಸಿದ್ದೇನೆ. ಅವರು ಸಾರ್ವಜನಿಕರಲ್ಲವೇ? ನಾವು ಆಯ್ಕೆಯಾಗೋದ್ರಲ್ಲಿ ಯಾವುದೇ ರೀತಿಯ ವಿಳಂಬ ಆಗಬಾರದು ಅನ್ನೋ ಕಾರಣಕ್ಕೆ, ಎಜುಕೇಷನ್ ಡಿಪಾರ್ಟ್‌ಮೆಂಟ್‌ನ ಮೇಷ್ಟ್ರು, ಹೆಡ್ ಮಾಸ್ಟರುಗಳ ಹೆಲ್ಪ್ ತಗೊಂಡು ಎಕ್ಸಾಮ್ ಬರೆದಿದ್ದೀನಿ. ಯಾವುದೇ ರಾಜಕೀಯ ಪಕ್ಷದ ವ್ಯತ್ಯಾಸವನ್ನೂ ಎಣಿಸದೆ ಎಲ್ಲ ಪಾರ್ಟಿ ಲೀಡರ್‌ಗಳ ಸಹಾಯವನ್ನೂ ಪಡೆದಿದ್ದೀನಿ...' ಬಿಕ್ಕಳಿಸುತ್ತಲೇ ಹೇಳ್ದ ಮುದ್ದಣ್ಣ.

'ಆಧುನಿಕ ವಿಧಾನ ಏನು ಅನುಸರಿಸಿದೀಯ?'

'ಬ್ಲೂಟೂತ್ ಬಳಸಿಲ್ವ ಸಾರ್!'

'ಆದರೂ... ಪ್ರಾಮಾಣಿಕವಾಗಿ ಓದಿದೋರಿಗೆ ಅನ್ಯಾಯ ಮಾಡಿದಂಗಲ್ವ' ಸಿಟ್ಟಲ್ಲೇ ಕೇಳ್ದ ವಿಜಿ.

'ಸರ್, ಎಲ್ಲ ಜನರಂತೆ ನೀವೂ ಕರುಣೆ ಇಲ್ಲದವ್ರ ಥರ ಮಾತಾಡ್ಬೇಡಿ. ಪೋಸ್ಟ್‌ಗಳು ಇರೋದು 545 ಸರ್. ಆದ್ರೆ ನಾವು 25 ಜನ ಮಾತ್ರ ಹೀಗ್ ಮಾಡಿರೋದು'.

'ಇದೂ ಅನ್ಯಾಯ ಅಲ್ವೇನೋ...'

'ಕಾಮನ್‌ಸೆನ್ಸ್ ಇಲ್ವ ಸರ್ ನಿಮಗೆ? 545 ಪೋಸ್ಟ್‌ಗೆ 40 ಪರ್ಸೆಂಟ್ ಅಂದ್ರೆ ಕನಿಷ್ಠ 218 ಕ್ಯಾಂಡಿಡೇಟ್‌ಗಳಾದರೂ ನಮ್ಮಂಥವರಿರಬೇಕಿತ್ತಲ್ವ ಸರ್...' ಅಳು ಜೋರಾಯಿತು!

ಸಂಗತ

ಕೆಜಿಎಫ್: ಎಲ್ಲಿದ್ದಾರೆ ದನಿಯಾಗುವವರು?

'ಕೆಜಿಎಫ್' ಹೆಸರಿನ ಸಿನಿಮಾ ಭರ್ಜರಿ ಯಶಸ್ಸು ಕಂಡಿದೆ. ಆದರೆ ಕೆಜಿಎಫ್ ಗಣಿಗಳಲ್ಲಿ ಕಾರ್ಮಿಕರಾಗಿ ದುಡಿದವರ ಬವಣೆ ಕೇಳುವವರೇ ಇಲ್ಲದಂತಾಗಿದೆ

• ಡಾ. ಎಂ.ವೆಂಕಟಸ್ವಾಮಿ

2018ರಲ್ಲಿ ಬಿಡುಗಡೆಯಾದ ಕೆಜಿಎಫ್-1 ಸಿನಿಮಾ ಯಶಸ್ವಿ ಪ್ರದರ್ಶನ ಕಂಡಿತು. ಹಾಗೆಯೇ ಇತ್ತೀಚೆಗೆ ಬಿಡುಗಡೆಯಾಗಿರುವ ಕೆಜಿಎಫ್-2 ಗಳಿಕೆಯಲ್ಲಿ ದಾಖಲೆ ಮಾಡುತ್ತಿದೆ. ಕನ್ನಡ ಸಿನಿಮಾವೊಂದು ದೇಶದಾದ್ಯಂತ ಸಂಚಲನ ಸೃಷ್ಟಿಸುತ್ತ ಅದ್ಭುತ ಯಶಸ್ಸು ಕಂಡಿದೆ.

ಸಿನಿಮಾದಲ್ಲಿ ಗಣಿತ್ಯಾಜ್ಯ, ಸೈನೈಡ್ ಗುಡ್ಡಗಳು ಪದೇಪದೇ ಕಾಣಿಸಿಕೊಳ್ಳುತ್ತವೆ. ಅವು ಹೇಗೆ ಕಾಣಿಸುತ್ತವೆ ಎಂದರೆ, ಲಕ್ಷಾಂತರ ವರ್ಷಗಳ ಕಾಲ ಭೂಕಂಪ-ಸುನಾಮಿ, ಚಂಡಮಾರುತ ಭೂಮಿಯ ಮೇಲೆದಾಳಿಮಾಡಿದಂತೆಅಥವಾನೂರಾರುಕ್ಷುದ್ರಗ್ರಹಗಳು ಭೂಮಿಗೆ ಬಡಿದು ಅದರ ಮುಖವನ್ನೇ ಛಿದ್ರಗೊಳಿಸಿದಂತೆ ಕಾಣಿಸುತ್ತವೆ. ಗಣಿಗಳ ಯಶೋಗಾಥೆ, ಮಾನವ ಇತಿಹಾಸದ ಭೀಕರತೆ ಎರಡನ್ನೂ ಸಾರುವ ಈ ಗುಡ್ಡಗಳು ಮತ್ತು 'ಕೆಜಿಎಫ್' ಎಂಬ ಹೆಸರು ಸಿನಿಮಾ ಯಶಸ್ಸಿಗೆ ಸ್ವಲ್ಪಮಟ್ಟಿಗೆ ಕಾರಣವಾಗಿರಬೇಕು!


2,500 ವರ್ಷಗಳ ಹಿಂದೆಯೇ ಇಲ್ಲಿನ ಚಿನ್ನವು ಹರಪ್ಪ- ಮೊಹೆಂಜೊದಾರೊ ತಲುಪಿರುವ ದಾಖಲೆಗಳಿವೆ. ಬ್ರಿಟಿಷರು 1880ರಲ್ಲಿ ಮತ್ತೆ ಈ ಗಣಿಗಳನ್ನು ಪ್ರಾರಂಭಿಸಿ, ಅವು ನಿರಂತರವಾಗಿ 12 ದಶಕಗಳ ಕಾಲ ನಡೆದು 2001ರಲ್ಲಿ ಸ್ಥಗಿತಗೊಂಡವು. 8 ಕಿ.ಮೀ. ಉದ್ದ, 1.5 ಕಿ.ಮೀ. ಅಗಲ, 3.30 ಕಿ.ಮೀ. ಆಳದವರೆಗೂ ಗಣಿಗಳನ್ನು ತೋಡಿ, 1,000 ಟನ್ನುಗಳಷ್ಟು ಚಿನ್ನವನ್ನು ಉತ್ಪಾದಿಸಲಾಯಿತು. ಕೇಂದ್ರ ಸರ್ಕಾರವು 2001ರ ಫೆಬ್ರುವರಿ 28ರಂದು ಎಲ್ಲಾ ಗಣಿಗಳನ್ನು ದಿಢೀರನೆ ಸ್ಥಗಿತಗೊಳಿಸಿಬಿಟ್ಟಿತು.

ಗಣಿಗಳ ಸುತ್ತಲೂ ಇದ್ದ ಸುಮಾರು 200 ಗಣಿ ಕಾಲೊನಿಗಳಲ್ಲಿ ಸಾವಿರಾರು ಕಾರ್ಮಿಕರು ಮತ್ತು ಅವರ ಕುಟುಂಬಗಳು ಬದುಕು ನಡೆಸುತ್ತಿದ್ದವು. ಅದೇ ದಿನ ವಿದ್ಯುತ್ ಕಡಿತಗೊಳಿಸಿದ್ದಲ್ಲದೆ ಕಾಲೊನಿಗಳಿಗೆ ಸರಬರಾಜಾಗುತ್ತಿದ್ದ ಕುಡಿಯುವ ನೀರು, ಸ್ಯಾನಿಟರಿ ಮತ್ತು ಬೀದಿಗಳನ್ನು ಸ್ವಚ್ಛ ಮಾಡುವ ಕೆಲಸವನ್ನೂ ನಿಲ್ಲಿಸಲಾಯಿತು. ಗಣಿ ಕಾರ್ಮಿಕರಿಗೆ ಕೊಡುತ್ತಿದ್ದ ಪಡಿತರ, ಕೊನೆಗೆ ಗಣಿ ಆಸ್ಪತ್ರೆಯ ಸೇವೆಯನ್ನು ಸಹ ನಿಲ್ಲಿಸಲಾಯಿತು.

ಕಾರ್ಮಿಕರು ಮತ್ತು ಅವರ ಕುಟುಂಬಗಳು ರಾತ್ರೋರಾತ್ರಿ ಅಕ್ಷರಶಃ ಬೀದಿಗೆ ಬಿದ್ದವು. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಪ್ರಾರಂಭದಿಂದಲೂ ಈ ಕಾರ್ಮಿಕರನ್ನು ಮಲತಾಯಿ ಧೋರಣೆಯಿಂದಲೇ ನಡೆಸಿಕೊಂಡು ಬಂದಿವೆ. ಇವರಲ್ಲಿ ಹೆಚ್ಚಿನವರು ಪರಿಶಿಷ್ಟ ಸಮುದಾಯಕ್ಕೆ ಸೇರಿದವರು ಮತ್ತು ತಮಿಳುನಾಡಿನಿಂದ ವಲಸೆ ಬಂದವರು. 1983ರಲ್ಲಿ ವೇತನ ಪರಿಷ್ಕರಣೆ ಕಂಡಿದ್ದ ಗಣಿ ಕಾರ್ಮಿಕರು ಗಣಿಗಳನ್ನು ಮುಚ್ಚುವವರೆಗೂ ಮತ್ತೆ ಯಾವುದೇ ವೇತನ ಪರಿಷ್ಕರಣೆಯನ್ನು ಕಾಣಲಿಲ್ಲ. ಗಣಿಗಳನ್ನು ಮುಚ್ಚಿದಾಗ ಸುಮಾರು 4,000 ಕಾರ್ಮಿಕರು ಉಳಿದುಕೊಂಡಿದ್ದರು, ಉಳಿದ ಕಾರ್ಮಿಕರು ಕೇಂದ್ರ ಸರ್ಕಾರ ಕೊಟ್ಟ ಅಲ್ಪಸ್ವಲ್ಪ ಹಣ ತೆಗೆದುಕೊಂಡು ಸ್ವಯಂ ನಿವೃತ್ತಿ ಪಡೆದುಕೊಂಡಿದ್ದರು. ಆಗ ಕಾರ್ಮಿಕರಿಗೆ ತಿಂಗಳಿಗೆ ದೊರಕುತ್ತಿದ್ದ ಸರಾಸರಿ ಸಂಬಳ ಕೇವಲ ₹ 4,000.

1920-1950ರ ದಶಕಗಳಲ್ಲಿ 75 ಗಣಿಗಳಲ್ಲಿ ಒಟ್ಟು 35,000 ಕಾರ್ಮಿಕರು ದುಡಿಯುತ್ತಿದ್ದರು. ಗಣಿಗಳಲ್ಲಿ ಬರುತ್ತಿದ್ದ ಲಾಭದಲ್ಲಿ ಅಂದಿನ ಮೈಸೂರು ಸರ್ಕಾರಕ್ಕೆ ಬಹಳಷ್ಟು ಹಣ ಸಂದಾಯವಾಗುತ್ತಿತ್ತು. ಮೈಸೂರು ರಾಜ್ಯವನ್ನು 'ಮಾದರಿ ರಾಜ್ಯ' ಎಂದು ಕರೆಯಲಾಗುತ್ತಿತ್ತು. ಒಂದು ಕಾಲದಲ್ಲಿ ಮೈಸೂರು ರಾಜ್ಯವೊಂದರಿಂದಲೇ ಕೇಂದ್ರ ಸರ್ಕಾರಕ್ಕೆ ಶೇ 40ರಷ್ಟು ಹಣ ಹೋಗುತ್ತಿದ್ದರೆ, ದೇಶದ ಇತರ ಎಲ್ಲಾ ರಾಜ್ಯಗಳಿಂದ ಸೇರಿ ಶೇ 60ರಷ್ಟು ಹಣ ಹೋಗುತ್ತಿತ್ತು ಎನ್ನಲಾಗಿದೆ. ಮೊದಲ ಮತ್ತು ಎರಡನೇ ಮಹಾಯುದ್ಧಗಳು ಮುಗಿದ ನಂತರ ಬೆಂಗಳೂರಿನಲ್ಲಿ ಪ್ರಾರಂಭವಾದ ಅನೇಕ ಬೃಹತ್ ಕಾರ್ಖಾನೆಗಳಲ್ಲಿ ಕೆಲಸಕ್ಕೆ ಸೇರಿಕೊಂಡ ಮೊದಲ ತಲೆಮಾರಿನ ಕಾರ್ಮಿಕರು ಇದೇ ಚಿನ್ನದ ಗಣಿಗಳಿಗೆ ಸೇರಿದವರು.

ಗಣಿಗಳನ್ನು ಮುಚ್ಚಿದಾಗ ಉಳಿದುಕೊಂಡ 4,000 ಕಾರ್ಮಿಕರಲ್ಲಿ ಹೆಚ್ಚಿನವರು ಯುವಕರು. ಅವರಿಗೆ ಬರಬೇಕಿದ್ದ ಒಟ್ಟು ₹ 104 ಕೋಟಿ ಮೊತ್ತದ ನಿವೃತ್ತಿ ವೇತನ ಪ್ರಯೋಜನಗಳ ಬಾಕಿ ಉಳಿದುಕೊಂಡಿತ್ತು. ಇದರಲ್ಲಿ ₹ 52 ಕೋಟಿಯನ್ನು ಕೇಂದ್ರ ಸರ್ಕಾರ ಬಿಡುಗಡೆ ಮಾಡಿ, ಉಳಿದ ಹಣವನ್ನು ಚಿನ್ನದ ಗಣಿಗಳನ್ನು ಪ್ರಾರಂಭಿಸಲು ಟೆಂಡರ್ ಪಡೆದುಕೊಳ್ಳುವ ಕಂಪನಿಯಿಂದ ಪಡೆಯುವಂತೆ ಆದೇಶ ನೀಡಿತು. ಆದರೆ ಇದುವರೆಗೂ ಯಾವುದೇ ಕಂಪನಿ ಅದನ್ನು ನೀಡಲು ಮುಂದೆ ಬಂದಿಲ್ಲ. ಕಳೆದ ಎರಡು ದಶಕಗಳಲ್ಲಿ ಸುಮಾರು 900 ಕಾರ್ಮಿಕರು ಸಾವನ್ನಪ್ಪಿದ್ದಾರೆ. ಉಳಿದವರು ಇನ್ನೂ ಹಣಕ್ಕಾಗಿ ಕಾಯುತ್ತಿದ್ದಾರೆ ಎಂಬ ಮಾಹಿತಿ ಇದೆ. ಕೇಂದ್ರ ಸರ್ಕಾರ ಈಗಲಾದರೂ ಇವರ ಕಡೆ ಗಮನಹರಿಸಬೇಕಿದೆ.



ಯಾವುದೇ ಗಣಿಯನ್ನು ಪ್ರಾರಂಭಿಸಿ ಮುಚ್ಚುವಾಗ ಒಂದು ನಿಗದಿತ ಯೋಜನೆ ಇರುತ್ತದೆ. ಅಂದರೆ ಗಣಿಗಾರಿಕೆ ಸ್ಥಗಿತಗೊಂಡ ಮೇಲೆ 10-20 ವರ್ಷಗಳಲ್ಲಿ ಹಿಂದಿನ ಪರಿಸರವನ್ನು ಮರುಸೃಷ್ಟಿ ಮಾಡಬೇಕು. ಪರಿಸರ ಪುನಃಸ್ಥಾಪನೆಯು ಪ್ರಕೃತಿಯನ್ನು ಶ್ರೀಮಂತ-ಗೊಳಿಸುತ್ತದೆ, ಕಾರ್ಮಿಕರ ಆರೋಗ್ಯ ಮತ್ತು ಉತ್ತಮ ಜೀವನೋಪಾಯಕ್ಕೆ ಕಾರಣವಾಗುತ್ತದೆ. ಆದರೆ ಇಲ್ಲಿ ವಿಷಯುಕ್ತ ಸೈನೈಡ್ ಗುಡ್ಡಗಳನ್ನು ಹಾಗೇ ಬಿಟ್ಟ ಕಾರಣ ಜನರ ಆರೋಗ್ಯದ ಮೇಲೆ ಅಗಾಧ ದುಷ್ಪರಿಣಾಮಗಳು ಬೀರಿದವು.

ಈ ನತದೃಷ್ಟ ಗಣಿ ಕಾರ್ಮಿಕರ ಪರವಾಗಿ ಧ್ವನಿ ಎತ್ತುವವರೇ ಇಲ್ಲದಾಗಿದೆ. ಕೆಜಿಎಫ್ ಚಿತ್ರದ ನಟ ಯಶ್ ಅವರು ತಮ್ಮ ಸಮಾಜಸೇವಾ ಸಂಸ್ಥೆ 'ಯಶೋಮಾರ್ಗ'ದ ಮೂಲಕವೋ ಅಥವಾ ಕೆಜಿಎಫ್ ಸಿನಿಮಾ ತಂಡದ ಮೂಲಕವೋ ದನಿಯಿಲ್ಲದ ಕಾರ್ಮಿಕರು ಹಾಗೂ ಭಣಗುಡುವ ನಿಸರ್ಗದ ನೆರವಿಗೆ ಬರುವರೇ?

ಲೇಖಕ: ಭೂವಿಜ್ಞಾನಿ

ವಾಚಕರ ವಾಣಿ

ಪ್ರಾಮಾಣಿಕ ತನಿಖೆ ಬಾಯಿಮಾತಲ್ಲಷ್ಟೇ ಸಾಲದು

ದಿನಕ್ಕೊಂದು ತಿರುವು ಪಡೆಯುತ್ತಿರುವ ಪಿಎಸ್ಐ ಪರೀಕ್ಷಾ ಹಗರಣ, ಇದೀಗ ಮಂತ್ರಿಯೊಬ್ಬರ ಸುತ್ತ ಗಿರಕಿ ಹೊಡೆಯುತ್ತಿದೆ. ಅದೇನೇ ಇರಲಿ, ನಾಲ್ಕನೇ ರ‍್ಯಾಂಕ್ ಪಡೆದ ಅಭ್ಯರ್ಥಿ ಹಣ ಕೊಡದೆ ತನ್ನ ಬುದ್ಧಿವಂತಿಕೆಯಿಂದಲೇ ಪರೀಕ್ಷೆ ಎದುರಿಸಿದ್ದಾನೆ ಎಂದರೆ, ಹಾಲಿ ನ್ಯಾಯಾಧೀಶರ ಸಮಕ್ಷಮ ಅದೇ ಪ್ರಶ್ನೆಪತ್ರಿಕೆ ನೀಡಿ ಉತ್ತರ ಬರೆಸಬಹುದಲ್ಲವೇ? ಹಾಗೆಯೇ ಎಫ್ಐಆರ್ ದಾಖಲಾದ ಎಲ್ಲ ಅಭ್ಯರ್ಥಿಗಳಿಗೂ ಮರುಪರೀಕ್ಷೆ ನಡೆಸಿದರೆ ಹೇಗೆ?

ಹಗರಣದಲ್ಲಿ ಭಾಗಿಯಾಗಿದ್ದಾರೆ ಎನ್ನಲಾದ ಜನಪ್ರತಿನಿಧಿಗಳು ಮತ್ತು ಅವರ ನಿಕಟವರ್ತಿಗಳಿಗೆ ಮಂಪರು ಪರೀಕ್ಷೆ ನಡೆಸಿದರೆ ಸತ್ಯಾಸತ್ಯತೆಯಾದರೂ ಜನರಿಗೆ ಮನವರಿಕೆಯಾಗುತ್ತದೆ. ಇಷ್ಟೆಲ್ಲಾ ಗಲಾಟೆ ಎಬ್ಬಿಸಿದ ಹಗರಣ ಹಾಗೆಯೇ ಮುಚ್ಚಿ ಹೋಗಬಾರದೆಂದರೆ, ಪ್ರಾಮಾಣಿಕ ತನಿಖೆ ಬರೀ ಬಾಯಿಮಾತಿನಲ್ಲಾಗದೆ ಅಕ್ಷರಶಃ ಕಾರ್ಯರೂಪಕ್ಕೆ ಬರಬೇಕಿದೆ.

ಪ್ರಕಾಶ್ ಮಲ್ಕಿಒಡೆಯರ್, ಹೂವಿನಹಡಗಲಿ

ನೀರಿನ ಬಾಟಲಿನಲ್ಲಿ ತಾರತಮ್ಯವೇಕೆ?

ತಿಂಗಳ ಹಿಂದೆ ಕಾಶಿ ವಿಮಾನ ನಿಲ್ದಾಣದಲ್ಲಿ ಊರಿಗೆ ಬರುವ ವಿಮಾನಕ್ಕೆ ಕಾಯುತ್ತಿದ್ದೆ. ಬಿಸಿಲ ಝಳ ವಿಪರೀತ ಇದ್ದುದರಿಂದ ಕುಡಿಯಲು ಎರಡು ಬಾಟಲು ನೀರು ಹಿಡಿದುಕೊಂಡಿದ್ದೆ. ನನ್ನನ್ನು ವೈಟಿಂಗ್ ರೂಮೊಳಗೆ ಬಿಡುವಾಗ, ಕೈಯಲ್ಲಿ ಇದ್ದ ನೀರಿನ ಬಾಟಲಿಯನ್ನು ಒಳಗೆ ಒಯ್ಯುವಂತಿಲ್ಲ ಎಂದು ತಪಾಸಣಾ ಅಧಿಕಾರಿಗಳು ಹೇಳಿದರು. ಆಗ ತಾನೇ ಖರೀದಿಸಿದ ನೀರಿನ ಬಾಟಲಿಗಳನ್ನು ಬಿಸಾಡಲು ಮನ ಒಪ್ಪದೆ ಇದ್ದರೂ ಗತ್ಯಂತರವಿಲ್ಲದೆ ಹಾಗೇ ಮಾಡಿದೆ. ಆದರೆ ವೈಟಿಂಗ್ ರೂಮೊಳಗೆ ವಿಮಾನ ನಿಲ್ದಾಣದವರು ಮಾರಾಟಕ್ಕೆ ನೀರನ್ನು ಇಟ್ಟಿದ್ದರು. ಬೆಲೆ ಮಾತ್ರ ದುಪ್ಪಟ್ಟು. ಅರ್ಧ ಲೀಟರ್ ನೀರಿಗೆ ₹ 40 ಕೊಡಬೇಕಿತ್ತು. ಅವರ ನೀರನ್ನು ಖರೀದಿಸಬಹುದಾದರೆ ನಮ್ಮ ನೀರನ್ನು ನಾವು ವಿಮಾನ ನಿಲ್ದಾಣದೊಳಗೆ ಯಾಕೆ ಒಯ್ಯಬಾರದು ಎಂಬ ಪ್ರಶ್ನೆ ಆಗ ನನ್ನಲ್ಲಿ ಮೂಡಿತು. ನಮ್ಮ ನೀರನ್ನು ಅಲ್ಲೇ ಬಿಟ್ಟು ಹೊಸ ಬಾಟಲು ಖರೀದಿಸಿದರೆ ಅಷ್ಟರಮಟ್ಟಿಗೆ ಪ್ಲಾಸ್ಟಿಕ್ ಬಳಕೆ ಹೆಚ್ಚಾದಂತೆ ಆಗಲಿಲ್ಲವೇ? ಇದು ಪರಿಸರಕ್ಕೆ ಹಾನಿ ಮಾಡಿದಂತೆ ಅಲ್ಲವೇ? ಇನ್ನಾದರೂ ವಿಮಾನ ನಿಲ್ದಾಣದೊಳಗೆ ನಾವು ಒಯ್ಯುವ ನೀರಿಗೆ ಅನುಮತಿ ಕೊಟ್ಟು, ಪ್ಲಾಸ್ಟಿಕ್ ಬಳಕೆ ಕಡಿಮೆ ಮಾಡುವಲ್ಲಿ ನಿಲ್ದಾಣದ ಅಧಿಕಾರಿಗಳು ಕೈಜೋಡಿಸಬೇಕು.

ಸಹನಾ ಕಾಂತಬೈಲು, ಮಡಿಕೇರಿ

ಗಡಿ ಭಾಗದ ಜನರಲ್ಲಿ ಪರಕೀಯ ಭಾವ

ಜನಪ್ರತಿನಿಧಿಗಳು ತಮ್ಮ ಬೇಳೆ ಬೇಯಿಸಿಕೊಳ್ಳುವ ಸಲುವಾಗಿ ಭಾಷೆಯ ಹೆಸರಿನಲ್ಲಿ ಇತ್ತೀಚೆಗೆ ನೀಡುತ್ತಿರುವ ಹೇಳಿಕೆಗಳು ಗಡಿ ಭಾಗದ ಸಾಮಾನ್ಯ ಜನರಲ್ಲಿ ದ್ವೇಷ, ಅಸೂಯೆ ಮತ್ತು ಸಂಘರ್ಷ ಮನೋಭಾವ ಮೂಡಿಸುತ್ತಿವೆ. ಇದರಿಂದ ಗಡಿ ಭಾಗದ ಕೆಲವರಲ್ಲಿ ಪರಕೀಯ ಭಾವ ದಿನೇದಿನೇ ಹೆಚ್ಚಾಗುತ್ತಿದೆ. ಚಳಿಗಾಲದ ಅಧಿವೇಶನದ ಸಮಯದಲ್ಲಿ ನಡೆದ ಘಟನೆಗಳು ಇನ್ನೂ ತಣ್ಣಗಾಗದೇ ಇರುವಾಗ ಇಂತಹ ಹೇಳಿಕೆಗಳು ಉರಿಯುವ ಬೆಂಕಿಗೆ ಮತ್ತಷ್ಟು ತುಪ್ಪ ಸುರಿದಂತಾಗುತ್ತವೆ. ಹಾಗಾಗಿ ಜನಪ್ರತಿನಿಧಿಗಳು ತಮ್ಮ ಮಾತಿನ ಮೇಲೆ ನಿಗಾ ಇರಿಸಿ ಸಮಾಜದ ಸ್ವಾಸ್ಥ್ಯ ಕಾಪಾಡಲು ಮುಂದಾಗಬೇಕು.

ಚಂದ್ರಶೇಖರ್ ಕಿತ್ತೂರ್, ನರಗುಂದ

ಕಾರ್ಯಸಾಧುವಲ್ಲದ ಸಲಹೆ

ಉತ್ತರಪ್ರದೇಶದ ಅಲಿಗಡ ಪಟ್ಟಣದಲ್ಲಿ ಭಾನುವಾರ ನಡೆದ ಧಾರ್ಮಿಕ ಸಭೆಯಲ್ಲಿ, ಕಾಳಿಚರಣ್ ಮಹಾರಾಜ್ ಸ್ವಾಮೀಜಿ ಮತ್ತು ನರಸಿಂಹಾನಂದ ಸರಸ್ವತಿ ಅವರು 'ಹಿಂದೂ ಧರ್ಮೀಯರು ಹೆಚ್ಚಿನ ಸಂಖ್ಯೆಯಲ್ಲಿ ಮಕ್ಕಳನ್ನು ಹೆರಬೇಕು' ಎಂದು ಕಾರ್ಯಸಾಧುವಲ್ಲದ ಮತ್ತು ಸರ್ಕಾರದ ನೀತಿಗೆ ವಿರುದ್ಧವಾದ ಹೇಳಿಕೆ ನೀಡಿರುವುದು ವರದಿಯಾಗಿದೆ (ಪ್ರ.ವಾ., ಮೇ 3). ಬೇರೆ ಬೇರೆ ಸ್ವಾಮೀಜಿಗಳು ಹಾಗೂ ಸ್ವಯಂಘೋಷಿತ ಮುಖಂಡರು ಆಗಾಗ್ಗೆ ಇಂಥ ಹೇಳಿಕೆಗಳನ್ನು ನೀಡುತ್ತಲೇ ಇರುತ್ತಾರೆ. ಒಂದು ಮಗುವಿನ ಪಾಲನೆ- ಪೋಷಣೆ, ಆರೋಗ್ಯ, ಶಿಕ್ಷಣ, ಉದ್ಯೋಗ ಎಷ್ಟು ಕಷ್ಟ ಎಂಬುದು ಸಂಸಾರಿಗಳಿಗೆ ಗೊತ್ತೇ ವಿನಾ ಸಂಸಾರ ತ್ಯಜಿಸಿರುವ ಸ್ವಾಮೀಜಿಗಳಿಗೆ ಗೊತ್ತಾಗುವುದಿಲ್ಲ.

ಈ ಸ್ವಾಮೀಜಿಗಳು ಹಿಂದೂ ಮಕ್ಕಳ ಪಾಲನೆ-ಪೋಷಣೆ, ಆರೋಗ್ಯ, ಶಿಕ್ಷಣ, ಉದ್ಯೋಗ ಈ ಎಲ್ಲದರ ಪೂರ್ಣ ಜವಾಬ್ದಾರಿ ಹೊರುವ ವ್ಯವಸ್ಥೆ ಮಾಡಿಕೊಂಡು, ಆನಂತರ ಈ ಹೇಳಿಕೆಯನ್ನು ನೀಡಿದರೆ ಆ ಮಾತಿಗೆ ಘನತೆ, ತೂಕ ಲಭಿಸುತ್ತದೆ. ಅದು ಬಿಟ್ಟು ಪುಕ್ಕಟೆ ಸಲಹೆ ಕೊಡುವುದರಿಂದ ಯಾವ ಕಾರ್ಯವೂ ಸಾಧಿತವಾಗುವುದಿಲ್ಲ.

ಸಿ.ಚಿಕ್ಕತಿಮ್ಮಯ್ಯ ಹಂದನಕೆರೆ, ಬೆಂಗಳೂರು

ಮಾನವೀಯತೆ ತೋರುವಲ್ಲೂ ತಾರತಮ್ಯವೇ?


ಪಿಎಸ್ಐ ನೇಮಕಾತಿ ಹಗರಣಗಳಿಗೆ ಸಂಬಂಧಿಸಿದಂತೆ ಸಿಐಡಿ ಅಧಿಕಾರಿಗಳು ದಿನ ಕಳೆದಂತೆ ಬಂಧಿಸುವವರ ಸಂಖ್ಯೆ ಹೆಚ್ಚುತ್ತಲೇ ಇದೆ. ಪರಿಣಾಮ, ದಿನಕ್ಕೊಂದು ಹೊಸ ಹೊಸ ತಿರುವು ಪಡೆಯುತ್ತಾ ಕಾಣದ ಕೈಗಳು ಬಹಳಷ್ಟು ಇದರ ಹಿಂದೆ ಅಡಗಿವೆ ಎಂಬ ಅನುಮಾನ ಬಲವಾಗುತ್ತಿದೆ. ಯಾರೋ ಕೆಲ ಅಭ್ಯರ್ಥಿಗಳು ಮಾಡಿದ ತಪ್ಪಿಗಾಗಿ ಇಡೀ ನೇಮಕಾತಿ ಆಯ್ಕೆ ಪಟ್ಟಿಯನ್ನೇ ರದ್ದುಪಡಿಸಿ ಪ್ರಾಮಾಣಿಕ ಅಭ್ಯರ್ಥಿಗಳಿಗೆ ಸರ್ಕಾರ ಅನ್ಯಾಯ ಎಸಗುತ್ತಿರುವುದು ಖಂಡನೀಯ. ಸರ್ಕಾರವೇನೋ ನೇಮಕಾತಿಯನ್ನು ರದ್ದುಪಡಿಸಿದೆ ಸರಿ. ಆದರೆ ಮತ್ತೊಮ್ಮೆ ಪರೀಕ್ಷೆ ಬರೆದು ಆಯ್ಕೆಯಾಗುವುದು ಸುಲಭದ ಮಾತಲ್ಲ.

2011ನೇ ಸಾಲಿನ ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳ ನೇಮಕಾತಿಯಲ್ಲಿ ಅಕ್ರಮಗಳು ಕಂಡುಬಂದಿದ್ದವು. ಆದರೆ ಆಯ್ಕೆಯಾಗಿದ್ದ ಅಭ್ಯರ್ಥಿಗಳ ನೇಮಕಾತಿಗೆ ಎದುರಾಗಿದ್ದ ತೊಡರುಗಳನ್ನು ಸರ್ಕಾರ ನಿವಾರಿಸಿದೆ. ಅವರ ಹಾಗೆ ಇವರ ಮೇಲೆ ಯಾಕೆ ಮಾನವೀಯತೆ ತೋರಿಸುತ್ತಿಲ್ಲ? ಈ ಪ್ರಕರಣದ ತನಿಖೆ ಅಂತಿಮವಾದ ನಂತರ- ತಡವಾಗಿಯಾದರೂ ಸರಿಯೇ- ಹಗರಣದಲ್ಲಿ ಭಾಗಿಯಾಗಿರುವ ಅಭ್ಯರ್ಥಿಗಳನ್ನು ಬಿಟ್ಟು ಉಳಿದ ಪ್ರಾಮಾಣಿಕ ಅಭ್ಯರ್ಥಿಗಳಿಗಾದರೂ ಸರ್ಕಾರ ನ್ಯಾಯ ದೊರಕಿಸಿಕೊಡಬೇಕಾಗಿದೆ.

ಮುರುಗೇಶ ಡಿ., ದಾವಣಗೆರೆ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ರಾಷ್ಟ್ರಪತಿ ಚುನಾವಣೆ
ಎನ್‌ಡಿಎ ಗೆಲುವು ನಿಚ್ಚಳ



ಪ್ರಜಾವಾಣಿ ವಾರ್ತೆ

ರಾಷ್ಟ್ರಪತಿ ಹುದ್ದೆಗೆ ಇದೇ ಜುಲೈನಲ್ಲಿ ನಡೆಯಲಿರುವ ಚುನಾವಣೆಯಲ್ಲಿ ಸುಲಲಿತವಾಗಿ ಗೆಲ್ಲುವಷ್ಟು ಸಂಖ್ಯಾಬಲ ಬಿಜೆಪಿ ನೇತೃತ್ವದ ಎನ್‌ಡಿಎಗೆ ಇದೆ. ರಾಷ್ಟ್ರಪತಿ ಚುನಾವಣೆಯ ಮತಗಳ ಮೌಲ್ಯ 10.90 ಲಕ್ಷ. ಎನ್‌ಡಿಎ ಮತ್ತು ವಿರೋಧ ಪಕ್ಷಗಳ ನಡುವಣ ಮತಗಳ ಮೌಲ್ಯದ ಅಂತರ ಒಂದು ಲಕ್ಷಕ್ಕೂ ಅಧಿಕ ಇದೆ.

ಈಗಿನ ಲೆಕ್ಕಾಚಾರದ ಪ್ರಕಾರ, ಎನ್‌ಡಿಎ ಹೊಂದಿರುವ ಮತಗಳ ಮೌಲ್ಯ 5.42 ಲಕ್ಷ. ಬಿಜೆಪಿ ವಿರೋಧಿ ಪಕ್ಷಗಳ ಬಳಿ ಇರುವ ಮತಗಳ ಮೌಲ್ಯ 4.49 ಲಕ್ಷ. ವೈಎಸ್‌ಆರ್ ಕಾಂಗ್ರೆಸ್ ಮತ್ತು ಬಿಜೆಡಿ ಯಾವುದೇ ಗುಂಪಿನ ಜತೆ ಗುರುತಿಸಿಕೊಂಡಿಲ್ಲ. ಈ ಎರಡು ಪಕ್ಷಗಳು ಒಟ್ಟಾಗಿ ಹೊಂದಿರುವ ಮತಗಳ ಮೌಲ್ಯ 75,528. ಈ ಎರಡೂ ಪಕ್ಷಗಳು ಎನ್‌ಡಿಎ ಅಭ್ಯರ್ಥಿಗೆ ಮತ ನೀಡುವ ಸಾಧ್ಯತೆಯೇ ಹೆಚ್ಚು. ಹಾಗಾಗಿ, ಆಡಳಿತ ಪಕ್ಷಕ್ಕೆ ರಾಷ್ಟ್ರಪತಿ ಚುನಾವಣೆ ಗೆಲ್ಲುವುದು ಸಲೀಸಾಗಲಿದೆ.

ಚುನಾಯಿತ ಸಂಸದರು ಮತ್ತು ಚುನಾಯಿತ ಶಾಸಕರಿಗೆ ರಾಷ್ಟ್ರಪತಿ ಚುನಾವಣೆಯಲ್ಲಿ ಮತ ಚಲಾಯಿಸುವ ಹಕ್ಕು ಇದೆ. ಸಂಸದರ ಒಟ್ಟು ಸಂಖ್ಯೆ 776 ಮತ್ತು ಶಾಸಕರ ಒಟ್ಟು ಸಂಖ್ಯೆ 4,120. ಈ ಜನಪ್ರತಿನಿಧಿಗಳ ಮತಗಳ ಒಟ್ಟು ಮೌಲ್ಯ 10,98,903.

ಈ ಎಲ್ಲ ಮತಗಳು ಚಲಾವಣೆಯಾದರೆ ಗೆಲ್ಲುವ ಅಭ್ಯರ್ಥಿಗೆ 5,49,452 ಮತಗಳ ಅಗತ್ಯ ಇದೆ. ಸಂಸತ್ತಿನಲ್ಲಿ ಈಗ ಖಾಲಿ ಇರುವ ಸದಸ್ಯ ಸ್ಥಾನಗಳು 13. ಕೆಲವು ವಿಧಾನಸಭೆಗಳಲ್ಲಿಯೂ ಶಾಸಕ ಸ್ಥಾನಗಳು ಖಾಲಿ ಇವೆ. ರಾಷ್ಟ್ರಪತಿ ಹುದ್ದೆಗೆ ಚುನಾವಣೆ ನಡೆಯುವ ಮೊದಲೇ ಈ ಎಲ್ಲ ಸ್ಥಾನಗಳು ಭರ್ತಿ ಆದರೂ, ಗೆಲುವಿನ ಲೆಕ್ಕಾಚಾರದಲ್ಲಿ ಗಣನೀಯವಾದ ಬದಲಾವಣೆ ಏನೂ ಆಗುವುದಿಲ್ಲ.

ರಾಷ್ಟ್ರಪತಿ ಚುನಾವಣೆಗೆ ಸಂಬಂಧಿಸಿದ ಚಟುವಟಿಕೆಗಳು ಇನ್ನೂ ಬಿರುಸು ಪಡೆದುಕೊಂಡಿಲ್ಲ. ಗೆಲುವಿನ ಸಾಧ್ಯತೆ ಕ್ಷೀಣವಾಗಿರುವ ಕಾರಣ ವಿರೋಧ ಪಕ್ಷಗಳಲ್ಲಿ ಅಂತಹ ಹುರುಪು ಕಾಣಿಸಿಲ್ಲ. 'ರಾಷ್ಟ್ರಪತಿ ಚುನಾವಣೆ ಕುರಿತು ಈಗ ಏನನ್ನೂ ಹೇಳುವುದಿಲ್ಲ' ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಇತ್ತೀಚೆಗೆ ಹೇಳಿದ್ದರು. ವೈಎಸ್‌ಆರ್ ಕಾಂಗ್ರೆಸ್ ಮತ್ತು ಬಿಜೆಡಿ ಕೂಡ ವಿರೋಧ ಪಕ್ಷಗಳ ಒಮ್ಮತದ ಅಭ್ಯರ್ಥಿಗೆ ಮತ ಹಾಕಿದರೂ ಎನ್‌ಡಿಎ ಅಭ್ಯರ್ಥಿಯ ಗೆಲುವಿಗೆ ತೊಡಕಾಗುವುದಿಲ್ಲ. ಎನ್‌ಡಿಎ ಅಭ್ಯರ್ಥಿಗೆ ಮತ ಹಾಕದೇ ಇರಲು ಕಾರಣವೇನೂ ಇಲ್ಲ ಎಂದು ವೈಎಸ್‌ಆರ್ ಕಾಂಗ್ರೆಸ್ ಮುಖಂಡರೊಬ್ಬರು ಈಚೆಗೆ ಹೇಳಿದ್ದಾರೆ.

ಎನ್‌ಡಿಎ ಅಭ್ಯರ್ಥಿ ಯಾರು ಎಂಬುದು ವಿರೋಧ ಪಕ್ಷಗಳ ಒಗ್ಗಟ್ಟಿನಲ್ಲಿ ಬಿರುಕು ಮೂಡಿಸಬಹುದು. ಉದಾಹರಣೆಗೆ, ತಮಿಳು ವ್ಯಕ್ತಿಯೊಬ್ಬರನ್ನು ಅಭ್ಯರ್ಥಿಯಾಗಿ ಬಿಜೆಪಿ ಆಯ್ಕೆ ಮಾಡಿದರೆ, ಅಂತಹ ಅಭ್ಯರ್ಥಿಯ ವಿರುದ್ಧ ಮತ ಹಾಕುವುದು ಡಿಎಂಕೆಗೆ ಕಷ್ಟವಾಗಲಿದೆ. ಬಿಹಾರದವರಾದ ರಾಮನಾಥ ಕೋವಿಂದ್ ಅವರನ್ನು ಅಭ್ಯರ್ಥಿಯಾಗಿ 2017ರಲ್ಲಿ ಬಿಜೆಪಿ ಘೋಷಿಸಿತ್ತು. ಆಗ ಬಿಜೆಪಿ ವಿರೋಧಿ ಪಕ್ಷವಾಗಿದ್ದ ಜೆಡಿಯು, ಕೋವಿಂದ್ ಅವರಿಗೆ ಮತ ಹಾಕಿತ್ತು.


ವಿಧಾನಸಭೆಗಳಲ್ಲಿ ಎನ್‌ಡಿಎ 2.22 ಲಕ್ಷ ಮತ ಮೌಲ್ಯ ಹೊಂದಿದ್ದರೆ, ಎನ್‌ಡಿಎಯೇತರ ಪಕ್ಷಗಳ ಮತ ಮೌಲ್ಯ 2.77 ಲಕ್ಷ. ಆದರೆ, ಸಂಸತ್ತಿನಲ್ಲಿ ಎನ್‌ಡಿಎ ಮತ ಮೌಲ್ಯ 3.20 ಲಕ್ಷ ಇದ್ದರೆ, ವಿರೋಧ ಪಕ್ಷಗಳು 1.72 ಲಕ್ಷ ಮತ ಮೌಲ್ಯ ಹೊಂದಿವೆ.

ವಿಪಕ್ಷಗಳಿಗೆ ಒಟ್ಟಾಗುವ ಸವಾಲು


ರಾಷ್ಟ್ರಪತಿ ರಾಮನಾಥ ಕೋವಿಂದ್ ಅವರ ಅಧಿಕಾರಾವಧಿ ಜುಲೈ 25ಕ್ಕೆ ಕೊನೆಯಾಗಲಿದೆ. ಅದಕ್ಕೂ ಮುನ್ನವೇ ನೂತನ ರಾಷ್ಟ್ರಪತಿಯನ್ನು ಆಯ್ಕೆ ಮಾಡಬೇಕಿದೆ. ಕೋವಿಂದ್ ಅವರನ್ನೇ ಎರಡನೇ ಅವಧಿಗೆ ರಾಷ್ಟ್ರಪತಿಯಾಗಿ ಮುಂದುವರಿಸಲು ಅವಕಾಶವಿದೆ. ಆದರೆ, ಆ ಸಾಧ್ಯತೆಗಳು ತೀರಾ ಕಡಿಮೆ ಎಂಬುದನ್ನು ಸೂಚಿಸುತ್ತವೆ ಈಚಿನ ಬೆಳವಣಿಗೆಗಳು.

ದೆಹಲಿಯ ಲ್ಯೂಟೆನ್ಸ್ ಪ್ರದೇಶದ ನಂ.12 ಜನಪಥ ನಿವಾಸವನ್ನು ಲೋಕ ಜನಶಕ್ತಿ ಪಕ್ಷದ ಅಧ್ಯಕ್ಷರಾಗಿದ್ದ ರಾಮ ವಿಲಾಸ್ ಪಾಸ್ವಾನ್ ಅವರಿಗೆ ನೀಡಲಾಗಿತ್ತು. ಸುಮಾರು 30 ವರ್ಷ ಅವರು ಈ ನಿವಾಸದಲ್ಲಿ ನೆಲೆಸಿದ್ದರು. ಅವರ ನಿಧನದ ನಂತರ ಅವರ ಕುಟುಂಬವೂ ಇದೇ ನಿವಾಸದಲ್ಲಿ ನೆಲೆಸಿತ್ತು. ಈಚೆಗೆ ಅವರ ಕುಟುಂಬದವರನ್ನು ಈ ನಿವಾಸದಿಂದ ತೆರವು ಮಾಡಲಾಗಿದೆ. ಈ ನಿವಾಸವನ್ನು ಈಗ ನವೀಕರಿಸಲಾಗುತ್ತಿದೆ. ಅಧಿಕಾರಾವಧಿ ಮುಗಿದ ನಂತರ ಕೋವಿಂದ್ ಅವರಿಗೆ ಈ ನಿವಾಸವನ್ನು ನೀಡಲಾಗುವುದು ಎಂದು ಮೂಲಗಳು ಹೇಳಿವೆ. ಕೋವಿಂದ್ ಅವರನ್ನು ಎರಡನೇ ಅವಧಿಗೆ ಮುಂದುವರಿಸುವ ಉದ್ದೇಶ ಇಲ್ಲದೇ ಇರುವುದರಿಂದಲೇ, ಅವರ ನಿವೃತ್ತ ಜೀವನಕ್ಕಾಗಿ ಈ ನಿವಾಸವನ್ನು ನವೀಕರಿಸಲಾಗುತ್ತಿದೆ ಎಂದು ವಿಶ್ಲೇಷಿಸಲಾಗಿದೆ. ಈಗಿನ ಸಾಂಖ್ಯಿಕ ಬಲ ನೋಡಿದರೆ ಬಿಜೆಪಿ ನೇತೃತ್ವದ ಎನ್‌ಡಿಎ ಬೆಂಬಲಿತ ಅಭ್ಯರ್ಥಿಯೇ ಮುಂದಿನ ರಾಷ್ಟ್ರಪತಿಯಾಗುವುದು ನಿಚ್ಚಳವಾಗಿದೆ. ಆದರೆ ಯಾರನ್ನು ಆಯ್ಕೆ ಮಾಡಬೇಕು ಎಂಬುದರ ಚರ್ಚೆ ಬಿಜೆಪಿ ಪಾಳಯದಲ್ಲಿ ಇನ್ನೂ ಆರಂಭವಾಗಿಲ್ಲ.

ಎಲ್ಲಾ ವಿರೋಧ ಪಕ್ಷಗಳು ಒಟ್ಟಾದರೂ, ಅವು ಎನ್‌ಡಿಎಯ ಬಲವನ್ನು ಮೀರುವುದು ಸಾಧ್ಯವಿಲ್ಲ. ಆದರೆ, 2024ರ ಚುನಾವಣೆಯಲ್ಲಿ ವಿರೋಧ ಪಕ್ಷಗಳ ಒಕ್ಕೂಟ ರಚನೆಗೆ ರಾಷ್ಟ್ರಪತಿ ಚುನಾವಣೆಯು ಒಂದು ಮಹತ್ವದ ವೇದಿಕೆಯಾಗಲಿದೆ. ಈ ಚುನಾವಣೆಯಲ್ಲಿ ವಿರೋಧ ಪಕ್ಷಗಳು ಒಟ್ಟಾಗುವುದಾದರೆ, 2024ರ ಚುನಾವಣೆಗೆ ಒಕ್ಕೂಟ ರಚಿಸಿಕೊಳ್ಳುವುದು ವಿರೋಧ ಪಕ್ಷಗಳಿಗೆ ಸುಲಭವಾಗಲಿದೆ. ಹೀಗಾಗಿ ಇದು ವಿರೋಧ ಪಕ್ಷಗಳಿಗೆ ಮಹತ್ವದ ಚುನಾವಣೆಯಾಗಿದೆ. ಎಲ್ಲಾ ವಿರೋಧ ಪಕ್ಷಗಳ ಒಮ್ಮತದ ಅಭ್ಯರ್ಥಿಯನ್ನು ರಾಷ್ಟ್ರಪತಿ ಚುನಾವಣೆ ಕಣಕ್ಕೆ ಇಳಿಸುವ ಪ್ರಸ್ತಾವವನ್ನು ಹಲವು ವಿರೋಧ ಪಕ್ಷಗಳು ಇರಿಸಿವೆ. ಆದರೆ, ಎಲ್ಲಾ ವಿರೋಧ ಪಕ್ಷಗಳು ಇನ್ನೂ ಒಟ್ಟಿಗೆ ಕೂತು ತಮ್ಮ ಹೋರಾಟದ ದಿಕ್ಕನ್ನು ನಿರ್ಧರಿಸಿಲ್ಲ.



ರಾಜ್ಯವಾರು ಮತ



ರಾಜ್ಯ	ರಾಜ್ಯಗಳ ಮತಮೌಲ್ಯ	ಎನ್‌ಡಿಎ ಮತಗಳು	ಎನ್‌ಡಿಎ ವಿರೋಧಿ ಮತಗಳು
ಹಿಮಾಚಲ ಪ್ರದೇಶ	51	2193	1275
ದೆಹಲಿ	58	464	3538
ಹರಿಯಾಣ	112	6272	3808
ಉತ್ತರಾಖಂಡ	64	3136	1344
ಸಿಕ್ಕಿಂ	7	217	7
ಮೇಘಾಲಯ	17	782	238
ಉತ್ತರ ಪ್ರದೇಶ	208	57200	26624
ಬಿಹಾರ	173	21971	19895
ಅಸ್ಸಾಂ	116	9048	5104
ಅರುಣಾಚಲ ಪ್ರದೇಶ	8	440	40
ಪಂಜಾಬ್	116	232	13340
ರಾಜಸ್ಥಾನ	129	9159	16641
ನಾಗಾಲ್ಯಾಂಡ್	9	540	0
ಗುಜರಾತ್	147	16317	9996
ಮಧ್ಯಪ್ರದೇಶ	131	17161	12969
ಮಣಿಪುರ	18	990	90
ಛತ್ತಿಸಗಡ	129	1806	9675
ತ್ರಿಪುರಾ	26	1040	390
ಪಶ್ಚಿಮ ಬಂಗಾಳ	151	10570	33522
ಮಿಜೋರಾಂ	8	280	40
ಮಹಾರಾಷ್ಟ್ರ	175	19950	30275
ಗೋವಾ	20	500	300
ಒಡಿಶಾ	149	3427	1490
ಜಾರ್ಖಂಡ್	176	5280	8976
ಕರ್ನಾಟಕ	131	15982	13362
ಕೇರಳ	152	0	21280
ತಮಿಳುನಾಡು	176	13200	27984
ಪುದುಚೇರಿ	16	352	128
ಆಂಧ್ರಪ್ರದೇಶ	159	3816	0
ತೆಲಂಗಾಣ	132	396	15312

ಮತಮೌಲ್ಯ

ರಾಷ್ಟ್ರಪತಿ ಚುನಾವಣಾ ಪ್ರಕ್ರಿಯೆಯು ಲೋಕಸಭೆ ಅಥವಾ ವಿಧಾನಸಭೆ ಚುನಾವಣೆಗಿಂತ ಸ್ವಲ್ಪ ಭಿನ್ನವಾಗಿರುತ್ತದೆ.

ಈ ಪ್ರಕ್ರಿಯೆಯಲ್ಲಿ, ಲೋಕಸಭೆ ಮತ್ತು ರಾಜ್ಯಸಭೆಯ ಚುನಾಯಿತ ಪ್ರತಿನಿಧಿಗಳು ಹಾಗೂ ಎಲ್ಲ ರಾಜ್ಯಗಳ ವಿಧಾನಸಭೆಗಳ ಸದಸ್ಯರು ರಾಷ್ಟ್ರಪತಿ ಚುನಾವಣೆಯ ಮತದಾರರಾಗಿರುತ್ತಾರೆ. ಆದರೆ, ರಾಷ್ಟ್ರಪತಿ ಅವರು ನಾಮನಿರ್ದೇಶನ ಮಾಡಿದ ರಾಜ್ಯಸಭೆಯ ಸದಸ್ಯರಿಗೆ ಮತದಾನದ ಹಕ್ಕು ಇರುವುದಿಲ್ಲ. ಒಬ್ಬ ಜನಪ್ರತಿನಿಧಿ ಚಲಾಯಿಸುವ ಮತವನ್ನು ಒಂದು ಮತ ಎಂದು ಪರಿಗಣಿಸಲಾಗುವುದಿಲ್ಲ. ಬದಲಾಗಿ, ಆಯಾ ರಾಜ್ಯಗಳ ಜನಸಂಖ್ಯೆಯ ಆಧಾರದ ಮೇಲೆ ಅಲ್ಲಿನ ಶಾಸಕನ ಮತಮೌಲ್ಯ ನಿರ್ಧಾರವಾಗುತ್ತದೆ.

ಉದಾಹರಣೆಗೆ, ಕರ್ನಾಟಕದ ಜನಸಂಖ್ಯೆಯ ಅನುಸಾರ ರಾಜ್ಯದ ವಿಧಾನಸಭೆಯ ಒಬ್ಬ ಸದಸ್ಯ ಚಲಾಯಿಸುವ ಮತವು 131 ಮತ ಮೌಲ್ಯ ಹೊಂದಿರುತ್ತದೆ. ಆದರೆ ಕರ್ನಾಟಕಕ್ಕಿಂತ ಹೆಚ್ಚು ಜನಸಂಖ್ಯೆ ಹೊಂದಿರುವ ಉತ್ತರ ಪ್ರದೇಶದ ಪ್ರತಿಯೊಬ್ಬ ಶಾಸಕನ ಮತಮೌಲ್ಯವು 208 ಆಗಿರುತ್ತದೆ. ಚಿಕ್ಕ ರಾಜ್ಯವಾದ ಸಿಕ್ಕಿಂನ ಪ್ರತೀ ಶಾಸಕನ ಮತಮೌಲ್ಯ 7 ಎಂದು ನಿಗದಿಗೊಳಿಸಲಾಗಿದೆ. ಹೀಗೆ ಲೆಕ್ಕಾಚಾರ ಹಾಕಿದಾಗ, ಒಂದು ರಾಜ್ಯದ ಶಾಸಕನ ಮತಮೌಲ್ಯಕ್ಕೂ ಮತ್ತೊಂದು ರಾಜ್ಯದ ಶಾಸಕನ ಮತಮೌಲ್ಯಕ್ಕೂ ವ್ಯತ್ಯಾಸ ಇರುತ್ತದೆ. ಈ ಪ್ರಕಾರ, ಕರ್ನಾಟಕವು 29,344 (ಪ್ರತೀ ಶಾಸಕನ ಮತಮೌಲ್ಯ 131X224 ಶಾಸಕರು) ಮತಮೌಲ್ಯ ಹೊಂದಿದೆ. ಆದರೆ ಎಲ್ಲ ಸಂಸತ್ ಸದಸ್ಯರಿಗೆ ಒಂದೇ ಮತಮೌಲ್ಯ ಗೊತ್ತುಪಡಿಸಲಾಗಿದೆ. ಲೋಕಸಭೆ ಅಥವಾ ರಾಜ್ಯಸಭೆಗೆ ಆಯ್ಕೆಯಾಗಿರುವ ಪ್ರತೀ ಸದಸ್ಯನ ಮತಮೌಲ್ಯವನ್ನು 708 ಎಂದು ನಿರ್ಧರಿಸಲಾಗಿದೆ.

ಪ್ರಾಶಸ್ತ್ಯ: ಮತಪತ್ರಗಳ ಮೂಲಕ (ಬ್ಯಾಲೆಟ್ ಪೇಪರ್) ಚುನಾವಣೆ ನಡೆಯುತ್ತದೆ. ಮತದಾರರು (ಸಂಸದರು ಮತ್ತು ಶಾಸಕರು) ತಮಗೆ ನೀಡಲಾದ ಮತಪತ್ರದಲ್ಲಿ ಚುನಾವಣೆಗೆ ಸ್ಪರ್ಧಿಸಿರುವ ಅಭ್ಯರ್ಥಿಗಳ ಪೈಕಿ ತಮ್ಮ ಆದ್ಯತೆ ಯಾರು ಎಂದು ಗುರುತು ಹಾಕಬೇಕು. ಸಂಸತ್ ಸದಸ್ಯರಿಗೆ ಹಸಿರು, ಶಾಸಕರಿಗೆ ಗುಲಾಬಿ ಬಣ್ಣದ ಮತಪತ್ರ ನೀಡಲಾಗುವುದು. ತಮ್ಮ ಮೊದಲ ಆಯ್ಕೆಯ ಅಭ್ಯರ್ಥಿಯ ಹೆಸರಿನ ಮುಂದೆ 1 ಎಂದೂ (ಮೊದಲ ಆಯ್ಕೆ), ಎರಡನೇ ಆಯ್ಕೆಯ ಅಭ್ಯರ್ಥಿಯ ಹೆಸರಿನ ಮುಂದೆ 2 ಎಂದೂ (ಎರಡನೇ ಆಯ್ಕೆ) ನಮೂದಿಸಬೇಕು. ಮತ ಎಣಿಕೆಯ ವೇಳೆ ಮೊದಲ ಪ್ರಾಶಸ್ತ್ಯದ ಮತಗಳನ್ನು ಪರಿಗಣಿಸಲಾಗುತ್ತದೆ.

ರಾಷ್ಟ್ರಪತಿ ಚುನಾವಣೆಯಲ್ಲಿ ಪಕ್ಷಗಳು ತಮ್ಮ ಸದಸ್ಯರಿಗೆ ವಿಪ್ ಜಾರಿ ಮಾಡಿ ಇಂಥವರಿಗೇ ಮತ ಹಾಕಿ ಎಂದು ಹೇಳುವಂತಿಲ್ಲ.

ಅರ್ಹತೆ: ರಾಷ್ಟ್ರಪತಿ ಆಗಲು ಬಯಸುವ ವ್ಯಕ್ತಿಯು ಭಾರತೀಯ ನಾಗರಿಕ ಆಗಿರಬೇಕು. 35 ವರ್ಷ ವಯಸ್ಸಾಗಿರಬೇಕು. ₹15 ಸಾವಿರ ಠೇವಣಿ ಇಡಬೇಕು. ಎಲ್ಲಕ್ಕಿಂತ ಮುಖ್ಯವಾಗಿ, ರಾಷ್ಟ್ರಪತಿ ಆಗಬಯಸುವ ಅಭ್ಯರ್ಥಿಯು ಸಂಸತ್ ಅಥವಾ ವಿಧಾನಸಭೆಯ 50 ಜನಪ್ರತಿನಿಧಿಗಳು ಬೆಂಬಲಿಸಿರುವ ಪತ್ರವನ್ನು ಸಲ್ಲಿಸಬೇಕು.

ವೇದವ್ಯಾಸರ ಶಿವಪುರಾಣಸಾರ



ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 111

ಮಗನ ದುರ್ಗುಣ ತಿಳಿದ ಯಜ್ಞದತ್ತ

ದಾರಿ ತಪ್ಪಿದ ಮಗ ಗುಣನಿಧಿಗೆ ತಾಯಿ ಬುದ್ಧಿಮಾತನ್ನು ಸಾಕಷ್ಟು ಹೇಳುತ್ತಾಳೆ. ಕೆಟ್ಟಜನರ ಸಹವಾಸ ಬಿಟ್ಟುಬಿಡು, ಒಳ್ಳೆಯ ಜನರ ಸಹವಾಸ ಮಾಡು, ಸದ್ವಿದ್ಯೆಗಳಲ್ಲಿ ಮನಸ್ಸನ್ನಿಡು, ಸಜ್ಜನರ ಆಚರಣೆಗಳನ್ನು ಅನುಸರಿಸು. ರೂಪದಲ್ಲಿ ನಿಮ್ಮ ತಂದೆಗೆ ಸರಿಹೋಲುವಂತೆಯೇ ಯಶಸ್ಸಿನಲ್ಲಿಯೂ, ಕುಲಶೀಲಗಳಲ್ಲಿಯೂ ಒಳ್ಳೆಯ ಕೀರ್ತಿ ಸಂಪಾದಿಸು. ಉತ್ತಮ ಕುಲದಲ್ಲಿ ಹುಟ್ಟಿ, ನೀಚ ಕೆಲಸ ಮಾಡಲು ನಿನಗೆ ನಾಚಿಕೆಯಾಗುವುದಿಲ್ಲವೇ? – ಹೀಗೆ ಕಟುಮಾತುಗಳಲ್ಲಿ ಹೇಳುತ್ತಾಳೆ.

ನಿನ್ನ ಕೆಟ್ಟ ನಡತೆಯನ್ನು ಬಿಟ್ಟುಬಿಡು. ಇಲ್ಲದಿದ್ದರೆ ನಾವೆಲ್ಲಾ ಸಮಾಜದಲ್ಲಿ ತಲೆತಗ್ಗಿಸುವಂತಾಗುತ್ತದೆ. ನಿನಗೂ ಹತ್ತೊಂತ್ತು ವರ್ಷಗಳು ತುಂಬಿದುವು. ನಿನ್ನ ಪತ್ನಿಗೂ ಹದಿನಾರು ವರ್ಷಗಳಾಯಿತು. ಸುಶೀಲಳಾದ ಅವಳನ್ನು ಪರಿಗ್ರಹಿಸು. ತಂದೆಯಲ್ಲಿ ಭಕ್ತಿಯಿಟ್ಟು ಗೌರವದಿಂದ ನಡೆ. ನಿನ್ನ ಮಾವನೂ ತಮ್ಮ ಗುಣಗಳಿಂದ, ನಡತೆಯಿಂದ ಎಲ್ಲೆಡೆ ಗೌರವಕ್ಕೆ ಪಾತ್ರರಾಗಿರುವರು. ಅವರ ಅಳಿಯ ಇಂಥ ಕೆಟ್ಟವನು ಅಂತ ಜನ ಆಡಿಕೊಳ್ಳದಂತೆ ಸರಿಯಾಗಿ ನಡೆದುಕೋ.

ನಿನ್ನ ಸೋದರಮಾವಂದಿರೆಲ್ಲರೂ ವಿದ್ಯೆಯಿಂದಲೂ ಶೀಲದಿಂದಲೂ ಮನೆತನದಿಂದಲೂ ತಮಗೆ ಸಮಾನರಾರೂ ಇಲ್ಲವೆಂಬಂತೆ ಬದುಕಿದವರು. ಅವರನ್ನು ನೋಡಿಯಾದರೂ ಉತ್ತಮ ನಡತೆ ಕಲಿಯಬಾರದೆ? ನೀನು ಅವರಿಗೂ ಹೆದರುವುದಿಲ್ಲವೇ? ಮಾತಾ-ಪಿತೃವಂಶಗಳೆರಡರಿಂದಲೂ ನೀನು ಶುದ್ಧನಾದವನಲ್ಲವೇ? ನೆರೆಹೊರೆಯ ಮನೆಗಳಲ್ಲಿರುವ ಹುಡುಗರನ್ನು ನೋಡು, ಅಷ್ಟೇಕೆ? ನಿಮ್ಮ ಮನೆಯಲ್ಲೇ ನಿಮ್ಮ ತಂದೆಯ ಬಳಿ ಓದುತ್ತಿರುವ ವಿನೀತರಾದ ಶಿಷ್ಯರನ್ನು ನೋಡು. ಅವರೆಲ್ಲಾ ಎಷ್ಟು ಒಳ್ಳೆಯ ಬುದ್ಧಿ ಕಲಿತು, ಒಳ್ಳೆಯ ಮಕ್ಕಳೆನಿಸಿಕೊಂಡಿದ್ದಾರೆ. ಅವರನ್ನು ನೋಡಿಯಾದರೂ ನಿನಗೆ ಬುದ್ಧಿ ಬರುವುದಿಲ್ಲವೇ?

ನಮ್ಮ ನಾಡಿನ ಅರಸರಿಗೇನಾದರೂ ನಿನ್ನ ಕೆಟ್ಟ ನಡತೆ ಗೊತ್ತಾದರೆ ನಿನ್ನ ತಂದೆಯ ಮೇಲಿನ ನಂಬುಗೆಯೆಲ್ಲವನ್ನೂ ಬಿಟ್ಟು, ಅವರ ಮಾಸಾಶನ ಮುಂತಾದ ಜೀವನಮಾರ್ಗವನ್ನೇ ಕಸಿದುಕೊಳ್ಳುತ್ತಾರೆ. ಈಗಲೂ ಜನರು ಇನ್ನೂ ಹುಡುಗತನವೆಂದು ನಿನ್ನ ಅವಿವೇಕ ವರ್ತನೆಯನ್ನು ಸಹಿಸಿಕೊಂಡಿದ್ದಾರೆ. ಮುಂದೆಯೂ ಹೀಗೆಯೇ ಇದ್ದರೆ ನಿನ್ನ ದೀಕ್ಷಿತತನವನ್ನೇ ಕಳೆದುಕೊಂಡು, ಜನರಿಂದ ಛೀ-ಥೂ ಅಂತ ಉಗಿಸಿಕೊಳ್ಳಬೇಕಾಗುತ್ತದೆ. ಸಿಕ್ಕಿದವರೆಲ್ಲರೂ, ಬಾಯಿಗೆ ಬಂದಂತೆ ನಿನ್ನ ತಂದೆಯನ್ನೂ ನನ್ನನ್ನೂ ಆಡಬಾರದ ಮಾತುಗಳನ್ನು ಆಡಿ ಹೀನಾಯವಾಗಿ ಮಾನ ಕಳೆಯುವರು.

ಶ್ರುತಿ-ಸ್ಮೃತಿ ವಿಹಿತವಾದ ಧರ್ಮಮಾರ್ಗದಲ್ಲೇ ನಡೆಯುವ ನಿನ್ನ ತಂದೆ ಸ್ವಲ್ಪವೂ ಪಾಪ ಮಾಡಿದವರಲ್ಲ. ಹೀಗಿದ್ದರೂ ನಿನ್ನಂತಹ ಕೆಟ್ಟ ಮಗ ನನ್ನ ಹೊಟ್ಟೆಯಲ್ಲಿ ಹುಟ್ಟಬೇಕೇ? ಅಯ್ಯೋ! ವಿಧಿಯೇ. ನಿನ್ನ ಬಲವೇ ಬಲ. ಅದನ್ನು ಮೀರಿದವರಾರು? – ಅಂತ ಆ ತಾಯಿ ರೋದಿಸುತ್ತಾ ಬುದ್ಧಿ ಹೇಳುತ್ತಿದ್ದರೂ ದುಷ್ಟ ಗುಣನಿಧಿ ತನ್ನ ಕೆಟ್ಟ ಚಾಳಿಯನ್ನು ಬಿಡಲಿಲ್ಲ. ಯಾವ ಉಪದೇಶವೂ ಅವನ ತಲೆಗೆ ಹಿಡಿಸದಷ್ಟರ ಮಟ್ಟಿಗೆ ದುರ್ವ್ಯಸನಗಳಲ್ಲಿ ಆಸಕ್ತನಾಗಿಬಿಟ್ಟಿದ್ದ.

ಬೇಟೆ, ಮದ್ಯ, ಪಿಸುಣತನ, ಸುಳ್ಳು, ಕಳ್ಳತನ, ಜೂಜು, ವೇಶ್ಯೆ ಸಹವಾಸಗಳಂಥ ದುರ್ವ್ಯಸನಗಳಿಗೆ ಸಿಲುಕಿದವರು ಒಳ್ಳೆಯ ಬುದ್ಧಿ ಕಲಿಯಲಾರರು. ಅದರಂತೆ ಕೆಟ್ಟ ಬುದ್ಧಿಯುಳ್ಳ ಗುಣನಿಧಿಗೆ ತಾಯಿ ಹಣ ಕೊಡದಿದ್ದಾಗ, ಮನೆಯಲ್ಲಿ ಕಣ್ಣಿಗೆ ಕಾಣುವ ವಸ್ತುಗಳೆಲ್ಲವನ್ನೂ ಕದ್ದೊಯ್ದು ಜೂಜಾಡಿ ಕಳೆಯುತ್ತಿದ್ದ. ಇದರಿಂದ ಆತನ ಮನೆಯಲ್ಲಿದ್ದ ಪಾತ್ರೆ-ಪದಾರ್ಥ, ಬಟ್ಟೆ-ಬರೆಗಳೆಲ್ಲವೂ ಜೂಜುಕೋರರ ಪಾಲಾಗುತ್ತಿದ್ದವು.

ಒಂದು ದಿನ ಮನೆಯಲ್ಲಿದ್ದ ತನ್ನ ತಂದೆಯ ಕೈಬೆರಳಿನ ಉಂಗುರವನ್ನು ಕದ್ದು ಜೂಜುಕೋರನೊಬ್ಬನ ಕೈಗೆ ಕೊಟ್ಟು ಜೂಜಾಡಿ ಸೋತ. ಯಜ್ಞದತ್ತದೀಕ್ಷಿತ ತನ್ನ ಕಳೆದುಹೋದ ಉಂಗುರ ಹುಡುಕುವಾಗ ಜೂಜುಕೋರನೊಬ್ಬನ ಕೈಲಿರುವುದನ್ನು ಅಕಸ್ಮಾತ್ತಾಗಿ ಕಂಡ. 'ನಿನಗೆ ಈ ಉಂಗುರ ಎಲ್ಲಿ ಸಿಕ್ಕಿತು' ಎಂದು ಯಜ್ಞದತ್ತ ಬಲವಂತಪಡಿಸಿ ಕೇಳಿದಾಗ ಆ ಜೂಜುಗಾರ, 'ಅಯ್ಯಾ ದೀಕ್ಷಿತರೆ! ನನ್ನನ್ನೇಕೆ ವ್ಯರ್ಥವಾಗಿ ಕೇಳಿ ಪೀಡಿಸುವೆ? ನಿನ್ನ ಮಗನೇ ಕದ್ದು ನನಗೆ ಕೊಟ್ಟಿದ್ದಾನೆ. ಅಲ್ಲದೆ ನಿನ್ನೆ ತನ್ನ ತಾಯಿಯ ಸೀರೆಯನ್ನೂ ಜೂಜಿನಲ್ಲಿ ಸೋತು ನನಗೆ ಕೊಟ್ಟು ಹೋಗಿದ್ದಾನೆ' ಎಂದಾಗ ಯಜ್ಞದತ್ತನಿಗೆ ಆಘಾತವಾಗುತ್ತದೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ
9606038256

ಯುವಕನೊಬ್ಬ ಯುವತಿಯನ್ನು ಚಾಕುವಿನಿಂದ ಚುಚ್ಚಿ ಬೀದಿಯಲ್ಲಿ ಸಾಯಿಸಿದ ವಿಡಿಯೊವೊಂದು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಮುರ್ಷಿದಾಬಾದ್‌ನ ಬಹರಾಮ್‌ಪುರದಲ್ಲಿ ನಡೆದ ಈ ಘಟನೆ 'ಲವ್' ಜಿಹಾದ್'ಗೆ ಸಂಬಂಧಿಸಿದ್ದು ಎಂಬುದಾಗಿ ಚರ್ಚೆಯಾಗುತ್ತಿದೆ. 'ಆರೋಪಿ ಯುವಕ ಮುಸ್ಲಿಂ ಧರ್ಮದವನಾಗಿದ್ದು, ಮತಾಂತರ ಆಗಲು ಒಪ್ಪದ ಹಿಂದೂ ಯುವತಿಯನ್ನು ಹತ್ಯೆ ಮಾಡಿದ್ದಾನೆ' ಎನ್ನಲಾಗಿದೆ. 'ಇಸ್ಲಾಮಿಕ್ ಸ್ಟೇಟ್ ಬಂಗಾಳಕ್ಕೆ ಸ್ವಾಗತ' ಎಂಬುದಾಗಿ ಕೆಲವರು ಟ್ವಿಟರ್‌ನಲ್ಲಿ ಉಲ್ಲೇಖಿಸಿದ್ದಾರೆ.



ಈ ಘಟನೆಯ ಬಗ್ಗೆ ಎಬಿಪಿ ಮೊದಲಾದ ಸುದ್ದಿವಾಹಿನಿಗಳು ವರದಿ ಮಾಡಿದ್ದು, ಲವ್ ಜಿಹಾದ್‌ಗೂ ಈ ಘಟನೆಗೂ ಸಂಬಂಧವಿಲ್ಲ ಎಂದು ಇಂಡಿಯಾಟುಡೇ ವರದಿ ಮಾಡಿದೆ. ಆರೋಪಿ ಹಾಗೂ ಸಂತ್ರಸ್ತೆ ಇಬ್ಬರೂ ಹಿಂದೂ ಧರ್ಮಕ್ಕೆ ಸೇರಿದವರು ಎಂದು ತಿಳಿದುಬಂದಿದೆ. ಆರೋಪಿ ಸುಶಾಂತ್ ಚೌಧರಿಯನ್ನು ಪೊಲೀಸರು ಬಂಧಿಸಿದ್ದಾರೆ. 'ಯುವತಿ ನನ್ನೊಂದಿಗೆ ಸರಿಯಾಗಿ ನಡೆದುಕೊಳ್ಳುತ್ತಿರಲಿಲ್ಲ' ಎಂದು ಆರೋಪಿ ಹೇಳಿದ್ದಾನೆ. ಮುರ್ಷಿದಾಬಾದ್ ಎಸ್‌ಪಿ ನಡೆಸಿದ ಸುದ್ದಿಗೋಷ್ಠಿಯಲ್ಲಿ ಲವ್ ಜಿಹಾದ್ ಅಂಶವನ್ನು ಪ್ರಸ್ತಾಪಿಸಿಲ್ಲ.

ಗುಂಡಣ್ಣ



ಬೆರಗಿನ ಬೆಳಕು



ಗುರುರಾಜ ಕರಜಗಿ

ಲೋಕದಿಂದ ನಿರ್ಲೋಕ

ಲೋಕಜೀವನದೆ ಮಾನಸದ ಪರಿಪಾಕವಾ |
ಪಾಕದಿಂ ಮತಿಶುದ್ಧಿಯದರಿನೊಳದೃಷ್ಟಿ ||
ಸಾಕಲ್ಯದಾತ್ಮಸಂದರ್ಶನಕೆ ಕರಣವದು |
ಲೋಕದಿಂದ ನಿರ್ಲೋಕ – ಮಂಕುತಿಮ್ಮ
|| 620 ||

ಪದ-ಅರ್ಥ: ಮಾನಸದ = ಮನಸ್ಸಿನ, ಮತಿಶುದ್ಧಿಯದರಿನೊಳದೃಷ್ಟಿ = ಮತಿಶುದ್ಧಿ (ಬುದ್ಧಿಯ ಶುದ್ಧಿ) + ಅದರಿನ್ (ಅದರಿಂದ) + ಒಳದೃಷ್ಟಿ, ಸಾಕಲ್ಯದಾತ್ಮಸಂದರ್ಶನಕೆ = ಸಾಕಲ್ಯದ (ಪರಿಪೂರ್ಣದ) + ಆತ್ಮಸಂದರ್ಶನಕೆ, ಕರಣ = ಸಾಧನ, ನಿರ್ಲೋಕ = ಲೋಕನಿವೃತ್ತಿ.

ವಾಚ್ಯಾರ್ಥ: ಲೋಕಜೀವನದಿಂದ ಮನಸ್ಸಿನ ಪರಿಪಾಕ. ಆ ಪರಿಪಾಕದಿಂದ ಬುದ್ಧಿಯ ಶುದ್ಧತೆ. ಅದರಿಂದ ಅಂತರ್‌ದೃಷ್ಟಿಯ ಮೊಳೆತ. ಅದೇ ಪರಿಪೂರ್ಣ ಆತ್ಮದರ್ಶನಕ್ಕೆ ಸಾಧನ. ಲೋಕಸಹವಾಸದಿಂದಲೇ ಲೋಕನಿವೃತ್ತಿ ಸಾಧ್ಯ.

ವಿವರಣೆ: ಈ ಪ್ರಪಂಚದಲ್ಲಿ ಕೇವಲ ನಮ್ಮದೇ ಆದದ್ದು ಎನ್ನುವಂಥದ್ದು ಯಾವುದೂ ಇಲ್ಲ. ನಮ್ಮ ದೇಹ ಪಂಚಭೂತಗಳಿಂದ ಆದದ್ದು, ಬುದ್ಧಿ, ವಿದ್ಯೆಗಳು ಪ್ರಕೃತಿದತ್ತವಾದವು, ನಮ್ಮ ಭಾವನೆಗಳು, ಕ್ರಿಯೆಗಳು ಮತ್ತು ಶಕ್ತಿಸೌಂದರ್ಯಗಳೆಲ್ಲ ನಿಸರ್ಗದ ಕೊಡುಗೆ. ಈ ಎಲ್ಲ ಕೊಡುಗೆಗಳನ್ನು ಪಡೆದು ಬೆಳೆದ ಅಹಂಕಾರ ಕೂಡ ಸೃಷ್ಟಿಯಾದದ್ದೇ. ಅದರ ನಾಶಕ್ಕೆ ಕೂಡ ಲೋಕದರ್ಶನ ಬೇಕು.

ಅಷ್ಟಾವಕ್ರ ಕಹೋಳ ಋಷಿಯ ಮಗ, ಶ್ವೇತಕೇತುವಿನ ಸೋದರಳಿಯ. ತಂದೆಯ ಶಾಪದಿಂದಲೇ ದೇಹ ಸೊಟ್ಟಸೊಟ್ಟಾಗಿ ಬೆಳೆದು ಅಷ್ಟಾವಕ್ರನಾಗಿದ್ದ. ಅವನು ಮಹಾಜ್ಞಾನಿ. ಅವನನ್ನು ಜನಕಮಹಾರಾಜ ಗುರುವೆಂದು ಬಗೆದಿದ್ದ. ಒಮ್ಮೆ ದರ್ಬಾರಿಗೆ ಅಷ್ಟಾವಕ್ರ ಬಂದ. ಅವನ ನಡಿಗೆ, ಸೊಟ್ಟ ದೇಹ ನೋಡಿ ಸಭಾಸದರು ಜೋರಾಗಿ ನಕ್ಕರು. ಜನಕರಾಜನಿಗೆ ಮುಜುಗರ. ಮಹರ್ಷಿಗಳು ಏನೆಂದುಕೊಂಡಾರೋ ಎಂಬ ಚಿಂತೆ. ಆಶ್ಚರ್ಯ! ಅಷ್ಟಾವಕ್ರ ಮತ್ತೂ ಜೋರಾಗಿ ನಕ್ಕ. ಹಿರಿಯರೊಬ್ಬರು ಕೇಳಿದರು, "ಸಭಾಸದರು ನಕ್ಕದ್ದಕ್ಕೆ ಕಾರಣವಿದೆ. ಆದರೆ ತಾವು ನಕ್ಕದ್ದೇಕೆ?" ಅಷ್ಟಾವಕ್ರ ಹೇಳಿದ, "ಅವರು ಯಾವ ಕಾರಣಕ್ಕೆ ನಕ್ಕರೋ, ಅದೇ ಕಾರಣಕ್ಕೆ ನಾನೂ ನಗುತ್ತಿದ್ದೇನೆ. ಅವರು ನನ್ನ ವಕ್ರ ದೇಹವನ್ನು ನೋಡಿ ನಕ್ಕರು. ಆದರೆ ಅವರು ನನ್ನ ದೇಹವನ್ನೇ ನಾನು ಎಂದು ತಿಳಿದದ್ದಕ್ಕೆ ನಗುತ್ತಿದ್ದೇನೆ. ವಿದ್ವಾಂಸರ ಅಜ್ಞಾನಕ್ಕೆ ನಗೆ ಬರುತ್ತದೆ!" ನಮ್ಮ ಬದುಕೂ ಹಾಗೆಯೇ ಅಲ್ಲವೆ? ಕೆಲವರು ನಮ್ಮನ್ನು ನೋಡಿ ನಗುತ್ತಾರೆ, ಕೆಲವರು ಹೊಗಳುತ್ತಾರೆ, ಮತ್ತೆ ಕೆಲವರು ಟೀಕೆ ಮಾಡಿ ಮನಸ್ಸಿಗೆ ಚುಚ್ಚುತ್ತಾರೆ. ಅದರಿಂದ ಮನಸ್ಸಿಗೆ ಹಿಗ್ಗು, ತಾಪ ಆಗುತ್ತವೆ. ಜೀವಕ್ಕೆ ನೋವು, ನಲಿವುಗಳು ಬರುವುದೇ ಹೀಗೆ. ಹಾಗೆಂದರೆ ಪ್ರತಿಯೊಂದು ಜೀವ ಸಂಘಾತಾವಲಂಬಿ. ನಾವು ಸರ್ವತಂತ್ರ ಸ್ವತಂತ್ರರಲ್ಲ. ಸಂಘಾತವನ್ನು ತೆಗೆದುಹಾಕಿದರೆ ನಾವೂ ಇರುವುದಿಲ್ಲ. ಆಗ ನಾನು, ನೀನುಗಳು ಅಳಿದು ವಿಮಲ ಚೇತನದ ಪರಮಮೂಲದ ದರ್ಶನವಾದೀತು.

ಅಂದರೆ ನಮ್ಮ ಅಹಂಕಾರಗಳು, ನಮ್ಮ ಬಗ್ಗೆಯೇ ನಮಗಿರುವ ಅತಿರಂಜಿತ ಕಲ್ಪನೆಗಳು ಕರಗಿ, ವಾಸ್ತವ ಮುಂದೆ ನಿಲ್ಲುವುದು ಲೋಕವ್ಯವಹಾರದಲ್ಲಿಯೇ: ಕಗ್ಗ ಇದೇ ಮಾತನ್ನು ಸ್ಪಷ್ಟಪಡಿಸುತ್ತದೆ. ಲೋಕವ್ಯವಹಾರದಲ್ಲಿ, ಜನರ ತಳ್ಳಾಟ, ನುಗ್ಗಾಟ, ಒಡೆದಾಟದಲ್ಲಿಯೇ ಮನಸ್ಸು ಪಾಕವಾಗುವುದು. ಹಾಗೆ ಮನಸ್ಸು ಪಾಕವಾದಾಗಲೇ ಅದು ಬಾಹ್ಯದಿಂದ ಅಂತರಂಗಕ್ಕೆ ಹೊರಳುವುದು. ವಿಮಲ ಚೇತನದ ಸಂಪೂರ್ಣ ದರ್ಶನಕ್ಕೆ ಈ ಅಂತರೀಕ್ಷಣೆಯೇ ಕಾರಣ, ಅದರಿಂದಲೇ ಲೋಕದಿಂದ ಮುಕ್ತಿ. ಹಾಗಾಗಿ ಲೋಕಾನುಭವದಿಂದಲೇ ವಿಶ್ವಾತ್ಮದ ಅನುಭವ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಬುಧವಾರ ಮೇ 4, 2022

ಶ್ರೀ ಶುಭಕೃತ್ ನಾಮ ಸಂವತ್ಸರ ಉತ್ತರಾಯಣ - ವಸಂತ ಋತು ತಿಥಿ: ವೈಶಾಖ ಶುಕ್ಲ ತೃತೀಯ ಗಂ. 07-33 ನಕ್ಷತ್ರ: ಮೃಗಶಿರ ಅಹೋರಾತ್ರ ಯೋಗ: ಅತಿಗಂಡ ಗಂ. 17-06, **ಕರಣ:** ಗರಜೆ ಗಂ. 07-33, ಮೇಷ ಮಾಸದ 20 ನೇ ದಿನ.
ರಾಹುಕಾಲ : ಮಧ್ಯಾಹ್ನ 12:00 – 01:30
ಸೂರ್ಯೋದಯ : 06-12 ಸೂರ್ಯಾಸ್ತ : 06-43, ಮುಸ್ಲಿಂ ದಿನಾಂಕ : 02 ಶವ್ವಾಲ್
ದಿನ ವಿಶೇಷ : ಅಕ್ಷಯ ತೃತೀಯ (ಬಂಗಾಳ), ವಾರ್ಸಿತಾಪ ಸಮಾಪನ (ಜೈನ್)
ಅದೃಷ್ಟ ಸಂಖ್ಯೆ : 1, 6

ಮೇಷ: ಈ ದಿನ ನಿಮ್ಮ ಕೆಲಸಕಾರ್ಯಗಳಿಗೆ ಅಪೇಕ್ಷಿಸಿದ ಬೆಂಬಲ ನಿಮಗೆ ದೊರೆಯಲಿದೆ. ಧೈರ್ಯಂ ಸರ್ವತ್ರ ಸಾಧನಂ ಎನ್ನುವ ವಾಕ್ಯದಂತೆ ಹೆದರದೆ ಧೈರ್ಯದಿಂದ ಮುನ್ನುಗ್ಗಿ.

ವೃಷಭ: ಜೀವನದ ಬಗ್ಗೆ ನಿರುತ್ಸಾಹವನ್ನು ತಾಳದಿರಿ. ಈ ದಿನದ ನಿಮ್ಮ ಲೇವಾದೇವಿ ವ್ಯವಹಾರದಲ್ಲಿ ಭಾಗಶಃ ಅನುಕೂಲವಿದೆ. ಶ್ರೀ ಆಂಜನೇಯನ ದರ್ಶನದಿಂದ ಎಲ್ಲಾ ಕಾರ್ಯಗಳು ನೆರವೇರುವುದು.

ಮಿಥುನ: ಮತ್ತೊಬ್ಬರನ್ನು ಗೌರವಿಸುವುದರಿಂದ ನಿಮ್ಮ ಗೌರವ ಕೂಡ ಹೆಚ್ಚುತ್ತದೆ ಎಂಬುವುದನ್ನು ಮರೆಯದಿರಿ. ಚರ್ಚೆ ಹಾಗೂ ವ್ಯಾಪಾರ ವ್ಯವಹಾರಗಳಲ್ಲಿ ಬಹಳ ಜಾಗರೂಕತೆಯನ್ನು ವಹಿಸಿರಿ.

ಕರ್ಕಾಟಕ: ನಿಮ್ಮನ್ನು ಕಂಡು ಅಸೂಯೆ ಪಡುವ ಸಹೋದ್ಯೋಗಿಗಳು ಹಾಗೂ ಮೇಲಧಿಕಾರಿಗಳೊಂದಿಗೆ ಜಾಣ್ಮೆಯಿಂದ ವ್ಯವಹರಿಸಿ. ಮಧ್ಯಮ ಮಟ್ಟದ ಜೀವನಕ್ಕೆ ಹಣಕಾಸಿನ ತೊಂದರೆ ಕಾಣುವುದಿಲ್ಲ.

ಸಿಂಹ: ನಿಮ್ಮ ಹೆಚ್ಚಿನ ಎಲ್ಲಾ ಕೆಲಸಗಳು ಸಿಬ್ಬಂದಿ ವರ್ಗದವರ ಹೆಚ್ಚಿನ ಸಹಕಾರದಿಂದ ಈ ದಿನದಲ್ಲಿ ವ್ಯವಸ್ಥಿತವಾಗಿ ಕೈಗೂಡಲಿದೆ. ಸ್ಥಿರಾಸ್ತಿ ಸಂಬಂಧಿಸಿದ ವ್ಯವಹಾರಗಳಿಂದ ಲಾಭವಿರುವುದು.

ಕನ್ಯಾ: ಖಾಸಗಿ ಸಂಸ್ಥೆಗಳ ಉದ್ಯೋಗಸ್ಥರಿಗೆ ಉನ್ನತ ಸ್ಥಾನಮಾನ ಪ್ರಾಪ್ತಿಯಾಗಲಿದೆ. ಉದ್ಯಮಿ ಹಾಗೂ ಅಧಿಕಾರಿಗಳಿಗೆ ಎಲ್ಲವೂ ಅವರ ನಿಯಂತ್ರಣದಲ್ಲಿ ಇರುವುದು. ಷೇರು ವ್ಯಾಪಾರವು ಇಂದು ಅದೃಷ್ಟದಾಯಕವಾಗಿರುತ್ತದೆ.

ತುಲಾ: ಕಾಗದದ ರಫ್ತು ಉದ್ಯಮದವರಿಗೆ ಉತ್ತಮ ಆದಾಯವಿರುವುದು. ಗುತ್ತಿಗೆ ಕೆಲಸದ ಬಾಕಿ ಹಣವು ಇಂದು ಸಂದಾಯವಾಗುತ್ತದೆ. ಹೊಸ ಅಧಿಕಾರಿಗಳನ್ನು ಬೇಟಿ ಮಾಡಲು ಒಳ್ಳೆಯ ದಿನವಾಗಿದೆ. ಬಿಳಿ ಬಣ್ಣ ಶುಭತರಲಿದೆ.

ವೃಶ್ಚಿಕ: ಯಾವುದೇ ರೀತಿಯ ವಾದ ವಿವಾದಗಳು, ಅಸಮಾಧಾನವು ನಿಮ್ಮ ಕಾರ್ಯಕ್ಕೆ ಅಡ್ಡಿ ಮಾಡದಂತೆ ಗಮನಹರಿಸಿ. ಸಮಾಜದಲ್ಲಿನ ನಿಮ್ಮ ಮುಂದಾಳತ್ವವನ್ನು ಮೆಚ್ಚಿ ಜನರು, ನಿಮ್ಮ ಸಲಹೆಗಳನ್ನು ಕೇಳುವಂತಾಗಲಿದೆ.

ಧನು: ಆಭರಣ ಮಾರಾಟಗಾರರಿಗೆ ಒದಗುವ ಅವಕಾಶಗಳ ಹೆಚ್ಚಳದಿಂದ ಕೆಲಸವಿರುವುದು. ಶತ್ರುಗಳ ಬಲೆಗೆ ಬೀಳದಂತೆ ಈ ದಿನ ನೀವು ಎಚ್ಚರವಹಿಸಬೇಕು.

ಮಕರ: ಯಶಸ್ಸಿನ ಹೊಸ ಮಾರ್ಗಗಳು ನಿಮಗಿಂದು ಅರಿವಾಗುವುದು. ಸಂಘ ಸಂಸ್ಥೆಗಳ ವಿಚಾರವನ್ನು ಮುಕ್ತವಾಗಿ ಚರ್ಚಿಸಿ ನಂತರದಲ್ಲಿ ಕೆಲಸಗಳನ್ನು ಕಾರ್ಯರೂಪಕ್ಕೆ ತರುವುದು ಉತ್ತಮ.

ಕುಂಭ: ವ್ಯಾಪಾರ ವ್ಯವಹಾರದಲ್ಲಿ ನಿರೀಕ್ಷಿಸಿದ ಲಾಭ ಪಡೆಯಲು ಪರಿಶ್ರಮದ ಜೊತೆಯಲ್ಲಿ ಬುದ್ಧಿವಂತಿಕೆಯೂ ಬಹುಮುಖ್ಯವಾಗುವುದೆಂದು ತಿಳಿದುಬರುವುದು.


ಮೀನ: ಉತ್ತಮ ಒಡನಾಟ ಹೊಂದಿರುವ ವ್ಯಕ್ತಿಗಳೊಂದಿಗೆ ನಿಮ್ಮ ವ್ಯಾವಹಾರಿಕವಾಗಿ ಲಾಭತರುವ ಆಲೋಚನೆಯನ್ನು ನೀವು ಹಂಚಿಕೊಳ್ಳುವುದರಿಂದ ವಿವಿಧ ರೀತಿಯಲ್ಲಿ ನಷ್ಟ ಆಗುವುದು.

ಪದಬಂಧ 4947

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಪರಿಹಾರವನ್ನು ಕಾಣದ ಸಮಸ್ಯೆ (4)
3.ಜೈನ ಅಥವಾ ಬೌದ್ಧ ಭಿಕ್ಷು (4)
5.ಮನೋಗತದಂತೆ ನೀಡಿರುವ ಓಟು (2)
6.ಈ ಪರಿ ಸಿಕ್ಕಿರುವ ಗುರುತು (4)
8.ಆಕಾಶದಲ್ಲಿ ಸಂಚರಿಸುವಂಥದ್ದು (2)
9.ಬೆಟ್ಟ ಇಲ್ಲಿ ಕಾಣುತ್ತಿದೆ (2)
10.ತರತರದ ಕಾಯಿಪಲ್ಲೆ (4)
12.ಸುತ್ತ ನೋಡುವಾಗ ಮಗ ಸಿಕ್ಕಿಹನಲ್ಲಾ! (2)
15.ಸುಮಾರು ಮೂರು ಮೈಲುಗಳ ಒಂದು ಅಳತೆ (4)
16.ದೇವಾಲಯದ ಸಭಾಮಂಟಪ (4)

ಮೇಲಿಂದ ಕೆಳಕ್ಕೆ
1.ಹಾವುಗಳ ಒಡೆಯ (2)
2.ಪ್ರತಿಭಾವಂತನ ಹತ್ತಿರ ಕಳೆದ ಪ್ರಾತಃಕಾಲ! (3)
3.ತರಿಯನ್ನು ತರಲು ತೋರಿದ ಆತುರ! (4)
4.ಗಣಿತ ನೋಡುತ್ತಲೇ ತಂಪಾಗು! (2)
5.ಮತದೊಳಗಿರುವ ಅಭಿಪ್ರಾಯ (4)
6.ಈ ಪರಿಯಾಗಿ ತಪ್ಪಿಸಿಕೊಳ್ಳುವಿಕೆ! (3)
7.ಈತ ಮೃತ್ಯುದೇವತೆಯ ಅಳು (4)
11.ಕಾಲುನಡಗೆಯಿಂದ ಹೋಗಲು ಇರುವ ರಸ್ತೆ (4)
12.ಒಳ್ಳೆಯ ಅದೃಷ್ಟ (3)
13.ಸಂದೇಹದಿಂದಲೇ ನೋಡಿರುವ ಕಾಯ! (2)
14.ಬೀಗರು ಹಾಕಿರುವ ಕೀಲಿ! (2)



4946ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಏಮಾರು 2.ಪಾದರಸ 4.ಪ್ರಲೋಭನ 6.ಸಂತೋಷ 7.ರಭಾ 9.ರಸಿಕ 11.ವರ 13.ಸಭಿಕ 14.ನಳಪಾಕ 16.ಭಕ್ತಿಮಾರ್ಗ 17.ಅರಳೆ
ಮೇಲಿಂದ ಕೆಳಕ್ಕೆ: 1.ಏಕಪ್ರಕಾರ 2.ಪಾಪ 3.ರಜತೋತ್ಸವ 5.ನಗರ 8.ಭಾವಾಭಿವ್ಯಕ್ತಿ 10.ಕವನ 12.ರಣಕಹಳೆ 15.ದುರ್ಗ

ಸುಡೊಕು 5333

4			9		1		3	
	9							4
8		3	4		5	9		
7								8
	8		1	6	2		9	
		9	7			2		
		8		1			4	
9	6	4	8		7	1		5
	1			9			8	

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5332 ಸುಡೊಕು

6	2	4	9	1	7	3	5	8
5	1	3	8	4	6	9	2	7
9	7	8	2	5	3	4	1	6
7	4	9	5	3	8	1	6	2
1	8	6	4	2	9	7	3	5
2	3	5	6	7	1	8	4	9
4	9	2	3	8	5	6	7	1
3	6	1	7	9	2	5	8	4
8	5	7	1	6	4	2	9	3

ಒಸಿಐ ವಿದ್ಯಾರ್ಥಿಗಳಿಗೆ ಸಿಇಟಿ ಅವಕಾಶ


ಬೆಂಗಳೂರು: 'ಸಾಗರೋತ್ತರ ಭಾರತೀಯ ನಾಗರಿಕ (ಒಸಿಐ) ಕಾರ್ಡ್ ಹೊಂದಿರುವ ವಿದ್ಯಾರ್ಥಿಗಳು 2022ರ ಎಂಜಿನಿಯರಿಂಗ್ ಕೋರ್ಸ್‌ಗಳ ಪ್ರವೇಶ ಪರೀಕ್ಷೆಗೆ ನೊಂದಾಯಿಸಿಕೊಳ್ಳಲು, ಪರೀಕ್ಷೆ ಎದುರಿಸಲು ಮತ್ತು ಕೌನ್ಸೆಲಿಂಗ್‌ಗೆ ಹಾಜರಾಗಲು ಅವಕಾಶ ಕಲ್ಪಿಸಬೇಕು' ಎಂದು ಹೈಕೋರ್ಟ್, ಕರ್ನಾಟಕ ಪರೀಕ್ಷಾ ಪ್ರಾಧಿಕಾರಕ್ಕೆ ನಿರ್ದೇಶಿಸಿದೆ.

35ಕ್ಕೂ ಹೆಚ್ಚು ವಿದ್ಯಾರ್ಥಿಗಳು ಸಲ್ಲಿಸಿದ್ದ ರಿಟ್ ಅರ್ಜಿ ವಿಚಾರಣೆ ನಡೆಸಿದ ನ್ಯಾ. ಆರ್.ದೇವದಾಸ್, ನ್ಯಾ. ಕೆ.ಎಸ್. ಹೇಮಲೇಖಾ ಅವರಿದ್ದ ರಜಾಕಾಲದ ಪೀಠವು, ಮಧ್ಯಂತರ ಆದೇಶ ನೀಡಿದೆ.

'ಈ ಆದೇಶವು 2022–2023ರ ಶೈಕ್ಷಣಿಕ ವರ್ಷಕ್ಕೆ ಅನ್ವಯವಾಗಲಿದ್ದು, ಎಲ್ಲಾ ಅರ್ಹ ಒಸಿಐ ವಿದ್ಯಾರ್ಥಿಗಳಿಗೆ ಅನ್ವಯಿಸುತ್ತದೆ' ಎಂದು ಆದೇಶದಲ್ಲಿ ಹೇಳಿದೆ.

ಪುಣ್ಯಸ್ಮರಣೆ





ಶ್ರೀಮತಿ ಶೇಷಮ್ಮ
(ನಿಧನ: 09-08-2010)

ಶ್ರೀ ಜಿ.ನಾರಾಯಣಸ್ವಾಮಿ ರೆಡ್ಡಿ (GNR)
ವಿ.ಪಿ. ಛೇರ್ಮನ್ ಮತ್ತು ಕಂಟ್ರಾಕ್ಟರ್
(ನಿಧನ: 04-05-1989)

ನೀವು ನಮ್ಮ ಜೀವನದಲ್ಲಿ ಮಾರ್ಗದರ್ಶನ ಹಾಗೂ ಸ್ಫೂರ್ತಿ ನೀಡಿದ್ದೀರಿ, ನಿಮ್ಮ ಸರಳತೆ, ಕ್ರಿಯಾಶೀಲತೆ ಹಾಗೂ ಪ್ರೋತ್ಸಾಹ ನಮಗೆ ಎಂದೆಂದಿಗೂ ಹೊಸ ಚೈತನ್ಯ ನೀಡುತ್ತದೆ. ನಿಮ್ಮ ಆತ್ಮಕ್ಕೆ ಭಗವಂತನಲ್ಲಿ ಚಿರಶಾಂತಿಯನ್ನು ಕೋರುತ್ತಾ ಸದಾ ನಿಮ್ಮ ಸವಿನೆನಪಿನಲ್ಲಿರುವ...

ಮಕ್ಕಳು, ಸೊಸೆಯಂದಿರು, ಮೊಮ್ಮಕ್ಕಳು, ಮರಿಮಕ್ಕಳು ಹಾಗೂ ಅಪಾರ ಬಂಧು–ಮಿತ್ರರು, ಬೆಂಗಳೂರು.

ಬೆಂಗಳೂರು ಪೊಲೀಸ್ ಕಮಿಷನರ್ ಕಚೇರಿ ಬಳಿ ಸಿಕ್ಕಿಬಿದ್ದಿದ್ದ ಕಾನ್‌ಸ್ಟೆಬಲ್

ಪಿಎಸ್‌ಐ ಅಕ್ರಮ: 10 ಅಭ್ಯರ್ಥಿಗಳಿಗೆ ನೋಟಿಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಿಎಸ್‌ಐ ನೇಮಕಾತಿ ಅಕ್ರಮ ಪ್ರಕರಣದಲ್ಲಿ ಭಾಗಿಯಾಗಿ ತಲೆಮರೆಸಿಕೊಂಡಿರುವ 10 ಅಭ್ಯರ್ಥಿಗಳ ಪತ್ತೆಗೆ ಸಿಐಡಿ ಅಧಿಕಾರಿಗಳು ತನಿಖೆ ಮುಂದುವರಿಸಿದ್ದಾರೆ. ಅಭ್ಯರ್ಥಿಗಳ ವಿಳಾಸಕ್ಕೆ ನೋಟಿಸ್ ಕಳುಹಿಸಿರುವ ಅಧಿಕಾರಿಗಳು, ತುರ್ತಾಗಿ ವಿಚಾರಣೆಗೆ ಹಾಜರಾಗುವಂತೆ ಸೂಚನೆ ನೀಡಿದ್ದಾರೆ.

ಬೆಂಗಳೂರಿನ 7 ಕೇಂದ್ರಗಳಲ್ಲಿ ಅಕ್ರಮ ಎಸಗಿದ್ದ ಆರೋಪದಡಿ 22 ಅಭ್ಯರ್ಥಿಗಳ ವಿರುದ್ಧ ಹೈಗ್ರೌಂಡ್ಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಆ ಪೈಕಿ 12 ಮಂದಿಯನ್ನು ಈಗಾಗಲೇ ಬಂಧಿಸಲಾಗಿದೆ. ಉಳಿದ 10 ಮಂದಿ ತಲೆಮರೆಸಿಕೊಂಡಿದ್ದಾರೆ.

'ಬಂಧಿತ 12 ಅಭ್ಯರ್ಥಿಗಳನ್ನು ಕಸ್ಟಡಿಗೆ ಪಡೆದು ವಿಚಾರಣೆ ನಡೆಸಲಾಗುತ್ತಿದೆ. ಒಎಂಆರ್ ತಿದ್ದುಪಡಿ, ಬ್ಲೂಟೂತ್ ಬಳಕೆ ಹಾಗೂ ಇತರೆ ಪ್ರಕಾರದ ಅಕ್ರಮಗಳ ಬಗ್ಗೆ ಮಾಹಿತಿ ಪಡೆಯಲಾಗುತ್ತಿದೆ. ಹುದ್ದೆಗೆ ಆಯ್ಕೆಯಾಗಲು ಅಭ್ಯರ್ಥಿಗಳು ಏಜೆಂಟರಿಗೆ ಹಣ ನೀಡಿರುವ ಮಾಹಿತಿ ಇದೆ. ಏಜೆಂಟರು ಯಾರು ಎಂಬುದನ್ನು ತಿಳಿದುಕೊಳ್ಳಬೇಕಿದೆ' ಎಂದು ಸಿಐಡಿ ಮೂಲಗಳು ಹೇಳಿವೆ.

ಕಮಿಷನರ್ ಕಚೇರಿ ಬಳಿ ಸಿಕ್ಕಿಬಿದ್ದ ಕಾನ್‌ಸ್ಟೆಬಲ್: '22 ಆರೋಪಿಗಳ ಪೈಕಿ ಒಬ್ಬರಾದ ಬಿ. ಗಜೇಂದ್ರ, ಬೆಂಗಳೂರು ಪೊಲೀಸ್ ಕಮಿಷನರ್ ಕಚೇರಿಯಲ್ಲಿ ಕಾನ್‌ಸ್ಟೆಬಲ್ ಆಗಿ ಕೆಲಸ ಮಾಡುತ್ತಿದ್ದರು. ಕೆಲಸ ಮುಗಿಸಿ ಮನೆಗೆ ಹೊರಟಿದ್ದ ವೇಳೆ ಕಚೇರಿ ಬಳಿಯೇ ಅವರನ್ನು ಸಿಐಡಿ ಅಧಿಕಾರಿಗಳು ಬಂಧಿಸಿರುವುದು ಗೊತ್ತಾಗಿದೆ.

'ಹೈಗ್ರೌಂಡ್ಸ್ ಠಾಣೆಯಲ್ಲಿ ಏಪ್ರಿಲ್ 30ರಂದು ಪ್ರಕರಣ ದಾಖಲಾಗುತ್ತಿದ್ದಂತೆ, ಅಂದು ಸಂಜೆಯೇ ಬಿ.ಗಜೇಂದ್ರನನ್ನು ಬಂಧಿಸಲಾಗಿದೆ. ಪಿಎಸ್‌ಐ ನೇಮಕಾತಿ ಲಿಖಿತ ಪರೀಕ್ಷೆಯಲ್ಲಿ ಒಟ್ಟು 155 ಅಂಕ (ಪತ್ರಿಕೆ-1ರಲ್ಲಿ 29 ಹಾಗೂ ಪತ್ರಿಕೆ-2ರಲ್ಲಿ 126 ಅಂಕ) ಪಡೆದಿದ್ದ ಗಜೇಂದ್ರ, ತಾತ್ಕಾಲಿಕ ಆಯ್ಕೆ ಪಟ್ಟಿಯಲ್ಲಿ ಮೊದಲ ರ‍್ಯಾಂಕ್ ಪಡೆದಿದ್ದ' ಎಂದು ಮೂಲಗಳು ಹೇಳಿವೆ.

'ವಿಚಾರಣೆಗೆ ಹಾಜರಾಗಿದ್ದ ಗಜೇಂದ್ರ, ಒಎಂಆರ್ ಕಾರ್ಬನ್ ಪ್ರತಿ ಹಾಗೂ ಇತರೆ ದಾಖಲೆಗಳನ್ನು ಕೊಟ್ಟು ಹೋಗಿದ್ದ. ಒಎಂಆರ್ ಕಾರ್ಬನ್ ಪ್ರತಿ ಪರಿಶೀಲಿಸಿದಾಗ, ವ್ಯತ್ಯಾಸ ಕಂಡುಬಂದಿತ್ತು. ಹೀಗಾಗಿ, ಆತನ ವಿರುದ್ಧವೂ ಹೈಗ್ರೌಂಡ್ಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿತ್ತು' ಎಂದೂ ತಿಳಿಸಿವೆ.

ಸಿಐಡಿ ಕಚೇರಿಗೆ ಕೇಂದ್ರ ಗೃಹ ಕಾರ್ಯದರ್ಶಿ ಭೇಟಿ

ಅರಮನೆ ರಸ್ತೆಯ ಕಾರ್ಲಟನ್ ಕಟ್ಟಡದಲ್ಲಿರುವ ಸಿಐಡಿ ಕಚೇರಿಗೆ ಕೇಂದ್ರ ಗೃಹ ಇಲಾಖೆ ಕಾರ್ಯದರ್ಶಿ ಅಜಯ್ ಕುಮಾರ್ ಭಲ್ಲಾ ಅವರು ಮಂಗಳವಾರ ಭೇಟಿ ನೀಡಿದರು.

ಗೃಹ ಸಚಿವ ಅಮಿತ್ ಶಾ ಜೊತೆ ನಗರಕ್ಕೆ ಬಂದಿದ್ದ ಅಜಯ್‌ಕುಮಾರ್ ಅವರು, ತಾವೊಬ್ಬರೇ ಪ್ರತ್ಯೇಕವಾಗಿ ಸಿಐಡಿ ಕಚೇರಿಗೆ ಭೇಟಿ ನೀಡಿ ಅಧಿಕಾರಿಗಳ ಜೊತೆ ಮಾತುಕತೆ ನಡೆಸಿದರು. ಸಿಐಡಿಯಲ್ಲಿರುವ ವ್ಯವಸ್ಥೆ ಬಗ್ಗೆ ಮಾಹಿತಿ ಪಡೆದುಕೊಂಡರು.

ಡಿಜಿಪಿ ಪಿ.ಎಸ್ ಸಂಧು ಅವರು ಸಿಐಡಿ ಕಾರ್ಯವೈಖರಿ, ಸೈಬರ್ ಲ್ಯಾಬ್ ಹಾಗೂ ಇತರ ವಿಷಯಗಳ ಬಗ್ಗೆ ಅಜಯ್‌ಕುಮಾರ್ ಅವರಿಗೆ ವಿವರಿಸಿದರು. ಹಿರಿಯ ಅಧಿಕಾರಿಗಳು ಜೊತೆಗಿದ್ದರು.

ಪಿಎಸ್‌ಐ ನೇಮಕಾತಿ ಅಕ್ರಮದ ತನಿಖೆ ಬಗ್ಗೆಯೂ ಅಜಯ್‌ಕುಮಾರ್ ಮಾಹಿತಿ ಪಡೆದುಕೊಂಡಿರುವುದಾಗಿ ಗೊತ್ತಾಗಿದೆ.

ಮಾಗಡಿಯಲ್ಲೇ ₹ 2 ಕೋಟಿ ಅಕ್ರಮ: ಡಿಕೆಶಿ

ಬೆಂಗಳೂರು: 'ಪಿಎಸ್‌ಐ ನೇಮಕಾತಿ ಹಗರಣಕ್ಕೆ ಸಂಬಂಧಿಸಿದಂತೆ ಮಾಗಡಿ ಕ್ಷೇತ್ರವೊಂದರಲ್ಲೇ ಎರಡು ಕೋಟಿ ರೂಪಾಯಿ ಮೊತ್ತದ ಅಕ್ರಮ ನಡೆದಿದ್ದು, ಇದರಲ್ಲಿ ಭಾಗಿಯಾಗಿರುವ ಸಚಿವರು ರಾಜೀನಾಮೆ ನೀಡಬೇಕು' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಆಗ್ರಹಿಸಿದ್ದಾರೆ.

ಮಂಗಳವಾರ ಮಾಧ್ಯಮ ಪ್ರತಿನಿಧಿಗಳ ಜೊತೆ ಮಾತನಾಡಿದ ಅವರು, 'ಕಾಂಗ್ರೆಸ್ ಪಕ್ಷ ಈ ಬಗ್ಗೆ ಹೋರಾಟ ಮಾಡುತ್ತದೆ. ಈ ವಿಚಾರವಾಗಿ ಯಾವುದೇ ವೇದಿಕೆಯಲ್ಲಿ ಚರ್ಚೆ ಮಾಡಲು ನಮ್ಮ ಪಕ್ಷದ ವಕ್ತಾರರು ಸಿದ್ಧರಿದ್ದಾರೆ' ಎಂದರು.

'ಪಿಎಸ್‌ಐ ನೇಮಕಾತಿ ಅಕ್ರಮ ಕೇವಲ ಮಲ್ಲೇಶ್ವರ ಅಥವಾ ಮಾಗಡಿಗೆ ಸೀಮಿತವಲ್ಲ, ರಾಜ್ಯದ ಎಲ್ಲಾ ಯುವಕರಿಗೂ ಆಘಾತಕಾರಿಯಾದ ವಿಚಾರ. ಪಿಎಸ್‌ಐ, ಪಿಡಬ್ಲ್ಯುಡಿ, ಶಿಕ್ಷಣ ಇಲಾಖೆ ಸೇರಿದಂತೆ ಎಲ್ಲ ಇಲಾಖೆಗಳ ನೇಮಕಾತಿಯಲ್ಲಿ ಅಕ್ರಮ ನಡೆದಿದೆ. ಭ್ರಷ್ಟಾಚಾರದ ವಿಚಾರ ಮಾಧ್ಯಮಗಳಲ್ಲಿ ಪ್ರಕಟವಾಗುತ್ತಿದ್ದರೂ, ಪೊಲೀಸರು ಸರಿಯಾದ ತನಿಖೆ ನಡೆಸುತ್ತಿಲ್ಲ' ಎಂದು ಅವರು ಆರೋಪಿಸಿದರು.

'ವಿಚಾರಣೆಗೆ ಕರೆಸಿದ ದರ್ಶನ್ ಗೌಡ ಯಾವ ಹೇಳಿಕೆ ಕೊಟ್ಟಿದ್ದಾನೆ, ಆತನನ್ನು ಯಾಕೆ ಪೂರ್ಣ ವಿಚಾರಣೆ ಮಾಡದೆ ಬಿಟ್ಟು ಕಳುಹಿಸಲಾಯಿತು, ಈ ವಿಚಾರವಾಗಿ ಮಾಹಿತಿ ನೀಡುತ್ತಿಲ್ಲ ಯಾಕೆ' ಎಂದು ಪ್ರಶ್ನಿಸಿದ ಅವರು, 'ಇದಕ್ಕೆ ಮುಖ್ಯ ಕಾರಣ ಇದರ ಹಿಂದಿರುವ ಸಚಿವರ ಸಂಪರ್ಕ ಬಹಿರಂಗವಾಗುತ್ತದೆ ಎಂಬುದೇ ಆಗಿದೆ' ಎಂದರು.

ಡಿವೈಎಸ್‌ಪಿ, ಸಿಪಿಐಗೆ ನೋಟಿಸ್?

ಕಲಬುರಗಿ: ಇಲ್ಲಿನ ಜ್ಞಾನಜ್ಯೋತಿ ಇಂಗ್ಲಿಷ್ ಮಾಧ್ಯಮ ಶಾಲೆಯಲ್ಲಿ ನಡೆದ, ಪಿಎಸ್‌ಐ ನೇಮಕಾತಿ ಪರೀಕ್ಷೆಯ ಅಕ್ರಮದಲ್ಲಿ ಭಾಗಿಯಾದ ಆರೋಪದ ಮೇರೆಗೆ ಒಬ್ಬರು ಡಿವೈಎಸ್ಪಿ, ಒಬ್ಬರು ನಿವೃತ್ತ ಡಿವೈಎಸ್‌ಪಿ ಹಾಗೂ ಒಬ್ಬರು ಇನ್‌ಸ್ಪೆಕ್ಟರ್ ಅವರಿಗೆ ವಿಚಾರಣೆಗೆ ಹಾಜರಾಗುವಂತೆ ಸಿಐಡಿ ಅಧಿಕಾರಿಗಳು ನೋಟಿಸ್ ನೀಡಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಮೂವರು ಅಧಿಕಾರಿಗಳ ಪೈಕಿ ಇಬ್ಬರು ಇನ್ನೂ ಕಲಬುರಗಿಯಲ್ಲೇ ಸೇವೆಯಲ್ಲಿದ್ದಾರೆ. ಪರೀಕ್ಷಾ ಅಕ್ರಮದಲ್ಲಿ ಮೂವರ ಪಾತ್ರವೂ ವಿಭಿನ್ನವಾಗಿದೆ ಎಂದು ಮೂಲಗಳು ಹೇಳುತ್ತವೆ. ಪರೀಕ್ಷೆ ನಡೆದ ದಿನ (2021 ಅಕ್ಟೋಬರ್ 3) ಜ್ಞಾನಜ್ಯೋತಿ ಶಾಲೆಯ ಪರೀಕ್ಷಾ ಕೇಂದ್ರಕ್ಕೆ ಒಬ್ಬ ಡಿವೈಎಸ್ಪಿ ಕಸ್ಟೋಡಿಯನ್ ಜವಾಬ್ದಾರಿಗೆ ನಿಯೋಜನೆಗೊಂಡಿದ್ದರು. ಆದರೆ, ಪರೀಕ್ಷೆ ಆರಂಭವಾದ ಕೆಲವೇ ನಿಮಿಷಗಳಲ್ಲಿ, ಸಂಬಂಧಿಕರು ತೀರಿಕೊಂಡಿದ್ದಾರೆ ಎಂದು ಹೇಳಿ ಹೋದರು. ಅವರ ಬದಲಿಗೆ ಬೇರೊಬ್ಬ ಡಿವೈಎಸ್ಪಿ ಕಸ್ಟೋಡಿಯನ್ ಆಗಿ ಬಂದರು. ಇಬ್ಬರೂ ಅಕ್ರಮಕ್ಕೆ ಸಾಥ್ ನೀಡುವ ಉದ್ದೇಶದಿಂದಲೇ ಒಬ್ಬರಾದ ಮೇಲೆ ಒಬ್ಬರು ಜವಾಬ್ದಾರಿ ನಿರ್ವಹಿಸುವ ಉಪಾಯ ಮಾಡಿದ್ದಾರೆ. ಅಲ್ಲದೇ, ನಗರದ ಠಾಣೆಯೊಂದರ ಇನ್‌ಸ್ಪೆಕ್ಟರ್ ಕೂಡ ಇವರಿಬ್ಬರೊಂದಿಗೆ ಕೈ ಜೋಡಿಸಿದ್ದಾರೆ ಎಂಬ ಗುಮಾನಿ ತನಿಖಾಧಿಕಾರಿಗಳಿಗೆ ಬಂದಿದೆ ಎನ್ನುತ್ತವೆ ಮೂಲಗಳು.

ಪಿಎಸ್‌ಐ ಅಕ್ರಮ: ತಂದೆ– ಮಗ ಸೇರಿ ಮೂವರ ಸೆರೆ

ಒಂದನೇ ಪುಟದಿಂದ...

ನಗರದ 11 ಕೇಂದ್ರಗಳಲ್ಲಿ ಪರೀಕ್ಷೆ ನಡೆದಿತ್ತು. ಎಂ.ಎಸ್. ಇರಾನಿ ಪದವಿ ಕಾಲೇಜಿನ ಪರೀಕ್ಷಾ ಕೇಂದ್ರದಲ್ಲಿ ಪರೀಕ್ಷೆ ಬರೆದಿದ್ದವರ ಪೈಕಿ ಅಂದಾಜು ಎಂಟು ಅಭ್ಯರ್ಥಿಗಳು ತಾತ್ಕಾಲಿಕ ಆಯ್ಕೆಪಟ್ಟಿಯಲ್ಲಿ ಸ್ಥಾನ ಪಡೆದಿದ್ದರು ಎಂಬುದು ಮೂಲಗಳ ಮಾಹಿತಿ.

ಹೂವಿನಕುಂಡದಲ್ಲಿ ಬ್ಲೂಟೂತ್!: ಪಿಎಸ್‌ಐ ನೇಮಕಾತಿ ಪರೀಕ್ಷೆಯ ಅಕ್ರಮಕ್ಕೆ ಸಂಬಂಧಿಸಿದಂತೆ ಬಂಧಿಸಲಾದ ಪ್ರಭು ಶರಣಪ್ಪ ಅವರನ್ನು ಅಧಿಕಾರಿಗಳು ಮಂಗಳವಾರ ಸ್ಥಳಕ್ಕೆ ಕರೆತಂದು ಮಹಜರು ನಡೆಸಿದರು.

ಇಲ್ಲಿನ ಎಂ.ಎಸ್.ಇರಾನಿ ಪದವಿ ಕಾಲೇಜಿನ ಪರೀಕ್ಷಾ ಕೇಂದ್ರದಲ್ಲಿ ಪ್ರಭು ಪರೀಕ್ಷೆ ಬರೆದಿದ್ದು, ಪರೀಕ್ಷಾ ಕೋಣೆಯ ಪಕ್ಕದಲ್ಲಿಯೇ ಇರುವ ಹೂವಿನಕುಂಡದಲ್ಲಿ ಪರೀಕ್ಷೆಯ ಹಿಂದಿನ ದಿನವೇ (2021ರ ಅಕ್ಟೋಬರ್ 2) ಬ್ಲೂಟೂತ್ ಡಿವೈಸ್ ಇಟ್ಟು ಬಂದಿದ್ದರು.

ಪರೀಕ್ಷೆ ದಿನ ತಪಾಸಣೆ ಮಾಡುತ್ತಾರೆ. ಆಗ ಮೆಟಲ್ ಡಿಟೆಕ್ಟರ್‌ನಲ್ಲಿ ಡಿವೈಸ್ ಪತ್ತೆಯಾಗುತ್ತದೆ ಎಂಬ ಕಾರಣಕ್ಕೆ, ಅದನ್ನು ಹಿಂದಿನ ದಿನವೇ ಹೂವಿನಕುಂಡದಲ್ಲಿ ಇಟ್ಟು ಬಂದಿದ್ದರು. ಹೂವಿನಕುಂಡ ಪರೀಕ್ಷಾ ಕೋಣೆಯಿಂದ 20 ಮೀಟರ್ ದೂರದಲ್ಲಿ ಇತ್ತು. ಅಲ್ಲಿ ಇಟ್ಟು ಬಂದಿದ್ದ ಎಲೆಕ್ಟ್ರಾನಿಕ್ ಉಪಕರಣವನ್ನು ಪರೀಕ್ಷೆಯ ದಿನ ಎತ್ತಿಕೊಂಡು ಒಳ ಉಡುಪಿಯಲ್ಲಿ ಇಟ್ಟುಕೊಂಡಿದ್ದರು. ಕಿವಿಯಲ್ಲಿ ಬ್ಲೂಟೂತ್ ಇಟ್ಟುಕೊಂಡು ಪರೀಕ್ಷೆ ಬರೆದಿದ್ದಾಗಿ ಆರೋಪಿ ಮಹಜರು ವೇಳೆ ಒಪ್ಪಿಕೊಂಡಿದ್ದಾಗಿ ಸಿಐಡಿ ಮೂಲಗಳು ತಿಳಿಸಿವೆ.


ಪ್ರಭು


ಶರಣಪ್ಪ


ಚಂದ್ರಕಾಂತ ಕುಲಕರ್ಣಿ

ಮಗನ ಶರಣಾಗತಿಗೆ ಮನವೊಲಿಸಿದ್ದ ತಂದೆ

ಕಲಬುರಗಿ: ಪಿಎಸ್‌ಐ ಪರೀಕ್ಷೆಯ ಅಕ್ರಮ ಪ್ರಕರಣದಲ್ಲಿ ತಲೆಮರೆಸಿಕೊಂಡಿದ್ದ ನೀರಾವರಿ ಇಲಾಖೆಯ ಸಹಾಯಕ ಎಂಜಿನಿಯರ್ ಮಂಜುನಾಥ ಮೇಳಕುಂದಿ ಅವರ ತಂದೆ ವಿಶ್ವನಾಥ ಮೇಳಕುಂದಿ ನಿವೃತ್ತ ಸಹಾಯಕ ಸಬ್ ಇನ್‌ಸ್ಪೆಕ್ಟರ್ (ಎಎಸ್‌ಐ). ಮಗ ಮಾಡಿದ ಕೃತ್ಯದಿಂದ ಸಾಕಷ್ಟು ನೊಂದಿರುವ ವಿಶ್ವನಾಥ ಅವರು ತಮ್ಮ ಮಗನಿಗೆ ಶರಣಾಗುವಂತೆ ಹೇಳುವುದಾಗಿ ಸಿಐಡಿಗೆ ಭರವಸೆ ನೀಡಿ ಅದರಂತೆ ನಡೆದುಕೊಂಡಿದ್ದಾರೆ.

ಪ್ರಕರಣ ಬಯಲಿಗೆ ಬಂದ ಬಳಿಕ ಮಂಜುನಾಥ ಪರಾರಿಯಾಗಿದ್ದರು. ಹೀಗಾಗಿ, ಸಿಐಡಿ ಅಧಿಕಾರಿಗಳ ತಂಡ ಅಫಜಲಪುರ ತಾಲ್ಲೂಕಿನ ಮೇಳಕುಂದಿ ಗ್ರಾಮಕ್ಕೆ ಭೇಟಿ ನೀಡಿ ಮಗನ ಬಗ್ಗೆ ಮಾಹಿತಿ ನೀಡುವಂತೆ ವಿಶ್ವನಾಥ ಅವರಿಗೆ ಕೇಳಿತ್ತು. ಅಫಜಲಪುರ ಹಾಗೂ ಕಲಬುರಗಿಯ ವಿವಿಧ ಠಾಣೆಗಳಲ್ಲಿ ಕಾರ್ಯನಿರ್ವಹಿಸಿ ಉತ್ತಮ ಹೆಸರು ಸಂಪಾದಿಸಿರುವ ವಿಶ್ವನಾಥ ಅವರಿಗೆ ಮಗ ಆರೋಪಿಯಾಗಿರುವುದು ತೀವ್ರ ನೋವು ತಂದಿತ್ತು.

ಕೆಲ ದಿನಗಳ ಹಿಂದೆ ತಮ್ಮನ್ನು ಸಂಪರ್ಕಿಸಿದ್ದ ಮಗನಿಗೆ, 'ಮೇ 8ರಂದು ನಡೆಯುವ ಚಿಕ್ಕಪ್ಪನ ಮಗನ ಮದುವೆಗೆ ನೀನು ಬರುವ ಬಗ್ಗೆ ಪೊಲೀಸರಿಗೆ ಮಾಹಿತಿ ಇದೆ. ಆಗ ಬಂಧಿಸಿದರೆ ಇನ್ನಷ್ಟು ಮರ್ಯಾದೆ ಹೋಗುತ್ತದೆ. ಆದ್ದರಿಂದ ಕೂಡಲೇ ಶರಣಾಗು' ಎಂದು ತಾಕೀತು ಮಾಡಿದ್ದರು.

ಹೀಗಾಗಿ, ಮಂಜುನಾಥ ಮೇಳಕುಂದಿ ಭಾನುವಾರ ಸಿಐಡಿ ಅಧಿಕಾರಿಗಳ ಎದುರು ಶರಣಾದರು ಎಂಬುದು ಮೂಲಗಳ ಮಾಹಿತಿ.

ನಿವೇಶನ ಮಾರಿ ಹಣ ಕೊಟ್ಟಿದ್ದ ಶರಣಪ್ಪ

ಕಲಬುರಗಿ: ಮಗನನ್ನು ಪಿಎಸ್‌ಐ ಮಾಡಬೇಕು ಎಂಬ ಹಂಬಲದಿಂದ, ಪ್ರಭು ಅವರ ತಂದೆ ಶರಣಪ್ಪ ₹ 50 ಲಕ್ಷ ಹಣ ನೀಡಿದ್ದಾರೆ. ಹಣ ಹೊಂದಿಸಲು ನಗರದಲ್ಲಿದ್ದ ನಿವೇಶನ ಮಾರಾಟ ಮಾಡಿದ್ದಾರೆ. ಪರೀಕ್ಷೆಗೂ ಮುನ್ನ ₹ 20 ಲಕ್ಷ, ಫಲಿತಾಂಶ ಬಂದ ಮೇಲೆ ₹ 30 ಲಕ್ಷ ನೀಡಿದ್ದಾಗಿ ಅಧಿಕಾರಿಗಳು ಮಾಹಿತಿ ತಿಳಿಸಿದ್ದಾರೆ.

ಶರಣಪ್ಪ ಹಲವು ವರ್ಷಗಳಿಂದ ನಗರದಲ್ಲಿ ಕಟ್ಟಡ ನಿರ್ಮಾಣ ಸಾಮಗ್ರಿ ಪೂರೈಸುವ ಕೆಲಸ ಮಾಡುತ್ತಿದ್ದಾರೆ. ಕಳೆದ ಸೆಪ್ಟೆಂಬರ್‌ನಲ್ಲಿ ಚಂದ್ರಕಾಂತ ಕುಲಕರ್ಣಿ ಹೊಸಮನೆ ಕಟ್ಟುತ್ತಿದ್ದರು. ಈ ವೇಳೆ ಶರಣಪ್ಪ ಹಾಗೂ ಚಂದ್ರಕಾಂತಗೆ ಪರಿಚಯ ಆಗಿತ್ತು. ಮಗನನ್ನು ಪಿಎಸ್‌ಐ ಮಾಡುವ ವಿಚಾರವನ್ನು ಶರಣಪ್ಪ ಅವರು ಚಂದ್ರಕಾಂತ ಮುಂದೆ ಹೇಳಿದ್ದರು. ಇನ್ನೊಂದೆಡೆ ಚಂದ್ರಕಾಂತ ಹಾಗೂ ಆರೋಪಿ ರುದ್ರಗೌಡ ಡಿ. ಪಾಟೀಲ ಮೊದಲಿನಿಂದಲೂ ಪರಿಚಯಸ್ಥರು. ಚಂದ್ರಕಾಂತ ಅವರು ಶರಣಪ್ಪ ಅವರನ್ನು ರುದ್ರಗೌಡಗೆ ಪರಿಚಯ ಮಾಡಿಕೊಟ್ಟಿದ್ದರು. ಮೂವರೂ ಮಾತನಾಡಿಕೊಂಡು ₹ 50 ಲಕ್ಷಕ್ಕೆ ಡೀಲ್ ಕುದುರಿಸಿದ್ದರು ಎಂದು ಮೂಲಗಳು ತಿಳಿಸಿವೆ.

ಸಂಪುಟ ಪುನರ್‌ರಚನೆ ಖಚಿತ

ಒಂದನೇ ಪುಟದಿಂದ...

ಈಗಾಗಲೇ 5 ಸಚಿವ ಸ್ಥಾನಗಳು ಖಾಲಿ ಇವೆ. 4 ರಿಂದ 5 ಮಂದಿಯನ್ನು ಕೈಬಿಟ್ಟು, ಒಟ್ಟು 9 ರಿಂದ 10 ಮಂದಿ ಹೊಸಬರಿಗೆ ಸಂಪುಟದಲ್ಲಿ ಅವಕಾಶ ನೀಡಲಾಗುವುದು. ಇದೇ ವೇಳೆ ಹಲವು ಸಚಿವರ ಖಾತೆಗಳೂ ಬದಲಾಗಲಿವೆ. ಕೆಲವು ಸಚಿವರ ಕಾರ್ಯವೈಖರಿಯ ಬಗ್ಗೆ ವರಿಷ್ಠರಿಗೆ ತೃಪ್ತಿ ಇಲ್ಲ. ಸರ್ಕಾರ ವರ್ಚಸ್ಸು ಹೆಚ್ಚಿಸುವ ಕೆಲಸವನ್ನೂ ಮಾಡುತ್ತಿಲ್ಲ. ಪಕ್ಷದ ಸಂಘಟನೆಯಲ್ಲೂ ತೊಡಗಿಸಿಕೊಂಡಿಲ್ಲ. ಅಂತಹವರ ಪಟ್ಟಿಯೊಂದನ್ನು ಸಿದ್ಧ ಮಾಡಿದ್ದು, ಅವರನ್ನು ಕೈಬಿಡಲಾಗುವುದು ಎಂದು ಮೂಲಗಳು ತಿಳಿಸಿವೆ.

ಅಧ್ಯಕ್ಷ ಸ್ಥಾನವೂ ಬದಲು: ವಿಧಾನಸಭಾ ಚುನಾವಣೆಯ ಹೊತ್ತಿಗೆ ಹೆಚ್ಚು ಆಕ್ರಮಣಕಾರಿಯಾಗಿ ಪಕ್ಷವನ್ನು ಮುನ್ನಡೆಸಲು ಮತ್ತು ಸಂಘಟನೆಯನ್ನು ಬಲಪಡಿಸಲು ರಾಜ್ಯ ಘಟಕದ ಅಧ್ಯಕ್ಷ ಸ್ಥಾನಕ್ಕೆ ಯುವ ನಾಯಕರ ಹುಡುಕಾಟದಲ್ಲಿ ವರಿಷ್ಠರು ತೊಡಗಿದ್ದಾರೆ. ಸಚಿವೆ ಶೋಭಾ ಕರಂದ್ಲಾಜೆ, ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ.ರವಿ, ಇಂಧನ ಸಚಿವ ವಿ. ಸುನಿಲ್‌ಕುಮಾರ್, ಶಾಸಕ ಅರವಿಂದ ಲಿಂಬಾವಳಿ ಅವರ ಹೆಸರು ಪರಿಶೀಲನೆಯಲ್ಲಿದೆ ಎಂದು ಬಿಜೆಪಿ ಮೂಲಗಳು ತಿಳಿಸಿವೆ.

'ಚುನಾವಣೆಗೆ ಬೊಮ್ಮಾಯಿ ನೇತೃತ್ವ'

ಬೆಂಗಳೂರು: ಮುಂಬರುವ ವಿಧಾನಸಭಾ ಚುನಾವಣೆಯನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನೇತೃತ್ವ ಮತ್ತು ಹಿರಿಯ ಶಾಸಕ ಬಿ.ಎಸ್.ಯಡಿಯೂರಪ್ಪ ಮಾರ್ಗದರ್ಶನದಲ್ಲೇ ಎದುರಿಸಿ, 150 ಸ್ಥಾನಗಳನ್ನು ಗೆಲ್ಲುವುದಾಗಿ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್‌ಕುಮಾರ್ ಕಟೀಲ್ ತಿಳಿಸಿದರು. 'ನಮ್ಮ ಪಕ್ಷದೊಳಗೆ ಅಥವಾ ಸರ್ಕಾರದಲ್ಲಿ ನಾಯಕತ್ವದ ಗೊಂದಲ ಇಲ್ಲ. ನಾಯಕತ್ವದ ಬದಲಾವಣೆ ಕುರಿತು ಯಾರಿಗಾದರೂ ಭ್ರಮೆ ಇದ್ದರೆ, ಆ ಭ್ರಮೆಯಲ್ಲಿ ತೇಲಾಡುತ್ತಿದ್ದರೆ, ಅದನ್ನು ಬಿಟ್ಟುಬಿಡುವುದು ಒಳ್ಳೆಯದು' ಎಂದರು. ರಾಜ್ಯ ಘಟಕದ ಅಧ್ಯಕ್ಷರ ಬದಲಾವಣೆ ಕುರಿತು ಪ್ರಶ್ನಿಸಿದಾಗ, 'ನಿಮಗೆ ಭಾರೀ ಆತುರ ಇದ್ದರೆ ತೆಗೆದುಬಿಡಿ' ಎಂದು ಹಾಸ್ಯ ಚಟಾಕಿ ಹಾರಿಸಿದರು.

ಪಿವಿ ಬ್ರ್ಯಾಂಡ್ ಸ್ಪಾಟ್

ಪತ್ರಿಕೆಯಲ್ಲಿ ಪ್ರಕಟವಾಗುತ್ತಿರುವ ಪಿವಿ ಬ್ರ್ಯಾಂಡ್ ಸ್ಪಾಟ್ ಪ್ರಸ್ತುತಿಯ ಲೇಖನ ಸಿದ್ಧಪಡಿಸುವಲ್ಲಿ ನಮ್ಮ ಪತ್ರಕರ್ತರ ಯಾವುದೇ ಪಾತ್ರ ಇರುವುದಿಲ್ಲ. ಸಂಸ್ಥೆಯ ಜಾಹೀರಾತು ಮತ್ತು ಬ್ರ್ಯಾಂಡ್ ವಿಭಾಗಗಳ ಪ್ರಸ್ತುತಿಯಾಗಿರುವ 'ಪಿವಿ ಬ್ರ್ಯಾಂಡ್ ಸ್ಪಾಟ್'ನ ಮಾಹಿತಿಯನ್ನು (ಕಂಟೆಂಟ್) ಓದುಗರು ಜಾಹೀರಾತು ಎಂದೇ ಭಾವಿಸಬಹುದು.

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಬೊಮ್ಮಾಯಿಗೆ ಮೆಚ್ಚುಗೆ, ಸಚಿವರ ನಡೆಗೆ ಅಮಿತ್ ಶಾ ಬೇಸರ

ಬೆಂಗಳೂರು: ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಕಾರ್ಯವೈಖರಿ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿರುವ ಗೃಹ ಸಚಿವ ಅಮಿತ್ ಶಾ ಅವರು, ಕೆಲವು ಸಚಿವರು ಸರ್ಕಾರಕ್ಕೆ ಕೆಟ್ಟ ಹೆಸರು ತರುವ ರೀತಿಯಲ್ಲಿ ನಡೆದುಕೊಳ್ಳುತ್ತಿರುವ ಬಗ್ಗೆ ಬೇಸರ ವ್ಯಕ್ತಪಡಿಸಿದ್ದಾರೆ.

ಸೋಮವಾರ ರಾತ್ರಿ ನಡೆದ ಸಭೆಯಲ್ಲಿ ಈ ಕುರಿತು ಪ್ರಸ್ತಾಪಿಸಿದ ಶಾ, ಸ್ವಜನ ಪಕ್ಷಪಾತ, ಸಚಿವರ ಕಚೇರಿ ಕೆಲಸಗಳಲ್ಲಿ ಕುಟುಂಬದವರ ಹಸ್ತಕ್ಷೇಪ, ಭ್ರಷ್ಟಾಚಾರದ ಆಪಾದನೆಗಳ ಬಗ್ಗೆ ಅತೃಪ್ತಿ ವ್ಯಕ್ತಪಡಿಸಿದರು ಎಂದು ಗೊತ್ತಾಗಿದೆ.

ಬೊಮ್ಮಾಯಿ ನೇತೃತ್ವದ ಸರ್ಕಾರ ಅನೇಕ ಜನಪರ ಕಾರ್ಯಕ್ರಮಗಳನ್ನು ಕೈಗೊಂಡಿದೆ. ಅಭಿವೃದ್ಧಿಯತ್ತ ರಾಜ್ಯವನ್ನು ಕೊಂಡೊಯ್ಯಲು ಕೆಲಸ ಮಾಡುತ್ತಿದೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಜನಪರ ಕಾರ್ಯಕ್ರಮಗಳನ್ನು ಜನರಿಗೆ ತಲುಪಿಸಿ ಸರ್ಕಾರದ ವರ್ಚಸ್ಸು ಹೆಚ್ಚಿಸುವ ಕೆಲಸವನ್ನು ಸಚಿವರು ಮಾಡಬೇಕಿತ್ತು. ಆದರೆ, ಕೆಲವು ಸಚಿವರ ವರ್ತನೆಗಳು ಹೆಚ್ಚು ಸದ್ದು ಮಾಡುತ್ತಿವೆ. ಇದು ತಪ್ಪಬೇಕಿದೆ ಎಂದು ಕಿವಿಮಾತು ಹೇಳಿದರು ಎಂದು ತಿಳಿದುಬಂದಿದೆ. ಕೇಂದ್ರ ಸರ್ಕಾರ ಏಳು ವರ್ಷ ಆಡಳಿತ ನಡೆಸಿಯೂ ಎಲ್ಲೂ ಹೆಸರು ಕೆಡಿಸಿಕೊಂಡಿಲ್ಲ. ಅನೇಕ ರಾಜ್ಯಗಳಲ್ಲಿ ಅಧಿಕಾರ ನಡೆಸುತ್ತಿದ್ದರೂ ಭ್ರಷ್ಟಾಚಾರದ ಆರೋಪಗಳು ಬಂದಿಲ್ಲ. ಕರ್ನಾಟಕದಲ್ಲಿ 2008ರಲ್ಲಿ ಮತ್ತು ಈಗಿನ ಅವಧಿಯಲ್ಲಿ ಆರೋಪಗಳನ್ನು ಎದುರಿಸಬೇಕಾಗಿದೆ. ಸಚಿವರು ರಾಜೀನಾಮೆ ಕೊಡಬೇಕಾದ ಪರಿಸ್ಥಿತಿ ಸೃಷ್ಟಿಯಾಗಿತ್ತು. ಇದು ಸರ್ಕಾರಕ್ಕೆ ಒಳ್ಳೆಯ ಹೆಸರು ತರುವುದಿಲ್ಲ. ಇದರ ಬಗ್ಗೆ ಎಚ್ಚರವಹಿಸಬೇಕಿದೆ ಎಂದು ಸೂಚನೆ ನೀಡಿದ್ದಾಗಿ ಗೊತ್ತಾಗಿದೆ.

ಭ್ರಷ್ಟಾಚಾರದ ಬಗ್ಗೆ ಗುತ್ತಿಗೆದಾರರೇ ಪ್ರಧಾನಿ ಕಚೇರಿಗೆ ಪತ್ರ ಬರೆಯುತ್ತಿದ್ದಾರೆ. ಸಚಿವರ ಸೋದರರು, ಕುಟುಂಬದವರು ಅಧಿಕಾರದಲ್ಲಿ ಹಸ್ತಕ್ಷೇಪ ಮಾಡುತ್ತಿರುವ ಆಪಾದನೆಗಳಿವೆ. ಇಲಾಖೆ ಉಸ್ತುವಾರಿ ಹೊತ್ತ ಸಚಿವರನ್ನು ಬಿಟ್ಟು ಅವರ ಕುಟುಂಬದವರಿಗೆ ಏನು ಕೆಲಸ ಎಂದು ಪ್ರಶ್ನಿಸಿದ ಅಮಿತ್‌ಶಾ, ಚುನಾವಣೆಯನ್ನು ಎದುರಿಸಬೇಕಾದ ಹೊತ್ತಿನಲ್ಲಿ ಕಳಂಕರಹಿತ ಆಡಳಿತ ನೀಡುವತ್ತ ಆದ್ಯತೆ ಕೊಡಬೇಕಿದೆ. ಸಚಿವರ ಇಂತಹ ಲೋಪಗಳನ್ನೇ ಅಸ್ತ್ರವಾಗಿ ಮಾಡಿಕೊಂಡಿರುವ ಕಾಂಗ್ರೆಸ್ ಪಕ್ಷದವರು ಸರ್ಕಾರದ ವರ್ಚಸ್ಸು ಕೆಡಿಸುವ ಕೆಲಸ ಮಾಡುತ್ತಿದ್ದಾರೆ. ಅವರ ಕೈಗೆ ಅಸ್ತ್ರ ಸಿಗದಂತೆ ಜಾಗೃತೆಯಿಂದ ಕೆಲಸ ಮಾಡಬೇಕು ಎಂದು ತಿಳಿ ಹೇಳಿದ್ದಾರೆ.

'ಪ್ರಧಾನಿ ವಿದೇಶ ಪ್ರವಾಸದ ಬಳಿಕ ಬದಲಾವಣೆ'

ವಿಜಯಪುರ: 'ರಾಜ್ಯದಲ್ಲಿ ಮುಖ್ಯಮಂತ್ರಿ ಬದಲಾವಣೆ ಅಥವಾ ಸಚಿವ ಸಂಪುಟ ಪುನರ್ ರಚನೆ ತೀರ್ಮಾನವು ಪ್ರಧಾನಿ ನರೇಂದ್ರ ಮೋದಿ ಅವರು ವಿದೇಶ ಪ್ರವಾಸದಿಂದ ವಾಪಸ್ಸಾದ ಬಳಿಕ ಆಗಲಿದೆ' ಎಂದು ವಿಜಯಪುರ ನಗರ ಬಿಜೆಪಿ ಶಾಸಕ ಬಸನಗೌಡ ಪಾಟೀಲ ಯತ್ನಾಳ ಹೇಳಿದರು.

ನಗರದಲ್ಲಿ ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಮೇ 10ರೊಳಗೆ ರಾಜ್ಯದ ವಿದ್ಯಮಾನಗಳ ಬಗ್ಗೆ ಸ್ಪಷ್ಟ ಚಿತ್ರಣ ಲಭಿಸಲಿದೆ' ಎಂದು ಅವರು ತಿಳಿಸಿದರು.

'ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಪಕ್ಷವನ್ನು ಮರಳಿ ಅಧಿಕಾರಕ್ಕೆ ತರುವ ಕುರಿತು ದೆಹಲಿಯಲ್ಲಿ ಉನ್ನತ ಮಟ್ಟದ ಸಭೆ ಆಗಿದೆ. ಕೇಂದ್ರ ಗೃಹ ಸಚಿವ ಅಮಿತ್ ಶಾ, ಬಿಜೆಪಿ ರಾಜ್ಯ ಉಸ್ತುವಾರಿ ಅರುಣ್ ಸಿಂಗ್ ಕರ್ನಾಟಕಕ್ಕೆ ಬಂದಿದ್ದಾರೆ. ಶೀಘ್ರದಲ್ಲೇ ಒಳ್ಳೆಯ ನಿರ್ಣಯ ಕೈಗೊಳ್ಳಲಿದ್ದಾರೆ' ಎಂದರು.

ರಾಹುಲ್ ಗಾಂಧಿ ವಿಡಿಯೊ ಹಂಚಿಕೊಂಡ ಬಿಜೆಪಿ • ಕಾಂಗ್ರೆಸ್‌ನಿಂದ ತಿರುಗೇಟು

ಕಮಲ – ಕೈ 'ನೈಟ್‌ಕ್ಲಬ್' ವಾಕ್ಸಮರ

ಪ್ರಜಾವಾಣಿ ವಾರ್ತೆ

ನವದೆಹಲಿ: ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರ 12 ಸೆಕೆಂಡ್‌ಗಳ ವಿಡಿಯೊ ಒಂದನ್ನು ಬಿಜೆಪಿ ಐಟಿ ವಿಭಾಗದ ಮುಖ್ಯಸ್ಥ ಅಮಿತ್ ಮಾಳವೀಯ ಅವರು ಟ್ವೀಟ್ ಮಾಡಿದ್ದು, 'ಕಾಂಗ್ರೆಸ್ ಬಿಕ್ಕಟ್ಟಿನಲ್ಲಿರುವಾಗ ರಾಹುಲ್ ನೈಟ್‌ಕ್ಲಬ್‌ನಲ್ಲಿ ಇದ್ದಾರೆ' ಎಂದು ಲೇವಡಿ ಮಾಡಿದ್ದಾರೆ. ಇದಕ್ಕೆ ಪ್ರತಿಕ್ರಿಯೆ ನೀಡಿರುವ ಕಾಂಗ್ರೆಸ್, ಮದುವೆ ಸಮಾರಂಭವೊಂದರಲ್ಲಿ ಭಾಗಿಯಾಗುವುದು ಅಪರಾಧವಲ್ಲ ಎಂದು ತಿರುಗೇಟು ನೀಡಿದೆ.

ರಾಹುಲ್ ಗಾಂಧಿ ಅವರು ಯುವತಿಯೊಬ್ಬರ ಜತೆಗೆ ಕಾರ್ಯಕ್ರಮವೊಂದರಲ್ಲಿ ಇರುವ ದೃಶ್ಯವು ಮಾಳವೀಯ ಟ್ವೀಟ್ ಮಾಡಿರುವ ವಿಡಿಯೊದಲ್ಲಿದೆ. ಈ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ. 'ಮುಂಬೈ ದಾಳಿಯ ಸಂದರ್ಭದಲ್ಲಿ ರಾಹುಲ್ ಗಾಂಧಿ ನೈಟ್‌ಕ್ಲಬ್‌ನಲ್ಲಿದ್ದರು. ಈಗ ಕಾಂಗ್ರೆಸ್ ಛಿದ್ರವಾಗುತ್ತಿರುವಾಗಲೂ ಅವರು ನೈಟ್‌ಕ್ಲಬ್‌ನಲ್ಲಿದ್ದಾರೆ. ಅವರ ವರ್ತನೆ ಒಂದೇ ತೆರನಾಗಿದೆ' ಎಂದು ಮಾಳವೀಯ ಟ್ವೀಟ್ ಮಾಡಿದ್ದಾರೆ. ಜತೆಗೆ, 'ಕಾಂಗ್ರೆಸ್ ತನ್ನ ಅಧ್ಯಕ್ಷತೆಯನ್ನು ಹೊರಗುತ್ತಿಗೆ ನೀಡಲು ನಿರಾಕರಿಸಿದ ನಂತರ, ಅವರ ಪ್ರಧಾನಿ ಅಭ್ಯರ್ಥಿಯನ್ನು ರಾಜಕೀಯವಾಗಿ ಮುಗಿಸುವ



ರಾಹುಲ್ ಗಾಂಧಿ ಅವರು ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದ ವಿಡಿಯೊದ ಸ್ಕ್ರೀನ್‌ಶಾಟ್ ಯುವ ಕಾಂಗ್ರೆಸ್ ಅಧ್ಯಕ್ಷ ಶ್ರೀನಿವಾಸ್ ಬಿ.ವಿ. ಅವರು ಈ ಸ್ಕ್ರೀನ್‌ಶಾಟ್ ಅನ್ನು ತಮ್ಮ ಟ್ವಿಟರ್ ಖಾತೆಯ ಪ್ರೊಫೈಲ್ ಚಿತ್ರವನ್ನಾಗಿಸಿದ್ದಾರೆ

ಕಾರ್ಯ ಆರಂಭವಾಗಿದೆ' ಎಂದೂ ಅವರು ಟ್ವೀಟ್ ಮಾಡಿದ್ದಾರೆ.

ಲೋಕಸಭೆಯಲ್ಲಿ ಕಾಂಗ್ರೆಸ್ ಮುಖ್ಯ ಸಚೇತಕ ಮಾಣಿಕಮ್ ಟ್ಯಾಗೋರ್ ಅವರು ರಾಹುಲ್ ನೈಟ್‌ಕ್ಲಬ್‌ನಲ್ಲಿದ್ದಾರೆ ಎಂದಿರುವ ಮಾಳವೀಯ ಅವರ ಟ್ವೀಟ್‌ಗೆ ಪ್ರತಿಕ್ರಿಯಿಸಿ, 'ನಾವೆಲ್ಲರೂ ಖಾಸಗಿಕಾರ್ಯಕ್ರಮಗಳಲ್ಲಿ ಭಾಗಿಯಾಗುತ್ತೇವೆ. ಮದುವೆ ಆರತಕ್ಷತೆಯಲ್ಲಿ ರಾಹುಲ್ ಪಾಲ್ಗೊಳ್ಳುವುದರಲ್ಲಿ ತಪ್ಪೇನಿದೆ? ಸಂಘಿಗಳು ರಾಹುಲ್‌ಗೆ ಹೆದರುವುದೇಕೆ? ಸಂಘಿಗಳು ಸುಳ್ಳು ಹಬ್ಬಿಸುವುದೇಕೆ' ಎಂದು ಪ್ರಶ್ನಿಸಿದ್ದಾರೆ.

ರಾಹುಲ್ ಗಾಂಧಿ ಅವರು ನೇಪಾಳದ ರಾಜಧಾನಿ ಕಠ್ಮಂಡುವಿನಲ್ಲಿ ತಮ್ಮ ಗೆಳತಿ ಸುಮ್ನಿಮಾ ಉದಾಸ್ ಅವರ ಮದುವೆ ಸಮಾರಂಭದಲ್ಲಿ ಭಾಗಿಯಾಗಿದ್ದಾರೆ ಎಂದು ಕಠ್ಮಂಡು ಪೋಸ್ಟ್ ವರದಿ ಮಾಡಿದೆ. 'ನನ್ನ ಮಗಳ ಮದುವೆಗೆ ರಾಹುಲ್ ಗಾಂಧಿ ಅವರಿಗೆ ಆಹ್ವಾನ ನೀಡಿದ್ದೆವು. ಜತೆಗೆ ಭಾರತದ ಕೆಲವು ಅತಿಥಿಗಳಿಗೂ ಆಹ್ವಾನ ನೀಡಿದ್ದೆವು' ಎಂದು ಸುಮ್ನಿಮಾ ಅವರ ತಂದೆ ಭೀಮ ಉದಾಸ್ ಅವರು ಹೇಳಿದ್ದಾರೆ ಎಂದು ಕಠ್ಮಂಡು ಪೋಸ್ಟ್ ವರದಿ ಮಾಡಿದೆ. ಭೀಮ ಉದಾಸ್ ಅವರು ಮ್ಯಾನ್ಮಾರ್‌ನಲ್ಲಿ ನೇಪಾಳದ ರಾಯಭಾರಿಯಾಗಿ ಸೇವೆ ಸಲ್ಲಿಸಿದ್ದರು.

> ನಿರುದ್ಯೋಗ, ಕಲ್ಲಿದ್ದಲು ಮತ್ತು ವಿದ್ಯುತ್ ಕೊರತೆ, ಆರ್ಥಿಕ ಬಿಕ್ಕಟ್ಟು, ಹಣದುಬ್ಬರ ಇವು ದೇಶದ ಸಮಸ್ಯೆಗಳು. ಆದರೆ, ಬಿಜೆಪಿ 'ರಾಹುಲ್ ನೈಟ್‌ಕ್ಲಬ್‌ನಲ್ಲಿ' ಎಂದಷ್ಟೇ ಉತ್ತರಿಸುತ್ತದೆ
> **ಶ್ರೀನಿವಾಸ್ ಬಿ.ವಿ.**
> ಯುವ ಕಾಂಗ್ರೆಸ್ ಅಧ್ಯಕ್ಷ

'ಮೋದಿಯಂತೆ ಪಾಕಿಸ್ತಾನಕ್ಕೆ ಹೋಗಿಲ್ಲ'

ಪ್ರಧಾನಿ ನರೇಂದ್ರ ಮೋದಿ ಆಹ್ವಾನವಿಲ್ಲದಿದ್ದರೂ ಪಾಕಿಸ್ತಾನಕ್ಕೆ ಹೋಗಿದ್ದರು. ರಾಹುಲ್ ಆ ರೀತಿ ಮಾಡಿಲ್ಲ ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲಾ ತಿರುಗೇಟು ನೀಡಿದ್ದಾರೆ.

'ಪಾಕಿಸ್ತಾನ ಪ್ರಧಾನಿಯಾಗಿದ್ದ ನವಾಜ್ ಷರೀಫ್ ಅವರ ಜನ್ಮದಿನಾಚರಣೆಗೆ ಆಹ್ವಾನ ಇಲ್ಲದಿದ್ದರೂ ಮೋದಿ ಹೋಗಿದ್ದರು. ಆದರೆ ರಾಹುಲ್ ಹೋಗಿರುವುದು ನಮ್ಮೊಂದಿಗೆ ಸ್ನೇಹ ಸಂಬಂಧ ಹೊಂದಿರುವ ನೇಪಾಳಕ್ಕೆ. ತಮ್ಮ ಗೆಳತಿಯೊಬ್ಬರ ಮದುವೆಯ ಖಾಸಗಿ ಕಾರ್ಯಕ್ರಮದಲ್ಲಿ ಅವರು ಭಾಗಿಯಾಗಿದ್ದಾರೆ. ಆ ಗೆಳತಿ ಪತ್ರಕರ್ತೆಯೂ ಹೌದು' ಎಂದು ಸುರ್ಜೇವಾಲಾ ಹೇಳಿದ್ದಾರೆ.

'ಕುಟುಂಬ ಹೊಂದಿರುವುದು, ಸ್ನೇಹಿತರನ್ನು ಹೊಂದುವುದು, ಮದುವೆ ಮತ್ತು ನಿಶ್ಚಿತಾರ್ಥದಂತಹ ಕಾರ್ಯಕ್ರಮಗಳಲ್ಲಿ ಭಾಗಿಯಾಗುವುದು ನಮ್ಮ ಸಂಸ್ಕೃತಿ ಮತ್ತು ನಾಗರಿಕತೆ. ಕುಟುಂಬ ಮತ್ತು ಸ್ನೇಹಿತರನ್ನು ಹೊಂದುವುದು ಹಾಗೂ ಮದುವೆಯಂತಹ ಕಾರ್ಯಕ್ರಮಗಳಲ್ಲಿ ಭಾಗಿಯಾಗುವುದು ಈ ದೇಶದಲ್ಲಿ ಇನ್ನೂ ಅಪರಾಧವಾಗಿಲ್ಲ. ಮದುವೆಯಲ್ಲಿ ಭಾಗಿಯಾಗುವುದು ಕಾನೂನು ಬಾಹಿರ ಎಂದು, ಬಹುಶಃ ಇಂದಿನಿಂದ ಪ್ರಧಾನಿ ನರೇಂದ್ರ ಮೋದಿ ಅಥವಾ ಬಿಜೆಪಿ ಘೋಷಿಸಬಹುದು. ಸ್ನೇಹಿತರನ್ನು ಹೊಂದುವುದು ಮತ್ತು ಕುಟುಂಬದ ಕಾರ್ಯಕ್ರಮಗಳಲ್ಲಿ ಭಾಗಿಯಾಗುವುದು ಅಪರಾಧ ಎಂದೂ ಅವರು ಹೇಳಬಹುದು' ಎಂದು ಸುರ್ಜೇವಾಲಾ ಲೇವಡಿ ಮಾಡಿದ್ದಾರೆ.

ಮಾಳವೀಯ ಟ್ವೀಟ್‌ಗೆ ಪ್ರತಿಯಾಗಿ ಯುವ ಕಾಂಗ್ರೆಸ್ ರಾಷ್ಟ್ರೀಯ ಅಧ್ಯಕ್ಷ ಶ್ರೀನಿವಾಸ್ ಬಿ.ವಿ. ಅವರು ಬಿಜೆಪಿ ನಾಯಕರು ಪಾರ್ಟಿಗಳಲ್ಲಿ ಮದ್ಯ ಸೇವಿಸುತ್ತಿರುವ ಚಿತ್ರಗಳನ್ನು ಟ್ವೀಟ್ ಮಾಡಿದ್ದಾರೆ. ಮಾಜಿ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅವರು, ಪಾಕಿಸ್ತಾನದ ಮಾಜಿ ಅಧ್ಯಕ್ಷ ಜನರಲ್ ಪರ್ವೇಜ್ ಮುಷರಫ್ ಅವರ ಪತ್ನಿ ಜತೆಗೆ ರಾಷ್ಟ್ರಪತಿ ಭವನದಲ್ಲಿ ವೈನ್ ಸೇವಿಸುತ್ತಿರುವ ಚಿತ್ರವನ್ನು ಅವರು ಟ್ವೀಟ್ ಮಾಡಿದ್ದಾರೆ. ಜತೆಗೆ ಕೇಂದ್ರ ಸಚಿವ ಪ್ರಕಾಶ್ ಜಾವಡೇಕರ್ ಅವರು ಪಾರ್ಟಿಯೊಂದರಲ್ಲಿ ಶಾಂಪೇನ್ ಚಿಮ್ಮಿಸುತ್ತಿರುವ ಚಿತ್ರವನ್ನು ಶ್ರೀನಿವಾಸ್ ಟ್ವೀಟ್ ಮಾಡಿದ್ದಾರೆ.



ಗ್ಯಾನೇಶ್ವರಿ ಯಾದವ್– ಸಾಯ್ ಮೀಡಿಯಾ ಟ್ವಿಟರ್ ಚಿತ್ರ

ಗ್ಯಾನೇಶ್ವರಿಗೆ ಬೆಳ್ಳಿ; ಕಂಚು ಗೆದ್ದ ರಿತಿಕಾ

ವಿಶ್ವ ಜೂನಿಯರ್ ವೇಟ್‌ಲಿಫ್ಟಿಂಗ್ ಚಾಂಪಿಯನ್‌ಷಿಪ್

ನವದೆಹಲಿ (ಪಿಟಿಐ): ವಿಶ್ವ ಜೂನಿಯರ್ ವೇಟ್‌ಲಿಫ್ಟಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಭಾರತಕ್ಕೆ ಸೋಮವಾರ 'ಡಬಲ್' ಪದಕಗಳ ಸಂಭ್ರಮ. ಗ್ರೀಸ್‌ನ ಹೆರಾಕ್ಲಿಯೊನ್‌ನಲ್ಲಿ ನಡೆಯುತ್ತಿರುವ ಐಡಬ್ಲ್ಯುಎಫ್ ಚಾಂಪಿಯನ್‌ಷಿಪ್‌ನ 49 ಕೆಜಿ ವಿಭಾಗದಲ್ಲಿ ಗ್ಯಾನೇಶ್ವರಿ ಯಾದವ್ ಬೆಳ್ಳಿ ಪದಕಕ್ಕೆ ಮುತ್ತಿಟ್ಟರೆ, ವಿ.ರಿತಿಕಾ ಕಂಚು ಕೊರಳಿಗೇರಿಸಿಕೊಂಡರು.

ಗ್ಯಾನೇಶ್ವರಿ ಒಟ್ಟು 156 ಕೆಜಿ (ಸ್ನ್ಯಾಚ್ 73 ಕೆಜಿ+ ಕ್ಲೀನ್ ಆ್ಯಂಡ್ ಜರ್ಕ್ 83 ಕೆಜಿ) ಭಾರ ಎತ್ತುವ ಮೂಲಕ ಬೆಳ್ಳಿ ಪದಕ ತಮ್ಮದಾಗಿಸಿಕೊಂಡರು.

49 ಕೆಜಿ ವಿಭಾಗದಲ್ಲೇ ಸ್ಪರ್ಧಿಸಿದ್ದ ರಿತಿಕಾ (ಒಟ್ಟು 150 = 69 + 81) ಗ್ಯಾನೇಶ್ವರಿ ಅವರಿಗಿಂತ ಆರು ಕೆಜಿ ಕಡಿಮೆ ಭಾರ ಎತ್ತಿ ಕಂಚು ಜಯಿಸಿದರು.

ಟೋಕಿಯೊ ಒಲಿಂಪಿಕ್ಸ್ ಕಂಚಿನ ಪದಕ ವಿಜೇತೆ ಇಂಡೊನೇಷ್ಯಾದ ವಿಂಡಿ ಕ್ಯಾಂಟಿಕಾ ಐಸಾಹ್ ಒಟ್ಟು 185 ಕೆಜಿ (83 + 102) ಸಾಧನೆಯೊಂದಿಗೆ ಚಿನ್ನದ ಪದಕ ಮುಡಿಗೇರಿಸಿಕೊಂಡರು. ಅವರು 206 ಕೆಜಿ (92 + 114) ಭಾರ ಎತ್ತಿದ್ದರು. ಪ್ರಮುಖ ಸ್ಪರ್ಧಿಗಳಾದ ಚೀನಾ, ಉತ್ತರ ಕೊರಿಯಾ ಮತ್ತು ಥಾಯ್ಲೆಂಡ್ ವೇಟ್‌ಲಿಫ್ಟರ್‌ಗಳು ಇಲ್ಲಿ ಕಣಕ್ಕಿಳಿದಿರಲಿಲ್ಲ.

ಇದೇ ವಿಭಾಗದಲ್ಲಿ ಮೀರಾಬಾಯಿ ಚಾನು 202 ಕೆಜಿ ಸಾಧನೆಯೊಂದಿಗೆ ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಬೆಳ್ಳಿ ಪದಕ ಗೆದ್ದುಕೊಂಡಿದ್ದರು. ಈ ಎರಡು ಪದಕಗಳೊಂದಿಗೆ ಭಾರತ ಗೆದ್ದ ಪದಕಗಳ ಸಂಖ್ಯೆ ಮೂರಕ್ಕೇರಿದೆ.

ಐಟಿಟಿಎಫ್ ರ‍್ಯಾಂಕಿಂಗ್: ಮಣಿಕಾ, ಸತ್ಯನ್‌ಗೆ ಬಡ್ತಿ

ನವದೆಹಲಿ (ಪಿಟಿಐ): ಪಾಯಿಂಟ್ಸ್ ಪದ್ಧತಿಯಲ್ಲಿ ಬದಲಾವಣೆ ತಂದ ಬಳಿಕ ಮಣಿಕಾ ಬಾತ್ರಾ ಸೇರಿದಂತೆ ಭಾರತದ ಟೇಬಲ್ ಟೆನಿಸ್ ಪಟುಗಳು ಐಟಿಟಿಎಫ್ ವಿಶ್ವ ರ‍್ಯಾಂಕಿಂಗ್‌ನಲ್ಲಿ ಭಾರಿ ಪ್ರಗತಿ ಸಾಧಿಸಿದ್ದಾರೆ.

ಮಹಿಳೆಯರ ಸಿಂಗಲ್ಸ್ ವಿಭಾಗದಲ್ಲಿ ಮಣಿಕಾ ಜೀವನಶ್ರೇಷ್ಠ 38ನೇ ಸ್ಥಾನಕ್ಕೆ ತಲುಪಿದ್ದರೆ, ಜಿ.ಸತ್ಯನ್ ಪುರುಷರ ವಿಭಾಗದಲ್ಲಿ 34ನೇ ಸ್ಥಾನಕ್ಕೆ ಜಿಗಿದಿದ್ದಾರೆ.

ಕಳೆದ ವಾರ 10ನೇ ರಾಷ್ಟ್ರೀಯ ಪ್ರಶಸ್ತಿಗೆ ಮುತ್ತಿಕ್ಕಿದ ಅನುಭವಿ ಆಟಗಾರ ಅಚಂತ ಶರತ್ ಕಮಲ್ 37ನೇ ಸ್ಥಾನಕ್ಕೇರಿದ್ದಾರೆ. ಮಹಿಳಾ ವಿಭಾಗದಲ್ಲಿ ಪ್ರಶಸ್ತಿ ಜಯಿಸಿದ್ದ ಶ್ರೀಜಾ ಅಕುಲಾ 39 ಸ್ಥಾನಗಳ ಏರಿಕೆ ಕಂಡು 68ನೇ ಸ್ಥಾನಕ್ಕೆ ತಲುಪಿದ್ದಾರೆ.

ಕರ್ನಾಟಕದ ಅರ್ಚನಾ ಕಾಮತ್ 92ನೇ ಸ್ಥಾನದಿಂದ 66ನೇ ಸ್ಥಾನಕ್ಕೆ ಬಡ್ತಿ ಪಡೆದಿದ್ದಾರೆ.

ಚೆಸ್: ವೈಶಾಲಿಗೆ ಪ್ರಶಸ್ತಿ



ಆರ್.ವೈಶಾಲಿ

ಹೆರಾಕ್ಲಿಯೊನ್, ಗ್ರೀಸ್ (ಪಿಟಿಐ): ಭಾರತದ ಮಹಿಳಾ ಗ್ರ್ಯಾಂಡ್ ಮಾಸ್ಟರ್ ಆರ್. ವೈಶಾಲಿ ಅವರು ಮಂಗಳವಾರ ಹೆರಾಕ್ಲಿನ್ ಫಿಶರ್ ಮೆಮೊರಿಯಲ್ ಚೆಸ್ ಟೂರ್ನಿಯಲ್ಲಿ ಪ್ರಶಸ್ತಿ ಜಯಿಸಿದ್ದಾರೆ.

ಟೂರ್ನಿಯ ಒಂಬತ್ತು ಸುತ್ತುಗಳಲ್ಲಿ ಅವರು ಏಳು ಪಾಯಿಂಟ್ಸ್ ಗಳಿಸಿದರು. ಇದೇ ವೇಳೆ ಅವರು ಎರಡನೇ ಬಾರಿ ಗ್ರ್ಯಾಂಡ್‌ಮಾಸ್ಟರ್ ನಾರ್ಮ್ ಕೂಡ ಗಳಿಸಿದರು.

ಕೋವಿಡ್: ಮೃತಪಟ್ಟ ವೈದ್ಯರ ಕುಟುಂಬಕ್ಕೆ ₹1 ಕೋಟಿ

ನವದೆಹಲಿ (ಪಿಟಿಐ): ಕೋವಿಡ್‌ನಿಂದ ಮೃತಪಟ್ಟ ವೈದ್ಯ ಡಾ. ಸಂಜೀವ್ ಕುಮಾರ್ ಅವರ ಕುಟುಂಬಕ್ಕೆ ದೆಹಲಿ ಆರೋಗ್ಯ ಸಚಿವ ಸತ್ಯೇಂದರ್ ಜೈನ್ ₹1 ಕೋಟಿ ಪರಿಹಾರ ನೀಡಿದ್ದಾರೆ.


ಈ ಬಗ್ಗೆ ಮಾಹಿತಿ ನೀಡಿದ ಜೈನ್, 'ಈ ಪರಿಹಾರ ಮೊತ್ತದಿಂದ ಜೈನ್ ಅವರ ಕುಟುಂಬಕ್ಕಾದ ನಷ್ಟವನ್ನು ಭರಿಸಲು ಸಾಧ್ಯವಿಲ್ಲ. ಆದರೆ ಈ ಹಣದಿಂದ ಅವರ ಕುಟುಂಬವು ಸ್ವಲ್ಪ ಸಹಾಯವನ್ನು ಪಡೆಯಬಹುದು ಎಂದು ನಾನು ಭಾವಿಸುತ್ತೇನೆ' ಎಂದು ಹೇಳಿದರು.

'ಮಾನವೀಯತೆಗೆ ಹಾಗೂ ಸಮಾಜಕ್ಕೆ ಸೇವೆ ನೀಡುವ ಸಂದರ್ಭದಲ್ಲಿ ಕೊರೊನಾ ಮುಂಚೂಣಿ ಕಾರ್ಯಕರ್ತರು ತಮ್ಮ ಜೀವ ಕಳೆದುಕೊಂಡಿದ್ದಾರೆ. ಅವರ ಕಠಿಣ ಪರಿಶ್ರಮ ಹಾಗೂ ಉತ್ಸಾಹಕ್ಕೆ ಹೃತ್ಪೂರ್ವಕವಾಗಿ ವಂದಿಸುತ್ತೇನೆ' ಎಂದು ಜೈನ್ ಹೇಳಿದರು.

ನವದೆಹಲಿಯಲ್ಲಿ ಪ್ರಕರಣಗಳ ಸಂಖ್ಯೆ, ದೃಢಪಡುವಿಕೆ ಪ್ರಮಾಣ ಅಧಿಕ

'ಕೋವಿಡ್ ಹೆಚ್ಚಳ ಹೊಸ ಅಲೆ ಸೂಚಕವಲ್ಲ'

ನವದೆಹಲಿ (ಪಿಟಿಐ): ಕಳೆದ ಕೆಲವು ವಾರಗಳಿಂದ ನವದೆಹಲಿಯಲ್ಲಿ ಕೋವಿಡ್ ಪ್ರಕರಣಗಳ ಸಂಖ್ಯೆ ಮತ್ತು ದೃಢಪಡುವಿಕೆ ಪ್ರಮಾಣ ಹೆಚ್ಚಾಗಿರುವುದು ಸಾಂಕ್ರಾಮಿಕದ ಹೊಸ ಅಲೆಯ ಸೂಚಕವಲ್ಲ. ಆದರೆ, ಜನರು ನಿರ್ಲಕ್ಷ್ಯ ವಹಿಸಬಾರದು. ಸಾಂಕ್ರಾಮಿಕ ಹರಡುವುದನ್ನು ತಡೆಯಲು ಮುನ್ನೆಚ್ಚರಿಕಾ ಕ್ರಮಗಳನ್ನು ಪಾಲಿಸಬೇಕು ಎಂದು ತಜ್ಞರು ಹೇಳಿದ್ದಾರೆ.



ದೃಢಪಡುವಿಕೆ ಪ್ರಮಾಣ ಸ್ಥಿರವಾಗಿದೆ. ಒಂದೇ ಪ್ರಮಾಣದಲ್ಲಿ ಸೋಂಕು ಹರಡುತ್ತಿರುವುದನ್ನು ಇದು ಸೂಚಿಸುತ್ತದೆ. ಹೊಸ ಅಲೆ ಕಾಣಿಸಿಲ್ಲ ಎಂದು ಸಾಂಕ್ರಾಮಿಕ ರೋಗಶಾಸ್ತ್ರಜ್ಞ ಡಾ. ಚಂದ್ರಕಾಂತ್ ಲಹರಿಯಾ ತಿಳಿಸಿದ್ದಾರೆ.

ಆಸ್ಪತ್ರೆಗೆ ದಾಖಲಾಗುವವರ ಪ್ರಮಾಣದಲ್ಲಿಯೂ ಸೂಕ್ಷ್ಮ ಬದಲಾವಣೆ ಕಾಣಿಸಿದೆ. ಇದರಿಂದ ಕೋವಿಡ್ ಹೊಸ ಅಲೆ ಇಲ್ಲ ಎಂಬುದು ಸಾಬೀತಾಗಿದೆ. ಕೇವಲ ಸಂಖ್ಯೆಗಳ ಆಧಾರದಲ್ಲಿ ಏನೂ ಹೇಳಲಾಗದು. ಹೆಚ್ಚು ಪರೀಕ್ಷೆ ನಡೆಸಿದಾಗ ಹೆಚ್ಚು ಪ್ರಕರಣಗಳು ಪತ್ತೆಯಾಗುತ್ತವೆ ಎಂದು ಅವರು ಹೇಳಿದ್ದಾರೆ.

ಕೊವೊವ್ಯಾಕ್ಸ್ ಲಸಿಕೆ: ₹900ರಿಂದ ₹225ಕ್ಕೆ ಇಳಿಕೆ

ನವದೆಹಲಿ (ಪಿಟಿಐ): ಖಾಸಗಿ ಲಸಿಕಾ ಕೇಂದ್ರಗಳಲ್ಲಿ 12ರಿಂದ 17 ವಯಸ್ಸಿನ ಮಕ್ಕಳಿಗೆ ನೀಡುವ 'ಕೊವೊವ್ಯಾಕ್ಸ್' ಲಸಿಕೆಯ ಪ್ರತಿ ಡೋಸ್‌ನ ದರವನ್ನು ₹ 900ರಿಂದ ₹ 225ಕ್ಕೆ ಇಳಿಸಿರುವುದಾಗಿ ಸೀರಂ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾ (ಎಸ್‌ಐಐ) ಮಂಗಳವಾರ ತಿಳಿಸಿದೆ. ಕೋವಿಡ್– 19ರ ಕುರಿತ ರಾಷ್ಟ್ರೀಯ ತಾಂತ್ರಿಕ ಸಲಹಾ ಸಮಿತಿಯ (ಎನ್‌ಟಿಎಜಿಐ) ಶಿಫಾರಸಿನ ಮೇರೆಗೆ ಈ ಲಸಿಕೆ ಆಯ್ಕೆಯನ್ನು ಕೋವಿನ್ ಪೋರ್ಟಲ್‌ನಲ್ಲಿ ಸೋಮವಾರವಷ್ಟೇ ಸೇರಿಸಲಾಗಿದೆ.

ಕೊವೊವಾಕ್ಸ್‌ನ ಪರಿಷ್ಕೃತ ದರವನ್ನು ಕೋವಿನ್ ಪೋರ್ಟಲ್‌ನಲ್ಲಿ ಅಪ್‌ಡೇಟ್ ಮಾಡಲಾಗಿದೆ ಎಂದು ತಿಳಿದು ಬಂದಿದೆ.

'ಲಸಿಕೆ ಮಕ್ಕಳಿಗೆ ಲಭ್ಯ'

ನವದೆಹಲಿ (ಪಿಟಿಐ): ಭಾರತದ ಸೀರಂ ಸಂಸ್ಥೆಯ ಕೊರೊನಾ ಲಸಿಕೆ ಕೊವೊವ್ಯಾಕ್ಸ್ ಈಗ ದೇಶದಾದ್ಯಂತ ಮಕ್ಕಳಿಗೂ ಲಭ್ಯವಿದೆ ಎಂದು ಕಂಪನಿಯ ಸಿಇಒ ಆದಾರ್ ಪೂನಾವಾಲಾ ಮಂಗಳವಾರ ಹೇಳಿದ್ದಾರೆ.

ನೊವಾವ್ಯಾಕ್ಸ್ ಇದನ್ನು ಅಭಿವೃದ್ಧಿಪಡಿಸಿದೆ.

'ಭಾರತದಲ್ಲೇ ತಯಾರಾಗಿರುವ ಲಸಿಕೆಯನ್ನು ಯುರೋಪ್‌ಗೂ ಮಾರಾಟ ಮಾಡಲಾಗಿದೆ. ಇದು ಶೇ 90 ರಷ್ಟು ಪರಿಣಾಮಕಾರಿಯಾಗಿದೆ' ಎಂದೂ ಅವರು ಹೇಳಿದ್ದಾರೆ.

ಕಲ್ಲಿದ್ದಲು ಉತ್ಪಾದನೆ ಏರಿಕೆ

ಏಪ್ರಿಲ್ ತಿಂಗಳಲ್ಲಿ 661.64 ಲಕ್ಷ ಟನ್‌ಗೆ ತಲುಪಿದ ಉತ್ಪಾದನೆ

ಪ್ರಜಾವಾಣಿ ವಾರ್ತೆ

ನವದೆಹಲಿ: ದೇಶದಲ್ಲಿ ವಿದ್ಯುತ್ ಕೊರತೆ ಉಂಟಾಗಿರುವ ಸಮಯದಲ್ಲೇ, ಏಪ್ರಿಲ್ ತಿಂಗಳ ದೇಶದ ಒಟ್ಟು ಕಲ್ಲಿದ್ದಲು ಉತ್ಪಾದನೆ 661.64 ಲಕ್ಷ ಟನ್‌ಗೆ ತಲುಪಿದೆ.

ಕೋಲ್ ಇಂಡಿಯಾ ಲಿಮಿಟೆಡ್ (ಸಿಐಎಲ್) ಹಾಗೂ ಅದರ ಅಂಗಸಂಸ್ಥೆಗಳು ಸೇರಿ 534.7 ಲಕ್ಷ ಟನ್ ಕಲ್ಲಿದ್ದಲು ಉತ್ಪಾದಿಸಿವೆ. ಸಿಂಗರೇಣಿ ಕಂಪನಿಯು (ಎಸ್‌ಸಿಸಿಎಲ್) 53.23 ಲಕ್ಷ ಟನ್ ಕಲ್ಲಿದ್ದಲು ಹೊರತೆಗೆದಿದೆ. ವಿದ್ಯುತ್ ಉತ್ಪಾದನಾ ಕಂಪನಿಗಳಿಗೆ ಹಂಚಿಕೆ ಮಾಡಲಾದ ಗಣಿಗಳು (ಕ್ಯಾಪ್ಟಿವ್) 71.61 ಲಕ್ಷ ಟನ್ ಕಲ್ಲಿದ್ದಲು ಉತ್ಪಾದಿಸಿವೆ.

ಕೋಲ್ ಇಂಡಿಯಾದ ಏಪ್ರಿಲ್ ತಿಂಗಳ ಕಲ್ಲಿದ್ದಲು ಉತ್ಪಾದನೆಯಲ್ಲಿ ಶೇ 6.02ರಷ್ಟು ಹೆಚ್ಚಳವಾಗಿದೆ. ಹಿಂದಿನ ಯಾವ ಏಪ್ರಿಲ್ ತಿಂಗಳಲ್ಲೂ ಇಷ್ಟು ಪ್ರಮಾಣದ ಉತ್ಪಾದನೆ ಆಗಿರಲಿಲ್ಲ. 2019ರಲ್ಲಿ ಗರಿಷ್ಠ 450.29 ಲಕ್ಷ ಟನ್ ಕಲ್ಲಿದ್ದಲು ಹೊರತೆಗೆಯಲಾಗಿತ್ತು. 2021–21ರಲ್ಲಿ 5,960 ಲಕ್ಷ ಟನ್ ಇದ್ದ ಸಂಸ್ಥೆಯ ಕಲ್ಲಿದ್ದಲು ಉತ್ಪಾದನೆಯು, 2021–22ರಲ್ಲಿ 6,220 ಲಕ್ಷ ಟನ್‌ಗೆ ತಲುಪಿದೆ. ಇದೇ ಅವಧಿಯಲ್ಲಿ ಸಿಂಗರೇಣಿ ಕಂಪನಿಯ ಉತ್ಪಾದನೆಯು ಶೇ 28ರಷ್ಟು ಏರಿಕೆಯಾಗಿದೆ. 500 ಲಕ್ಷ ಟನ್‌ನಿಂದ 650 ಲಕ್ಷ ಟನ್‌ಗೆ ಹೆಚ್ಚಳವಾಗಿದೆ. ಕ್ಯಾಪ್ಟಿವ್ ಗಣಿಗಳ ಉತ್ಪಾದನೆ 690 ಲಕ್ಷ ಟನ್‌ನಿಂದ 890 ಲಕ್ಷ ಟನ್‌ಗೆ ಹೆಚ್ಚಳವಾಗಿದೆ.

ಕಲ್ಲಿದ್ದಲಿಗೆ ಬೇಡಿಕೆ ಹೆಚ್ಚಾಗಿರುವ ಕಾರಣ, ಹೆಚ್ಚು ಪ್ರಮಾಣದ ಕಲ್ಲಿದ್ದಲನ್ನು ಸರಬರಾಜು ಮಾಡಲು ರೈಲ್ವೆ ಇಲಾಖೆಯು ತನ್ನ ಹಳೆಯ ಬೋಗಿಗಳನ್ನು ಸಜ್ಜುಗೊಳಿಸುತ್ತಿದೆ. ಕಲ್ಲಿದ್ದಲು ಗಣಿಗಳಿಂದ ವಿದ್ಯುತ್ ಉತ್ಪಾದನಾ ಘಟಕಗಳಿಗೆ ಕಲ್ಲಿದ್ದಲು ಸಾಗಿಸಲು ₹150 ಕೋಟಿ ವೆಚ್ಚದಲ್ಲಿ 2,179 ಬೋಗಿಗಳನ್ನು ದುರಸ್ತಿ ಮಾಡಲಾಗಿದೆ ಎಂದು ರೈಲ್ವೆ ತಿಳಿಸಿದೆ. ಕಲ್ಲಿದ್ದಲು ಸಾಗಿಸುವ ಸರಾಸರಿ ರೈಲುಗಳ ಸಂಖ್ಯೆಯನ್ನೂ ಹೆಚ್ಚಿಸಲಾಗಿದೆ. ಈಗ ಪ್ರತಿನಿತ್ಯ 400ಕ್ಕೂ ಹೆಚ್ಚು ಕಲ್ಲಿದ್ದಲು ಸಾಗಣೆ ರೈಲುಗಳು ಓಡಾಡುತ್ತಿದ್ದು, ಇತ್ತೀಚಿನ ವರ್ಷಗಳಲ್ಲೇ ಇದು ಅಧಿಕ ಎಂದು ಇಲಾಖೆ ತಿಳಿಸಿದೆ.

ಒಟ್ಟು ಕಲ್ಲಿದ್ದಲು ಉತ್ಪಾದನೆ (ಲಕ್ಷ ಟನ್)

7,160	2020-21
7,770	2021-22



ರಾಜ್ ಠಾಕ್ರೆ ವಿರುದ್ಧ ಪ್ರಕರಣ

ಔರಂಗಾಬಾದ್/ಮುಂಬೈ (ಪಿಟಿಐ): ಮಸೀದಿಗಳ ಮೇಲಿರುವ ಧ್ವನಿವರ್ಧಕಗಳನ್ನು ಇದೇ 4ರೊಳಗೆ ತೆರವುಗೊಳಿಸಬೇಕು ಎಂದು ಇತ್ತೀಚೆಗೆ ಹೇಳಿಕೆ ನೀಡಿದ್ದ ಎಂಎನ್‌ಎಸ್ ಅಧ್ಯಕ್ಷ ರಾಜ್ ಠಾಕ್ರೆ ಅವರ ವಿರುದ್ಧ ಔರಂಗಾಬಾದ್ ಪೊಲೀಸರು ಮಂಗಳವಾರ ಪ್ರಕರಣ ದಾಖಲಿಸಿದ್ದಾರೆ.

ಮಹಾರಾಷ್ಟ್ರ ಪೊಲೀಸ್ ಮಹಾನಿರ್ದೇಶಕ ರಜನೀಶ್ ಸೇಠ್ ಅವರು ರಾಜ್ ಠಾಕ್ರೆ ವಿರುದ್ಧ ಔರಂಗಾಬಾದ್ ಪೊಲೀಸ್ ಕಮಿಷನರ್ ಸೂಕ್ತ ಕಾನೂನು ಕ್ರಮ ಕೈಗೊಳ್ಳಲಿದ್ದಾರೆ ಎಂದು ಹೇಳಿದ ಬೆನ್ನಲ್ಲೇ, ಪ್ರಕರಣ ದಾಖಲಾಗಿದೆ ಎಂದು ಅಧಿಕಾರಿಗಳು ತಿಳಿಸಿದರು.

ನಗರ ಚೌಕ್ ಪೊಲೀಸರು ಠಾಕ್ರೆ ವಿರುದ್ಧ ಐಪಿಸಿ ಕಲಂ 153, 116 ಮತ್ತು 117ರ ಹಾಗೂ ಮಹಾರಾಷ್ಟ್ರ ಪೊಲೀಸ್ ಕಾಯ್ದೆಯಡಿ ಪ್ರಕರಣ ದಾಖಲಿಸಿದ್ದಾರೆ ಎಂದು ಅವರು ಮಾಹಿತಿ ನೀಡಿದರು.

ಔರಂಗಾಬಾದ್‌ನಲ್ಲಿ ಭಾನುವಾರ ನಡೆದಿದ್ದ ರ‍್ಯಾಲಿಯಲ್ಲಿ ರಾಜ್ ಠಾಕ್ರೆ ಅವರು 'ಮೇ 4ರೊಳಗೆ ಮಸೀದಿಗಳ ಮೇಲಿರುವ ಧ್ವನಿವರ್ಧಕಗಳನ್ನು ತೆಗೆಯಬೇಕು. ಇಲ್ಲದಿದ್ದರೆ ಮಸೀದಿಗಳ ಎದುರು ಹನುಮಾನ್ ಚಾಲೀಸಾ ಪಠಣ ಆರಂಭಿಸುತ್ತೇವೆ' ಎಂದು ಹೇಳಿಕೆ ನೀಡಿದ್ದರು. ಈ ರ‍್ಯಾಲಿಯ ಸಂಘಟಕರ ಮೇಲೂ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ ಎಂದು ಅವರು ವಿವರಿಸಿದರು.

ಜಾಮೀನು ರಹಿತ ವಾರಂಟ್

14 ವರ್ಷಗಳ ಹಿಂದಿನ ಪ್ರಕರಣವೊಂದರಲ್ಲಿ ಎಂಎನ್‌ಎಸ್ ಅಧ್ಯಕ್ಷ ರಾಜ್ ಠಾಕ್ರೆ ವಿರುದ್ಧ ಮಹಾರಾಷ್ಟ್ರದ ಸಾಂಗ್ಲಿ ಜಿಲ್ಲೆಯ ನ್ಯಾಯಾಲಯ ಜಾಮೀನು ರಹಿತ ವಾರಂಟ್ ಹೊರಡಿಸಿದೆ. ಪ್ರಚೋದನಕಾರಿ ಭಾಷಣ ಮಾಡಿದ ಆರೋಪದಲ್ಲಿ ರಾಜ್ ಠಾಕ್ರೆ ವಿರುದ್ಧ 2008ರಲ್ಲಿ ಭಾರತೀಯ ದಂಡಸಂಹಿತೆಯ ಸೆಕ್ಷನ್ 109 ಹಾಗೂ 117 (ಅಪರಾಧ ಪ್ರಚೋದನೆ) ಅಡಿಯಲ್ಲಿ ಪ್ರಕರಣ ದಾಖಲಿಸಲಾಗಿತ್ತು.ರಾಜ್ ಠಾಕ್ರೆ ಹಾಗೂ ಎಂಎನ್‌ಎಸ್ ನಾಯಕ ಶಿರೀಶ್ ಪರಾಕರ್ ಅವರನ್ನು ಬಂಧಿಸಿ ನ್ಯಾಯಾಲಯಕ್ಕೆ ಹಾಜರುಪಡಿಸುವಂತೆ ಮುಂಬೈ ಪೊಲೀಸ್ ಆಯುಕ್ತರಿಗೆ ಹಾಗೂ ಖೆರ್‌ವಾಡಿ ಪೊಲೀಸ್ ಠಾಣೆಗೆ ಸೂಚಿಸಿದ್ದಾರೆ ಎಂದು ಸಹಾಯಕ ಪಬ್ಲಿಕ್ ಪ್ರಾಸಿಕ್ಯೂಟರ್ ಜ್ಯೋತಿ ಪಾಟೀಲ್ ತಿಳಿಸಿದ್ದಾರೆ.

ಜೂನ್ 8ರ ಒಳಗಾಗಿ ಇಬ್ಬರೂ ನಾಯಕರನ್ನು ನ್ಯಾಯಾಲಯಕ್ಕೆ ಹಾಜರುಪಡಿಸುವಂತೆ ಸೂಚಿಸಲಾಗಿದೆ.

ಅಧಿಕಾರಿಗಳ ವಿರುದ್ಧ ಎಫ್‌ಐಆರ್

ಒಂದನೇ ಪುಟದಿಂದ...

2021ರ ನವೆಂಬರ್ 19ರಿಂದ 23ರವರೆಗೆ ಬಿಡಿಎ ಕಚೇರಿಗಳಲ್ಲಿ ಶೋಧ ನಡೆಸಿದ್ದ ಎಸಿಬಿ ಅಧಿಕಾರಿಗಳು, ನೂರಾರು ಕಡತಗಳನ್ನು ವಶಪಡಿಸಿಕೊಂಡಿದ್ದರು. ಅವುಗಳ ಪರಿಶೀಲನೆ ನಡೆಸಿದಾಗ ಕೊಳೆಗೇರಿ ನಿವಾಸಿಗಳಿಗೆ ಪರಿಹಾರ ರೂಪದಲ್ಲಿ ನಿವೇಶನ ಹಂಚಿಕೆಯಲ್ಲೂ ಅಕ್ರಮ ನಡೆದಿರುವುದು ಕಂಡುಬಂದಿತ್ತು. ಈ ಸಂಬಂಧ ಎಫ್‌ಐಆರ್ ದಾಖಲಿಸಿ ತನಿಖೆ ನಡೆಸಲು ಅನುಮತಿ ಕೋರಿ ಎಸಿಬಿ ರಾಜ್ಯ ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಿತ್ತು.

ಜಗದೀಶ್ ಮತ್ತು ರೂಪಾ ವಿರುದ್ಧ ತನಿಖೆಗೆ ಅನುಮತಿ ನೀಡಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ, 2022ರ ಏಪ್ರಿಲ್ 21 ಮತ್ತು 22ರಂದು ಆದೇಶ ಹೊರಡಿಸಿತ್ತು. ಏಪ್ರಿಲ್ 29ರಂದು ಇಬ್ಬರ ವಿರುದ್ಧ ಎಫ್‌ಐಆರ್ ದಾಖಲಿಸಿದ್ದು, ತನಿಖೆ ನಡೆಯುತ್ತಿದೆ ಎಂದು ಎಸಿಬಿ ಮೂಲಗಳು ತಿಳಿಸಿವೆ.

ಗೋಹತ್ಯೆ ಆರೋಪ: ಇಬ್ಬರ ಹತ್ಯೆ

ಸಿವನಿ(ಮಧ್ಯಪ್ರದೇಶ) (ಪಿಟಿಐ): ಇಲ್ಲಿನ ಸಿಮರಿಯಾ ಗ್ರಾಮದಲ್ಲಿ ಗೋಹತ್ಯೆ ಮಾಡಿರುವ ಆರೋಪದಲ್ಲಿ ಇಬ್ಬರು ಬುಡಕಟ್ಟು ವ್ಯಕ್ತಿಗಳ ಮೇಲೆ ಗುಂಪೊಂದು ಹಲ್ಲೆ ನಡೆಸಿ ಹತ್ಯೆ ಮಾಡಿದೆ. ಹಲ್ಲೆ ವೇಳೆ ಇನ್ನೊಬ್ಬ ವ್ಯಕ್ತಿ ಗಾಯಗೊಂಡಿದ್ದಾರೆ ಎಂದು ಪೊಲೀಸರು ಮಂಗಳವಾರ ತಿಳಿಸಿದ್ದಾರೆ.

ದಾಳಿ ನಡೆಸಿದವರು ಬಜರಂಗ ದಳದ ಕಾರ್ಯಕರ್ತರು ಎಂದು ವಿರೋಧ ಪಕ್ಷ ಕಾಂಗ್ರೆಸ್ ಆರೋಪಿಸಿದೆ.

ಘಟನೆ ಸೋಮವಾರ ನಡೆದಿದ್ದು, ಈ ಸಂಬಂಧ 20 ಮಂದಿಯ ವಿರುದ್ಧ ಪ್ರಕರಣ ದಾಖಲಾಗಿದೆ. ಇವರಲ್ಲಿ ಆರು ಮಂದಿಯ ವಿರುದ್ಧ ಕೊಲೆ ಪ್ರಕರಣ ದಾಖಲಾಗಿದೆ ಎಂದು ಪೊಲೀಸ್ ಅಧಿಕಾರಿಗಳು ಹೇಳಿದ್ದಾರೆ.

'15ರಿಂದ 20 ಜನರಿದ್ದ ಗುಂಪು ಬುಡಕಟ್ಟು ವ್ಯಕ್ತಿಗಳ ಮನೆಗೆ ತೆರಳಿ ಹಲ್ಲೆ ನಡೆಸಿದೆ. ಇವರಲ್ಲಿ ಇಬ್ಬರು ಆಸ್ಪತ್ರೆಗೆ ಕರೆದೊಯ್ಯುವಾಗ ಸಾವನ್ನಪ್ಪಿದ್ದಾರೆ' ಎಂದೂ ತಿಳಿಸಿದ್ದಾರೆ.

'ಆಜಾನ್ ಕೇಳಿದರೆ 100ಕ್ಕೆ ಕರೆ ಮಾಡಿ'

ಮುಂಬೈ (ಪಿಟಿಐ): ಬುಧವಾರದಿಂದ ಆಜಾನ್ (ಇಸ್ಲಾಮಿಕ್ ಪ್ರಾರ್ಥನೆ ಕರೆ) ಎಲ್ಲೆಲ್ಲಿ ಕೇಳುತ್ತದೆಯೋ ಅಲ್ಲೆಲ್ಲ ಧ್ವನಿವರ್ಧಕಗಳಲ್ಲಿ ಹನುಮಾನ್ ಚಾಲೀಸಾವನ್ನು ಮೊಳಗಿಸುವಂತೆ ಮಹಾರಾಷ್ಟ್ರ ನವನಿರ್ಮಾಣ ಸೇನೆಯ ಅಧ್ಯಕ್ಷ ರಾಜ್ ಠಾಕ್ರೆ ಹೇಳಿದ್ದಾರೆ.

ಈ ಬಗ್ಗೆ ಮಂಗಳವಾರ ಸಾರ್ವಜನಿಕರಿಗೆ ಬಹಿರಂಗ ಪತ್ರ ಬರೆದಿರುವ ಅವರು, 'ಮೇ 4 ರಂದು ಧ್ವನಿವರ್ಧಕದಲ್ಲಿ ಆಜಾನ್ ಮೊಳಗುವುದನ್ನು ಕೇಳಿದರೆ, ಆ ಸ್ಥಳಗಳಲ್ಲಿ ಹನುಮಾನ್ ಚಾಲೀಸಾವನ್ನು ಧ್ವನಿವರ್ಧಕದ ಮೂಲಕ ಮೊಳಗಿಸಿ. ಆಗ ಈ ಧ್ವನಿವರ್ಧಕಗಳ ಅಡಚಣೆ ಅವರಿಗೂ ಅರ್ಥವಾಗುತ್ತದೆ' ಎಂದು ರಾಜ್ ಠಾಕ್ರೆ ಪತ್ರದಲ್ಲಿ ಹೇಳಿದ್ದಾರೆ.

'ಆಜಾನ್ ಕೇಳಿಸಿದರೆ '100'ಕ್ಕೆ ಕರೆ ಮಾಡಿ, ಪೊಲೀಸರಿಗೆ ದೂರು ನೀಡಿ. ಪ್ರತಿಯೊಬ್ಬರೂ ಪ್ರತಿದಿನ ದೂರು ನೀಡಬೇಕು' ಎಂದು ಎಂಎನ್‌ಎಸ್ ನಾಯಕ ಹೇಳಿದ್ದಾರೆ.

ಸಂಕ್ಷಿಪ್ತ ಸುದ್ದಿ

ಚಾರ್ ಧಾಮ್ ಯಾತ್ರೆ ಆರಂಭ

ಡೆಹ್ರಾಡೂನ್(ಪಿಟಿಐ): ಅಕ್ಷಯ ತೃತೀಯ ಹಿನ್ನೆಲೆಯಲ್ಲಿ ಉತ್ತರಾಖಂಡದ ಉತ್ತರಕಾಶಿ ಜಿಲ್ಲೆಯ ಗಂಗೋತ್ರಿ ಮತ್ತು ಯಮುನೋತ್ರಿ ದೇವಸ್ಥಾನಗಳು ಭಕ್ತರಿಗೆ ತೆರೆದಿದ್ದು, ಚಾರ್‌ಧಾಮ್ ಯಾತ್ರೆ ಮಂಗಳವಾರ ಆರಂಭಗೊಂಡಿದೆ.

ಸಾವಿರಾರು ಭಕ್ತರ ಸಮ್ಮುಖದಲ್ಲಿ ಗಂಗೋತ್ರಿ ಮತ್ತು ಯಮುನೋತ್ರಿ ಪ್ರವೇಶ ದ್ವಾರವನ್ನು ತೆರೆಯಲಾಯಿತು ಎಂದು ದೇವಸ್ಥಾನ ಆಡಳಿತ ಮಂಡಳಿ ತಿಳಿಸಿದೆ.

ಗಂಗೋತ್ರಿ ಮತ್ತು ಯಮುನೋತ್ರಿ ಆರಂಭದೊಂದಿಗೆ ಚಾರ್‌ಧಾಮ್ ಯಾತ್ರೆಗೆ ಚಾಲನೆ ದೊರೆತಿದ್ದು, ಮೇ 6ಕ್ಕೆ ಕೇದರನಾಥ ಮತ್ತು ಮೇ 8ಕ್ಕೆ ಬದರಿನಾಥ ದೇವಸ್ಥಾನಗಳು ತೆರೆಯಲಿವೆ.

ಹಿಂದಿಯೇತರ ಭಾಷಿಕರ ಮೇಲೆ ಹಿಂದಿ ಹೇರಿಕೆ ಬೇಡ: ಸೋನು ನಿಗಮ್

ನವದೆಹಲಿ (ಪಿಟಿಐ): 'ಹಿಂದಿ ನಮ್ಮ ದೇಶದ ರಾಷ್ಟ್ರೀಯ ಭಾಷೆಯಲ್ಲ. ಅದನ್ನು ಹಿಂದಿಯೇತರ ನಾಗರಿಕರ ಮೇಲೆ ಹೇರಲು ಹೋದರೆ ಒಡಕುಗಳು ಮೂಡುತ್ತವೆ' ಎಂದು ಪ್ರಸಿದ್ಧ ಗಾಯಕ ಸೋನು ನಿಗಮ್ ಎಚ್ಚರಿಸಿದ್ದಾರೆ.

'ದೇಶದ ಸಂವಿಧಾನದಲ್ಲಿ ಎಲ್ಲಿಯೂ ಹಿಂದಿಯನ್ನು ರಾಷ್ಟ್ರೀಯ ಭಾಷೆ ಎಂದು ಉಲ್ಲೇಖಿಸಿದಂತಿಲ್ಲ. ಇದು ದೇಶದಲ್ಲಿ ಹೆಚ್ಚು ಜನರು ಮಾತನಾಡುವ ಭಾಷೆಯೇ ಹೊರತು ರಾಷ್ಟ್ರೀಯ ಭಾಷೆಯಲ್ಲ' ಎಂದು ಅವರು ಪ್ರತಿಕ್ರಿಯಿಸಿದ್ದಾರೆ.

'ತಮಿಳು ಮತ್ತು ಸಂಸ್ಕೃತದಲ್ಲಿ ಯಾವುದು ಪ್ರಪಂಚದ ಅತ್ಯಂತ ಹಳೆಯ ಭಾಷೆ ಎಂಬ ಚರ್ಚೆ ನಡೆಯುತ್ತಿದೆ. ಜನರು ತಮಿಳು ಅತ್ಯಂತ ಹಳೆಯದು ಎಂದು ಹೇಳುತ್ತಾರೆ' ಎಂದು ಅವರು 'ಸಿನಿಮಾ ಬೀಸ್ಟ್' ವೆಬ್‌ಸೈಟ್‌ಗೆ ತಿಳಿಸಿದ್ದಾರೆ.

ಚೀನಾದಿಂದ ಯುದ್ಧ ತರಬೇತಿ

ಬೀಜಿಂಗ್ (ಎಪಿ): ಚೀನಾದ ಲಿಯಾನಿಂಗ್ ವಿಮಾನವಾಹಕ ನೌಕಾಪಡೆ ಸಮೂಹವು ಪಶ್ಚಿಮ ಪೆಸಿಫಿಕ್ ಸಾಗರದಲ್ಲಿ ವಾಸ್ತವಿಕ ಯುದ್ಧ ತರಬೇತಿಯನ್ನು ಆರಂಭಿಸಿದೆ ಎಂದು ಅಲ್ಲಿನ ನೌಕಾಪಡೆ ತಿಳಿಸಿದೆ.

'ಇದೊಂದು ನೌಕಾ ಅಭ್ಯಾಸ. ಇದು ಅಂತರರಾಷ್ಟ್ರೀಯ ಕಾನೂನು ಮತ್ತು ಚಟುವಟಿಕೆಗಳಿಗೆ ಬದ್ಧವಾಗಿದೆ. ಸಮರಾಭ್ಯಾಸವು ಬೇರೆ ಯಾವುದೇ ಉದ್ದೇಶವನ್ನು ಹೊಂದಿಲ್ಲ' ಎಂದು ಅದು ಹೇಳಿದೆ. ಲಿಯಾನಿಂಗ್ ನೌಕೆಯನ್ನು ಉಕ್ರೇನ್ ನಿಂದ ಖರೀದಿಸಲಾಗಿದೆ, ಸಂಪೂರ್ಣವಾಗಿ ನವೀಕರಿಸಲಾಗಿದೆ.

ಬಿಜೆಪಿ ಸೇರಿದ ಕಾಂಗ್ರೆಸ್ ಶಾಸಕ

ಗಾಂಧಿನಗರ, ಗುಜರಾತ್ (ಪಿಟಿಐ): ಗುಜರಾತ್‌ನ ಖೇದ್‌ಬ್ರಹ್ಮ ಕ್ಷೇತ್ರದ ಶಾಸಕ ಅಶ್ವಿನ್ ಕೊತ್ವಾಲ್ ಅವರು ಕಾಂಗ್ರೆಸ್ ಪಕ್ಷವನ್ನು ತೊರೆದು ಆಡಳಿತಾರೂಢ ಬಿಜೆಪಿ ಪಕ್ಷವನ್ನು ಸೇರಿದ್ದಾರೆ. 'ಕಾಂಗ್ರೆಸ್ ಪಕ್ಷ ಅನ್ಯಾಯ ಮಾಡುತ್ತಿರುವುದರಿಂದ ಪಕ್ಷವನ್ನು ತೊರೆದೆ' ಎಂದು ಅಶ್ವಿನ್ ಹೇಳಿದ್ದಾರೆ.

ಉದ್ಯೋಗ ವಾಣಿ



ಮಿಂಚಿದ ಶಿಖರ್; ಪಂಜಾಬ್‌ಗೆ ಜಯ

ಭಾನುಕ ಜೊತೆ 87 ರನ್‌ಗಳ ಜೊತೆಯಾಟದಲ್ಲಿ ಭಾಗಿ; ರಬಾಡ ಪ್ರಭಾವಿ ದಾಳಿ

ನವಿ ಮುಂಬೈ: ಅಮೋಘ ಅರ್ಧಶತಕ ಗಳಿಸಿದ ಶಿಖರ್ ಧವನ್ ಸೇರಿದಂತೆ ಮಧ್ಯಮ ಕ್ರಮಾಂಕದ ಬ್ಯಾಟರ್‌ಗಳ ದಿಟ್ಟ ಆಟದ ನೆರವಿನಿಂದ ಪಂಜಾಬ್ ಕಿಂಗ್ಸ್ ತಂಡ ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಕ್ರಿಕೆಟ್ ಟೂರ್ನಿಯ ಪಂದ್ಯದಲ್ಲಿ ಭರ್ಜರಿ ಜಯ ಗಳಿಸಿತು.

ಡಿ.ವೈ.ಪಾಟೀಲ್ ಕ್ರೀಡಾಂಗಣದಲ್ಲಿ ಮಂಗಳವಾರ ರಾತ್ರಿ ನಡೆದ ಪಂದ್ಯದಲ್ಲಿ 144 ರನ್‌ಗಳ ಗುರಿ ಬೆನ್ನತ್ತಿದ ಪಂಜಾಬ್ 16 ಓವರ್‌ಗಳಲ್ಲಿ 145 ರನ್ ಗಳಿಸಿತು. ಇದಕ್ಕಾಗಿ ತಂಡ ಕಳೆದುಕೊಂಡದ್ದು 2 ವಿಕೆಟ್ ಮಾತ್ರ. ಮೊತ್ತ 10 ರನ್ ಆಗಿದ್ದಾಗ ಆರಂಭಿಕ ಬ್ಯಾಟರ್ ಜಾನಿ ಬೆಸ್ಟೊ ವಿಕೆಟ್ ಕಳೆದುಕೊಂಡ ಪಂಜಾಬ್‌ಗೆ ಶಿಖರ್ ಧವನ್ ಮತ್ತು ಭಾನುಕ ರಾಜಪಕ್ಸ 87 ರನ್‌ಗಳ ಜೊತೆಯಾಟದ ಮೂಲಕ ಬಲ ತುಂಬಿದರು. ರಾಜಪಕ್ಸ ಔಟಾದ ನಂತರ ಶಿಖರ್ ಜೊತೆಗೂಡಿದ ಲಿಯಾಮ್ ಲಿವಿಂಗ್‌ಸ್ಟೋನ್ ಕೂಡ ಉತ್ತಮ ಆಟವಾಡಿದರು. ಇಬ್ಬರೂ ಔಟಾಗದೆ ಉಳಿದರು.

ಸಾಯಿ ಸುದರ್ಶನ್ ಆಸರೆ: ಟಾಸ್ ಗೆದ್ದ ಗುಜರಾತ್ ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿತು. ಕಗಿಸೊ ರಬಾಡ ದಾಳಿಯ ಮುಂದೆ ಅಲ್ಪಮೊತ್ತಕ್ಕೆ ಕುಸಿಯುವ ಭೀತಿ ಎದುರಿಸಿದ್ದ ಗುಜರಾತ್ ತಂಡ ಗೌರವಾರ್ಹ ಮೊತ್ತ ಗಳಿಸಲು ಬಿ. ಸಾಯಿ ಸುದರ್ಶನ್ ಕಾರಣರಾದರು. ತಂಡ 20 ಓವರ್‌ಗಳಲ್ಲಿ 8ಕ್ಕೆ 143 ರನ್ ಗಳಿಸಿತು. ಮೂರನೇ ಓವರ್‌ನಲ್ಲಿ ಶುಭಮನ್ ಗಿಲ್ ರನೌಟ್ ಆಗುವುದರೊಂದಿಗೆ ತಂಡದ ಸಂಕಷ್ಟ ಆರಂಭವಾಯಿತು. ನಂತರದ ಓವರ್‌ನಲ್ಲಿಯೇ ರಬಾಡ ಎಸೆತದಲ್ಲಿ ವೃದ್ಧಿಮಾನ್ ಸಹಾ ವಿಕೆಟ್ ಗಳಿಸಿದರು.

ರಾಹುಲ್ ತೆವಾಟಿಯಾ, ರಶೀದ್ ಖಾನ್ ಮತ್ತು ಲಾಕಿ ಫರ್ಗ್ಯುಸನ್ ವಿಕೆಟ್‌ಗಳನ್ನೂ ರಬಾಡ ಬುಟ್ಟಿಗೆ ಹಾಕಿಕೊಂಡರು. ಡೇವಿಡ್ ಮಿಲ್ಲರ್ ಅಬ್ಬರಿಸದಂತೆ ಲಿಯಾಮ್ ಲಿವಿಂಗ್‌ಸ್ಟೋನ್ ನೋಡಿಕೊಂಡರು. ಒಂದು ಕಡೆ ವಿಕೆಟ್‌ಗಳು ಪತನವಾಗುತ್ತಿದ್ದರೂ ಸುದರ್ಶನ್ ಬೌಲರ್‌ಗಳನ್ನು ದಿಟ್ಟವಾಗಿ ಎದುರಿಸಿದರು. ಏಕಾಗ್ರಚಿತ್ತದಿಂದ ಬ್ಯಾಟಿಂಗ್ ಮಾಡಿದ ಅವರು ಸುಂದರ ಹೊಡೆತಗಳನ್ನು ಆಡಿದರು.



ಶಿಖರ್ ಧವನ್ ಬ್ಯಾಟಿಂಗ್ ವೈಖರಿ –ಪಿಟಿಐ ಚಿತ್ರ

ಬಲಾಬಲ	
ಪಂದ್ಯ	30
ಚೆನ್ನೈ ಜಯ	20
ಬೆಂಗಳೂರು ಜಯ	9
ಫಲಿತಾಂಶವಿಲ್ಲ	1

ಇಂದಿನ ಪಂದ್ಯ

ರಾಯಲ್ ಚಾಲೆಂಜರ್ಸ್ ಬೆಂಗಳೂರು–ಚೆನ್ನೈ ಸೂಪರ್ ಕಿಂಗ್ಸ್

ಮಹಾರಾಷ್ಟ್ರ ಕ್ರಿಕೆಟ್ ಸಂಸ್ಥೆ ಕ್ರೀಡಾಂಗಣ, ಪುಣೆ

ಪಂದ್ಯ ಆರಂಭ: ರಾತ್ರಿ 7.30

ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್, ಹಾಟ್‌ಸ್ಟಾರ್

ಸ್ಕೋರ್ ಕಾರ್ಡ್

ಗುಜರಾತ್ ಟೈಟನ್ಸ್ 8ಕ್ಕೆ143 (20 ಓವರ್)

ಸಹಾ ಸಿ ಮಯಂಕ್ ಬಿ ರಬಾಡ 21 (17ಎ, 4X3, 6X1), ಗಿಲ್ ರನ್‌ಔಟ್/ ರಿಷಿಧವನ್ 9(6ಎ, 4X2), ಸಾಯಿ ಔಟಾಗದೆ 65 (50ಎ, 4X5, 6X1), ಹಾರ್ದಿಕ್ ಸಿ ಜಿತೇಶ್ ಬಿ ರಿಷಿ 1 (7ಎ), ಮಿಲ್ಲರ್ ಸಿ ರಬಾಡ ಬಿ ಲಿವಿಂಗ್‌ಸ್ಟೋನ್ 11 (14ಎ), ತೆವಾಟಿಯಾ ಸಿ ಸಂದೀಪ್ ಬಿ ರಬಾಡ 11 (13ಎ), ರಶೀದ್ ಸಿ ಸಂದೀಪ್ ಬಿ ರಬಾಡ 0 (1ಎ), ಸಂಗ್ವಾನ್ ಬಿ ಅರ್ಷದೀಪ್ 2 (5ಎ), ಫರ್ಗ್ಯುಸನ್ ಸಿ ಲಿವಿಂಗ್‌ಸ್ಟೋನ್ ಬಿ ರಬಾಡ 5 (3ಎ, 4X1), ಜೋಸೆಫ್ ಔಟಾಗದೆ 4 (5ಎ)

ಇತರೆ 14 (ಬೈ 1, ಲೆಗ್‌ಬೈ 4, ವೈಡ್ 8, ನೋಬಾಲ್ 1)

ವಿಕೆಟ್ ಪತನ: 1–17 (ಶುಭಮನ್ ಗಿಲ್; 2.1), 2–34 (ವೃದ್ಧಿಮಾನ್ ಸಹಾ 3.5), 3–44 (ಹಾರ್ದಿಕ್ ಪಾಂಡ್ಯ; 6.2), 4–67 (ಡೇವಿಡ್ ಮಿಲ್ಲರ್; 11.2), 5–112 (ರಾಹುಲ್ ತೆವಾಟಿಯಾ;16.2), 6–112 (ರಶೀದ್ ಖಾನ್;16.3), 7–122 (ಪ್ರದೀಪ್ ಸಂಗ್ವಾನ್;17.4), 8–129 (ಲಾಕಿ ಫರ್ಗ್ಯುಸನ್; 18.2)

ಬೌಲಿಂಗ್: ಸಂದೀಪ್ ಶರ್ಮಾ 4–0–17–0, ಕಗಿಸೊ ರಬಾಡ 4–0–33–4, ಅರ್ಷದೀಪ್ ಸಿಂಗ್ 4–0–36–1, ರಿಷಿ ಧವನ್ 4–0–26–1, ಲಿಯಾಮ್ ಲಿವಿಂಗ್‌ಸ್ಟೋನ್ 2.3–0–15–1, ರಾಹುಲ್ ಚಾಹರ್ 1.2–0–11–0

ಪಂಜಾಬ್ ಕಿಂಗ್ಸ್ 2ಕ್ಕೆ 145 (16 ಓವರ್)

ಬೆಸ್ಟೊ ಸಿ ಸಂಗ್ವಾನ್ ಬಿ ಶಮಿ 1 (6ಎ), ಶಿಖರ್ ಔಟಾಗದೆ 62 (53ಎ, 4X8, 6X1), ಭಾನುಕ ಎಲ್‌ಬಿಡಬ್ಲ್ಯು ಫರ್ಗ್ಯುಸನ್ 40 (28ಎ, 4X5, 6X1), ಲಿವಿಂಗ್‌ಸ್ಟೋನ್ ಔಟಾಗದೆ 30 (10ಎ, 4X2, 6X3)

ಇತರೆ (ಬೈ 1, ಲೆಗ್‌ಬೈ 3, ನೋಬಾಲ್ 1, ವೈಡ್ 7) 12

ವಿಕೆಟ್ ಪತನ: 1–10 (ಜಾನಿ ಬೆಸ್ಟೊ, 2.2), 2–97 (ರಾಜಪಕ್ಷ, 11.6)

ಬೌಲಿಂಗ್: ಮೊಹಮ್ಮದ್ ಶಮಿ 4–0–43–1, ಪ್ರದೀಪ್ ಸಂಗ್ವಾನ್ 2–0–23–0, ಅಲ್ಜರಿ ಜೋಸೆಫ್ 3–0–25–0, ಲಾಕಿ ಫರ್ಗ್ಯುಸನ್ 3–0–29–1, ರಶೀದ್ ಖಾನ್ 4–0–21–0

ಫಲಿತಾಂಶ: ಪಂಜಾಬ್ ಕಿಂಗ್ಸ್‌ಗೆ 8 ವಿಕೆಟ್‌ಗಳ ಜಯ

ಪಾಯಿಂಟ್ ಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಟೈ	ಅಂಕ	ರನ್‌ರೇಟ್
ಗುಜರಾತ್	10	8	2	0	0	16	0.158
ಲಖನೌ	10	7	3	0	0	14	0.397
ರಾಜಸ್ಥಾನ	10	6	4	0	0	12	0.340
ಹೈದರಾಬಾದ್	9	5	4	0	0	10	0.471
ಪಂಜಾಬ್	10	5	5	0	0	10	-0.229
ಬೆಂಗಳೂರು	10	5	5	0	0	10	-0.558
ಡೆಲ್ಲಿ	9	4	5	0	0	8	0.587
ಕೋಲ್ಕತ್ತ	10	4	6	0	0	8	0.060
ಚೆನ್ನೈ	9	3	6	0	0	6	-0.407
ಮುಂಬೈ	9	1	8	0	0	2	-0.836

*ಮಂಗಳವಾರದ ಪಂದ್ಯದ ಅಂತ್ಯಕ್ಕೆ

ಐಪಿಎಲ್ ಮತ್ತು ಕ್ರೀಡಾ ಸುದ್ದಿಗಳ ವಿಸ್ತೃತ ವರದಿ, ಮಾಹಿತಿಗಾಗಿ ಭೇಟಿ ನೀಡಿ https://www.prajavani.net/cricket

ಪರ್ಪಲ್ ಕ್ಯಾಪ್ (ಹೆಚ್ಚು ವಿಕೆಟ್ ಗಳಿಸಿದವರು)

ಆಟಗಾರ	ತಂಡ	ವಿಕೆಟ್
ಯಜುವೇಂದ್ರ	ರಾಜಸ್ಥಾನ	19
ಕುಲದೀಪ್	ಡೆಲ್ಲಿ	17
ರಬಾಡ	ಪಂಜಾಬ್	17

ಆರೆಂಜ್ ಕ್ಯಾಪ್ (ಹೆಚ್ಚು ರನ್ ಗಳಿಸಿದವರು)

ಆಟಗಾರ	ತಂಡ	ರನ್
ಜೋಸ್ ಬಟ್ಲರ್	ರಾಜಸ್ಥಾನ	588
ರಾಹುಲ್	ಲಖನೌ	451
ಶಿಖರ್	ಹೈದರಾಬಾದ್	369

ಗ್ರೇಸ್ ಕ್ರಿಕೆಟ್ ಅಂಕಿ ಸಂಖ್ಯೆ ಪರಿಷ್ಕರಣೆ

ಲಂಡನ್ (ಎಎಫ್‌ಪಿ): ಕ್ರಿಕೆಟ್ ಇತಿಹಾಸವನ್ನು ದಾಖಲಿಸುವ ಅತ್ಯಂತ ಹಳೆಯ ಮತ್ತು ಪ್ರತಿಷ್ಠಿತ 'ವಿಸ್ಡನ್ ಕ್ರಿಕೆಟರ್ಸ್ ಅಲ್ಮನಾಕ್'ನಲ್ಲಿ ಇಂಗ್ಲೆಂಡ್ ದಿಗ್ಗಜ ಆಟಗಾರ ಡಬ್ಲ್ಯು.ಜಿ. ಗ್ರೇಸ್ ಅವರ ಪ್ರಥಮ ದರ್ಜೆ ಅಂಕಿ ಸಂಖ್ಯೆಗಳನ್ನು ಪರಿಷ್ಕರಿಸಿದೆ. ಅವರ ಖಾತೆಯಲ್ಲಿದ್ದ ಎರಡು ಶತಕಗಳನ್ನು ಕಡಿಮೆ ಮಾಡಿದೆ.

ಗ್ರೇಸ್ ಅವರು ತಮ್ಮ 100ನೇ ಶತಕವನ್ನು 1895ರ ಮೇ 17ರಂದು ಗಳಿಸಿದ್ದರು ಎಂದು ದಾಖಲಾಗಿತ್ತು. ಗ್ಲೌಸೆಸ್ಟರ್‌ಶೈರ್ ಪರ ಆಡುತ್ತಿದ್ದ ಅವರು ಸೋಮರ್‌ಸೆಟ್ ವಿರುದ್ಧ ಈ ಶತಕ ಗಳಿಸಿದ್ದರು ಎಂದು ದಾಖಲಿಸಲಾಗಿತ್ತು. ಆದರೆ ಕ್ರಿಕೆಟ್ ಅಂಕಿಅಂಶ ಇತಿಹಾಸಕಾರರ ಸಂಘಟನೆಯವರು ಗ್ರೇಸ್ ಆಡಿದ ಪ್ರಥಮ ದರ್ಜೆ ಪಂದ್ಯಗಳ ಬಗ್ಗೆ ಮಾಹಿತಿ ಕೇಳಿದ ನಂತರ ಬದಲಾವಣೆಗೆ ದಾರಿಯಾಗಿದೆ.

ಈಗ ಗ್ರೇಸ್ ಆಡಿದ ಪಂದ್ಯಗಳ ಪಟ್ಟಿಯಿಂದ 10 ಪಂದ್ಯಗಳನ್ನು ತೆಗೆದುಹಾಕಲಾಗಿದ್ದು 54,211 ರನ್‌ಗಳು ಅವರ ದಾಖಲೆಯಲ್ಲಿವೆ. ಈ ವರೆಗೆ 54,896 ರನ್‌ಗಳು ಇದ್ದವು. 2,876 ವಿಕೆಟ್‌ಗಳ ದಾಖಲೆಯನ್ನು 2,809 ವಿಕೆಟ್‌ಗಳಿಗೆ ಇಳಿಸಲಾಗಿದೆ. 126 ಶತಕಗಳ ಬದಲಿಗೆ 124 ಶತಕಗಳು ಅವರ ಪಟ್ಟಿಯಲ್ಲಿವೆ.



ಶ್ರೀಲಂಕಾದ ಮಾಜಿ ಕ್ರಿಕೆಟಿಗ ಹಾಗೂ ಸಚಿವ ಅರ್ಜುನ್ ರಣತುಂಗಾ ಅವರು ಮಂಗಳವಾರ ಬೆಂಗಳೂರಿನಲ್ಲಿರುವ ಕರ್ನಾಟಕ ಒಲಿಂಪಿಕ್ ಸಂಸ್ಥೆಯ (ಕೆಒಎ) ಕಚೇರಿಗೆ ಭೇಟಿ ನೀಡಿದರು. ಈ ವೇಳೆ ಕೆಒಎ ಅಧ್ಯಕ್ಷ ಕೆ. ಗೋವಿಂದರಾಜು, ಮಹಾ ಪ್ರಧಾನ ಕಾರ್ಯದರ್ಶಿ ಅನಂತರಾಜ್, ಬೆಂಗಳೂರು ನಗರ ಜಿಲ್ಲಾಧಿಕಾರಿ ಮಂಜುನಾಥ್ ಮತ್ತಿತರು ಇದ್ದರು.

ಫುಟ್‌ಬಾಲ್: ಮ್ಯಾಂಚೆಸ್ಟರ್ ಸಿಟಿಗೆ ಕೈಲ್ ವಾಕರ್ ಬಲ

ಮ್ಯಾಡ್ರಿಡ್ (ರಾಯಿಟರ್ಸ್): ಚಾಂಪಿಯನ್ಸ್ ಲೀಗ್ ಫುಟ್‌ಬಾಲ್ ಟೂರ್ನಿಯ ಸೆಮಿಫೈನಲ್ ಎರಡನೇ ಲೆಗ್ ಪಂದ್ಯಕ್ಕೆ ಮ್ಯಾಂಚೆಸ್ಟರ್ ಸಿಟಿ ತಂಡಕ್ಕೆ ಕೈಲ್ ವಾಕರ್ ಲಭ್ಯರಾಗುವರು ಎಂದು ಕೋಚ್ ಪೆಪ್ ಗಾರ್ಡಿಯೊಲಾ ತಿಳಿಸಿದ್ದಾರೆ.

ಮ್ಯಾಂಚೆಸ್ಟರ್ ಸಿಟಿ ತಂಡವು ಎರಡನೇ ಲೆಗ್‌ನಲ್ಲಿ ರಿಯಲ್ ಮ್ಯಾಡ್ರಿಡ್ ತಂಡವನ್ನು ಎದುರಿಸಲಿದೆ. ಡಿಫೆನ್ಸ್ ಆಟಗಾರ ವಾಕರ್ ಕಳೆದ ತಿಂಗಳು ಅಟ್ಲೆಟಿಕೊ ಮ್ಯಾಡ್ರಿಡ್ ಎದುರು ನಡೆದ ಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ ಗಾಯಗೊಂಡಿದ್ದರು. ಆ ಬಳಿಕ ಅವರು ಕಣಕ್ಕಿಳಿದಿರಲಿಲ್ಲ. ಸೆಮಿಫೈನಲ್‌ನ ಮೊದಲ ಲೆಗ್‌ನಲ್ಲಿ ಕಳೆದ ವಾರ ಮ್ಯಾಂಚೆಸ್ಟರ್ ಸಿಟಿ 4–3ರಿಂದ ರಿಯಲ್ ಮ್ಯಾಡ್ರಿಡ್‌ಅನ್ನು ಸೋಲಿಸಿತ್ತು. ರಿಯಲ್ ಈ ಪಂದ್ಯದಲ್ಲಿ ತಿರುಗೇಟು ನೀಡುವ ಛಲದಲ್ಲಿದೆ.



ಖೇಲೊ ಇಂಡಿಯಾ ವಾರ್ಸಿಟಿ ಕ್ರೀಡಾಕೂಟ: ಸಮಾರೋಪ ಸಮಾರಂಭಕ್ಕೆ ಕಲಾ ಕಾರ್ಯಕ್ರಮಗಳ ರಂಗು

ಜೈನ್ ವಿಶ್ವವಿದ್ಯಾಲಯ ಸಮಗ್ರ ಚಾಂಪಿಯನ್

• ವಿಕ್ರಂ ಕಾಂತಿಕೆರೆ

ಬೆಂಗಳೂರು: ಭರತನಾಟ್ಯದ ಲಾಸ್ಯ, ಮೋಹಿನಿಯಾಟ್ಟಂನ ಸೊಬಗು, ಯಕ್ಷಗಾನದ ಧೀಂಗಿಣ–ಕುಣಿತ, ಕಥಕ್‌ನ ಥಕಥೈ ಅಲೆಯಲ್ಲಿ ಮುಳುಗೆದ್ದ ಕಂಠೀರವ ಕ್ರೀಡಾಂಗಣದಲ್ಲಿ ಜೈನ್ ವಿವಿ ಕ್ರೀಡಾಪಟುಗಳ ಸಂಭ್ರಮದ ಕಡಲು ಉಕ್ಕಿ ಹರಿಯಿತು.

ಖೇಲೊ ಇಂಡಿಯಾ ವಿಶ್ವವಿದ್ಯಾಲಯಗಳ ಕ್ರೀಡಾಕೂಟದಲ್ಲಿ ಸಮಗ್ರ ಚಾಂಪಿಯನ್ ಪಟ್ಟ ಗಳಿಸಿದ ಆತಿಥೇಯ ಜೈನ್ ವಿವಿ ಪರವಾಗಿ ಪ್ರಶಸ್ತಿ ಸ್ವೀಕರಿಸಿದ ಏಳು ಪದಕಗಳ ಒಡೆಯ ಈಜುಪಟು ಶಿವ ಶ್ರೀಧರ್ ಟ್ರೋಫಿಯೊಂದಿಗೆ ವೇದಿಕೆಯಿಂದ ಕೆಳಗಿಳಿಯುತ್ತಿದ್ದಂತೆ ಖುಷಿಯ ಅಲೆ ಎದ್ದಿತು. ಕುಣಿದು ಕುಪ್ಪಳಿಸಿದ ಕ್ರೀಡಾಪಟುಗಳು ನಂತರ ಕ್ರೀಡಾಂಗಣದ ಮಧ್ಯದಲ್ಲಿ ಟ್ರೋಫಿ ಇರಿಸಿ ಮ್ಯಾಸ್ಕಟ್‌ಗಳ ಕೈ ಹಿಡಿದು ಸುತ್ತು ಹಾಕಿದರು.

ಕೂಟದಲ್ಲಿ 20 ಚಿನ್ನ, 7 ಬೆಳ್ಳಿ ಹಾಗೂ 5 ಕಂಚಿನ ಪದಕಗಳೊಂದಿಗೆ ಜೈನ್ ವಿವಿ ಒಟ್ಟು 32 ಪದಕ ಗಳಿಸಿತು. ತೀವ್ರ ಪೈಪೋಟಿ ನೀಡಿದ ಲವ್ಲಿ ವಿವಿ (51) ಪದಕ ಗಳಿಕೆಯಲ್ಲಿ ಅರ್ಧಶತಕ ಮೀರಿದ ಏಕೈಕ ವಿವಿ. ಆದರೆ ಚಿನ್ನ ಗಳಿಕೆಯಲ್ಲಿ ಜೈನ್‌ಗಿಂತ ಹಿಂದೆ ಉಳಿಯಿತು. ಕಳೆದ ಬಾರಿಯ ಚಾಂಪಿಯನ್ ಪಂಜಾಬ್ ವಿವಿ 48 ಪದಕಗಳನ್ನು ಗಳಿಸಿದೆ. ಅದು ಗಳಿಸಿದ ಚಿನ್ನ 15 ಮಾತ್ರ.



ಸಮಗ್ರ ಚಾಂಪಿಯನ್ ಪಟ್ಟ ಗಳಿಸಿದ ಜೈನ್ ವಿವಿಯ ವಿದ್ಯಾರ್ಥಿಗಳ ಸಂಭ್ರಮ. ವಿವಿಯ ಕ್ರೀಡಾ ವಿಭಾಗದ ನಿರ್ದೇಶಕ ಶಂಕರ್ (ಮಧ್ಯದಲ್ಲಿ) ಇದ್ದಾರೆ– ಪ್ರಜಾವಾಣಿ ಚಿತ್ರ

ಕ್ರೀಡಾಕೂಟದಲ್ಲಿ ಎರಡು ರಾಷ್ಟ್ರೀಯ ದಾಖಲೆ ಮತ್ತು 97 ಕೂಟದಾಖಲೆಗಳು ಮುರಿದು ಬಿದ್ದವು. 42 ದಾಖಲೆಗಳು ವೇಟ್‌ಲಿಫ್ಟಿಂಗ್‌ನಲ್ಲಿ ಮೂಡಿದ್ದು ಈಜಿನಲ್ಲಿ 28 ಮತ್ತು ಅಥ್ಲೆಟಿಕ್ಸ್‌ನಲ್ಲಿ 23 ದಾಖಲೆಗಳು ನಿರ್ಮಾಣವಾದವು. ಜೈನ್ ವಿವಿಯ ಶಿವ ಶ್ರೀಧರ್ 7 ಚಿನ್ನ ಮತ್ತು 2 ಬೆಳ್ಳಿ ಗೆದ್ದುಕೊಂಡರು. ಖೇಲೊ ಇಂಡಿಯಾ ವಿವಿ ಕ್ರೀಡಾಕೂಟದಲ್ಲಿ ಅತಿ ಹೆಚ್ಚು ಪದಕ ಗೆದ್ದ ಸಾಧನೆ ಅವರದಾಗಿದೆ. ಒಂದು ರಾಷ್ಟ್ರೀಯ ದಾಖಲೆ ಅವರ ಹೆಸರಿಗೆ ಸೇರಿದೆ. ಅದೇ ಕಾಲೇಜಿನ ಶೃಂಗಿ ಬಾಂದೇಕರ್ 4 ಚಿನ್ನ ಮತ್ತು 1 ಬೆಳ್ಳಿ ಪದಕದೊಂದಿಗೆ ಮಹಿಳೆಯರ ವಿಭಾಗದಲ್ಲಿ ಅತಿ ಹೆಚ್ಚು ಪದಕ ಗೆದ್ದ ಕ್ರೀಡಾಪಟು ಎನಿಸಿದರು.

ಕಾರ್ಯಕ್ರಮದ ಆರಂಭದಲ್ಲಿ ವಿದ್ಯಾರ್ಥಿಗಳು ಪ್ರದರ್ಶಿಸಿದ ಯೋಗದ ವಿವಿಧ ಆಸನಗಳು ರೋಮಾಂಚನಗೊಳಿಸಿದವು. ನಂತರ ಮೈಸೂರಿನ ಖುಷಿ ಅವರ ಏಕವ್ಯಕ್ತಿ ಯೋಗದ ವೈವಿಧ್ಯಮಯ ಭಂಗಿಗಳಿಗೆ ಪ್ರೇಕ್ಷಕರ ಮೈಜುಮ್ಮೆಂದಿತು. ಇದರ ಬೆನ್ನಲ್ಲೇ 'ಆಜಾದಿ ಕಾ ಅಮೃತ್ ಮಹೋತ್ಸವ್' ಅಂಗವಾಗಿ ನಡೆದ ವೈವಿಧ್ಯಮಯ ಕಲಾಕಾರ್ಯಕ್ರಮಗಳು ಮೇಳೈಸಿದವು.

ಕಪ್ಪು ಮಾಸ್ಕ್: ಗೊಂದಲ, ವಾಗ್ವಾದ: ಕಪ್ಪು ಮಾಸ್ಕ್ ಮತ್ತು ಕಪ್ಪು ಬಟ್ಟೆ ಧರಿಸಿಕೊಂಡು ಬಂದವರನ್ನು ಪೊಲೀಸರು ವಾಪಸ್ ಕಳುಹಿಸಿದರಿಂದ ಕೆಲಕಾಲ ಗೊಂದಲದ ವಾತಾವರಣ ನಿರ್ಮಾಣವಾಯಿತು. ಗುರುತಿನ ಚೀಟಿ ಹೊಂದಿರುವ ಸಾರ್ವಜನಿಕರಿಗೆ ಉಚಿತ ಪ್ರವೇಶ ಇದೆ ಎಂದು ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಕ್ರೀಡಾ ಸಚಿವರು ಘೋಷಿಸಿದ್ದರು. ರಜಾ ದಿನ ಆಗಿದ್ದರಿಂದ ನೂರಾರು ಮಂದಿ ಕಾರ್ಯಕ್ರಮ ವೀಕ್ಷಿಸಲು ಬಂದಿದ್ದರು. ಕಪ್ಪು ಬಟ್ಟೆ ಮತ್ತು ಮಾಸ್ಕ್ ಧರಿಸಿದ್ದವರನ್ನು ವಾಪಸ್ ಕಳುಹಿಸಲಾಯಿತು. ಪತ್ರಕರ್ತರಿಗೆ ಪೊಲೀಸ್ ಇಲಾಖೆಯಿಂದ ವಿಶೇಷ ಪಾಸ್ ನೀಡಿದ್ದರೂ ನಿಗದಿಪಡಿಸಿದ ಗೇಟ್‌ನಿಂದ ಪ್ರವೇಶಕ್ಕೆ ಪೊಲೀಸರು ನಿರಾಕರಿಸಿದರು. ಪಾಸ್, ಗುರುತಿನ ಚೀಟಿ ಇತ್ಯಾದಿಗಳನ್ನು ತೋರಿಸಿದರೂ ಹಿರಿಯ ಅಧಿಕಾರಿಗಳಿಂದ ಅನುಮತಿ ಪಡೆದುಕೊಂಡು ಬರುವಂತೆ ಕೆಲವರಿಗೆ ತಿಳಿಸಲಾಯಿತು. ಕೊನೆಗೆ ಆಯೋಜಕರೇ ಬಂದು ಒಳಗೆ ಕರೆದುಕೊಂಡು ಹೋದರು.

ಪ್ರೊ ಕಬಡ್ಡಿಯಲ್ಲಿ ಅವಕಾಶಕ್ಕೆ ಮನವಿ

ಕ್ರೀಡಾಕೂಟದ ಕಬಡ್ಡಿಯ ಫೈನಲ್‌ನಲ್ಲಿ ಆಡಿದ ಆಟಗಾರರಲ್ಲಿ ಉತ್ತಮ ಸಾಮರ್ಥ್ಯ ತೋರಿದವರಿಗೆ ಪ್ರೊ ಕಬಡ್ಡಿ ಲೀಗ್‌ನಲ್ಲಿ ಆಡಲು ಅವಕಾಶ ನೀಡುವಂತೆ ಕೇಂದ್ರ ಕ್ರೀಡಾ ಸಚಿವ ಅನುರಾಗ್ ಠಾಕೂರ್ ಕೋರಿದರು. ಕೇಂದ್ರ ಗೃಹ ಸಚಿವ ಅಮಿತ್ ಶಾ, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಕೇಂದ್ರ ಸಂಸದೀಯ ವ್ಯವಹಾರಗಳ ಸಚಿವ ಪ್ರಲ್ಹಾದ ಜೋಶಿ, ರಾಜ್ಯದ ಗೃಹ ಸಚಿವ ಆರಗ ಜ್ಞಾನೇಂದ್ರ, ಯುವಸಬಲೀಕರಣ ಮತ್ತು ಕ್ರೀಡಾ ಸಚಿವ ಕೆ.ಸಿ. ನಾರಾಯಣಗೌಡ, ಉನ್ನತ ಶಿಕ್ಷಣ ಸಚಿವ ಸಿ.ಎನ್. ಅಶ್ವತ್ಥನಾರಾಯಣ್, ಕಿಚ್ಚ ಸುದೀಪ್ ಮತ್ತಿತರರು ಇದ್ದರು.

ಕಬಡ್ಡಿ: ಪ್ರಶಸ್ತಿಗೆ ಮುತ್ತಿಕ್ಕಿದ ಕೋಟಾ, ಕುರುಕ್ಷೇತ್ರ ವಿವಿ

ಬೆಂಗಳೂರು: ಗುಂಪು ಹಂತದ ಪಂದ್ಯಗಳಲ್ಲಿ ರೇಡಿಂಗ್ ಮೂಲಕ ಎದುರಾಳಿಗಳಲ್ಲಿ ನಡುಕ ಹುಟ್ಟಿಸಿದ ಜೈ ಭಗವಾನ್ ಅವರು ಫೈನಲ್‌ನಲ್ಲೂ ಭರ್ಜರಿ ಆಟವಾಡಿದರು. ಅವರ ಅಮೋಘ ಸಾಮರ್ಥ್ಯದ ಬಲದಿಂದ ರಾಜಸ್ಥಾನದ ಕೋಟಾ ವಿಶ್ವವಿದ್ಯಾಲಯ ತಂಡ ಖೇಲೊ ಇಂಡಿಯಾ ವಾರ್ಸಿಟಿ ಕ್ರೀಡಾಕೂಟದ ಕಬಡ್ಡಿಯಲ್ಲಿ ಚಾಂಪಿಯನ್ ಪಟ್ಟ ಅಲಂಕರಿಸಿತು.

ಕಂಠೀರವ ಕ್ರೀಡಾಂಗಣದಲ್ಲಿ ಮಂಗಳವಾರ ನಡೆದ, ಕೂಟದ ಕೊನೆಯ ಸ್ಪರ್ಧೆಯಲ್ಲಿ ಕೋಟಾ ವಿವಿ 52–37ರಲ್ಲಿ ಹರಿಯಾಣದ ಚೌಧರಿ ಬನ್ಸಿಲಾಲ್ ವಿವಿಯನ್ನು ಸೋಲಿಸಿತು. ಹರಿಯಾಣದ ವಿವಿಗಳ ನಡುವಿನ ಮಹಿಳೆಯರ ಫೈನಲ್‌ನಲ್ಲಿ ಕುರುಕ್ಷೇತ್ರ ವಿವಿ 46–19ರಲ್ಲಿ ಮಹರ್ಷಿ ದಯಾನಂದ್ ವಿವಿಯನ್ನು ಸೋಲಿಸಿತು.

ಕಬಡ್ಡಿ ಸ್ಟಾರ್‌ಗಳ ಪ್ರೋತ್ಸಾಹ: ಮಹಿಳೆಯರ ಮತ್ತು ಪುರುಷರ ಫೈನಲ್ ಪಂದ್ಯಗಳನ್ನು ಕೇಂದ್ರ ಕ್ರೀಡಾ ಸಚಿವ ಅನುರಾಗ್ ಠಾಕೂರ್ ಮತ್ತು ರಾಜ್ಯದ ಯುವಸಬಲೀಕರಣ ಹಾಗೂ ಕ್ರೀಡಾ ಸಚಿವ ನಾರಾಯಣಗೌಡ ಅವರೊಂದಿಗೆ ಪ್ರೊ ಕಬಡ್ಡಿ ಸ್ಟಾರ್‌ಗಳಾದ ಪವನ್ ಶೆರಾವತ್, ನವೀನ್ ಕುಮಾರ್ (ಎಕ್ಸ್‌ಪ್ರೆಸ್) ಮತ್ತು ಅಜಯ್ ಠಾಕೂರ್ ವೀಕ್ಷಿಸಿದರು. ಮಹಿಳೆಯರ ಫೈನಲ್ ನಂತರ ಅಂಗಣದ ನಡುವಿಗೆ ಬರುತ್ತಿದ್ದಂತೆ ಪ್ರೇಕ್ಷಕರು ಖುಷಿಯಿಂದ ಸಂಭ್ರಮಿಸಿದರು.

ಎಂ.ಜಿ ವಿವಿಗೆ ಪ್ರಶಸ್ತಿ: ಜೈನ್ ವಿವಿ ಆವರಣದಲ್ಲಿ ನಡೆದ ಪುರುಷರ ಫುಟ್‌ಬಾಲ್ ಫೈನಲ್‌ನಲ್ಲಿ ಕೋಟಯಂನ ಮಹಾತ್ಮ ಗಾಂಧಿ ವಿವಿ ಕೇರಳ ವಿವಿಯನ್ನು 2–0ರಿಂದ ಮಣಿಸಿತು.

ಬ್ಯಾಸ್ಕೆಟ್‌ಬಾಲ್ ಆಟಗಾರ ರಾಮರ್ ನಿಧನ

ಬೆಂಗಳೂರು: ಭಾರತ ಬ್ಯಾಸ್ಕೆಟ್‌ಬಾಲ್ ತಂಡವನ್ನು ಪ್ರತಿನಿಧಿಸಿದ್ದ ಕರ್ನಾಟಕದ ಕ್ಯಾಪ್ಟನ್ ಪಿ.ರಾಮರ್ (75) ಸೋಮವಾರ ಅನಾರೋಗ್ಯದಿಂದ ನಿಧನರಾದರು. ಅವರಿಗೆ ಮಗ ಮತ್ತು ಮಗಳು ಇದ್ದಾರೆ.

ರಾಜ್ಯ ತಂಡದ ಕೋಚ್ ಆಗಿಯೂ ಕಾರ್ಯನಿರ್ವಹಿಸಿದ್ದ ಅವರು 1965ರಲ್ಲಿ ಆಗಿನ ಮೈಸೂರು ತಂಡದಲ್ಲಿ ಆಡಿದ್ದರು. ಅವರ ತರಬೇತಿಯಲ್ಲಿ ಕರ್ನಾಟಕ ತಂಡವು 1997ರಲ್ಲಿ ರಾಷ್ಟ್ರೀಯ ಚಾಂಪಿಯನ್‌ಷಿಪ್‌ನಲ್ಲಿ ಕಂಚಿನ ಪದಕ ಗೆದ್ದುಕೊಂಡಿತ್ತು.



ಪಿ.ರಾಮರ್

ಪ್ರಶ್ನೋತ್ತರ



ಪ್ರಮೋದ ಶ್ರೀಕಾಂತ ದೈತೋಟ

ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

ಹೆಸರು ಬೇಡ, ಬೆಂಗಳೂರು

- **ಪ್ರಶ್ನೆ:** ನಾನು ಎರಡು–ಮೂರು ವರ್ಷಗಳಿಂದ ಸಣ್ಣ ವ್ಯಾಪಾರ ನಡೆಸುತ್ತಿದ್ದೇನೆ. ಕೊರೊನಾ ಅವಧಿಯಲ್ಲಿ ನನ್ನ ವ್ಯವಹಾರದಲ್ಲಿ ನಷ್ಟ ಆಯಿತು. ಹೀಗಾಗಿ ನಾನು ಆದಾಯ ತೆರಿಗೆ ವಿವರ ಸಲ್ಲಿಸಲು ಮಹತ್ವ ನೀಡಲಿಲ್ಲ. ಇದರಿಂದ ಮುಂದೆ ನನಗೇನಾದರೂ ಆದಾಯ ತೆರಿಗೆ ಇಲಾಖೆಯಿಂದ ನೋಟಿಸ್ ಬರಬಹುದೇ? ಈಗ ನಾನು ಹಿಂದಿನ ವರ್ಷಗಳ ತೆರಿಗೆ ವಿವರ ಸಲ್ಲಿಸಲು ಅವಕಾಶವಿದೆಯೇ?

ಉತ್ತರ: ಕೊರೊನಾ ಅವಧಿಯು ಬಹುತೇಕ ಎಲ್ಲ ವ್ಯಾಪಾರ ವ್ಯವಹಾರಗಳನ್ನು ಬಾಧಿಸಿದೆ. ಇದರ ಪರಿಣಾಮ ಮನಗಂಡ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ತಮ್ಮ ಪರಿಧಿಯಲ್ಲಿ ಯಾವೆಲ್ಲ ರಿಯಾಯಿತಿಗಳನ್ನು ಜನಸಾಮಾನ್ಯರಿಗೆ ಹಾಗೂ ತೆರಿಗೆ ಪಾವತಿದಾರರಿಗೆ ನೀಡಲು ಸಾಧ್ಯವೋ ಅವೆಲ್ಲವನ್ನೂ ನೀಡಿವೆ. ಕೊರೊನಾ ಆವರಿಸಿದ ನಂತರದ ಎರಡು ವರ್ಷಗಳಲ್ಲಿ ತೆರಿಗೆ ವಿವರ ಸಲ್ಲಿಸಲು ಹೆಚ್ಚಿನ ಸಮಯಾವಕಾಶ ನೀಡಲಾಗಿತ್ತು. ಇಂತಹ ಅವಕಾಶಗಳನ್ನು ಉಪಯೋಗಿಸಿಕೊಳ್ಳದಿದ್ದರೆ ಪರಿಣಾಮ ದುಬಾರಿ ಆಗುತ್ತದೆ.

ಇದು ಅನೇಕ ಬಾರಿ ದಂಡ ಪಾವತಿಯಲ್ಲಿ ಕೊನೆಗೊಳ್ಳುತ್ತದೆ. ನೋಟಿಸ್ ಜಾರಿ ಮಾಡುವುದಕ್ಕೂ ಅವಕಾಶಗಳಿವೆ. ಯಾವುದೇ ವ್ಯಾಪಾರ, ವ್ಯವಹಾರ ನಡೆಸುವವರು ಸರಿಯಾದ ಸಮಯದಲ್ಲಿ ತೆರಿಗೆ ವಿವರ ಸಲ್ಲಿಸದಿದ್ದರೆ, ನಷ್ಟವಾದ ಸಂದರ್ಭದಲ್ಲಿ ಅಂತಹ ನಷ್ಟವನ್ನು ಮುಂದೆ ಗಳಿಸುವ ಲಾಭದೊಡನೆ ವಜಾಮಾಡುವ ಅವಕಾಶವನ್ನು ಕಳೆದುಕೊಳ್ಳುತ್ತಾರೆ. ಈ ಕಾರಣದಿಂದ ವ್ಯಾಪಾರ, ವ್ಯವಹಾರ ಮಾಡುವವರು ತೆರಿಗೆ ವಿಚಾರದಲ್ಲಿ ಜವಾಬ್ದಾರಿಯುತವಾಗಿರುವ ಅಗತ್ಯವಿದೆ. ಆಗುವ ನಷ್ಟವನ್ನು ತಡೆಯಲು ಸಾಧ್ಯವಿಲ್ಲದಿದ್ದರೂ ಸಮಯಕ್ಕೆ ಸರಿಯಾಗಿ ತೆರಿಗೆ ವಿವರ ಸಲ್ಲಿಸುವ ಮೂಲಕ ನಷ್ಟದಲ್ಲೂ ತುಸು ನಿರಾಳವಾಗಿರಬಹುದು, ಮುಂಬರುವ ವರ್ಷಗಳಲ್ಲಿ ನಷ್ಟವನ್ನು ವಜಾಮಾಡುವ ಸಾಧ್ಯತೆಯೂ ಇದೆ.

ನೀವು ಕಾಲಮಿತಿ ಕಳೆದಿರುವ ವಿವರಗಳನ್ನು ಸಲ್ಲಿಸಲು ಈಗ ಅವಕಾಶವಿಲ್ಲ. ಒಂದು ವೇಳೆ ಆದಾಯ ತೆರಿಗೆ ಇಲಾಖೆಯಿಂದ ನಿಮಗೆ ಯಾವುದೇ ನೋಟಿಸ್ ಬಂದಲ್ಲಿ ಅದಕ್ಕೆ ಕಾನೂನಿನ ಅನ್ವಯ ಪ್ರತ್ಯೇಕವಾಗಿ ಉತ್ತರಿಸಬೇಕಾಗುತ್ತದೆ ಹಾಗೂ ಆ ಸಂದರ್ಭದಲ್ಲಷ್ಟೇ ಯೋಚಿಸಿದರಾಯ್ತು. ಮುಂದಿನ ವರ್ಷಗಳಲ್ಲಿ ಜುಲೈ 31ರೊಳಗೆ ತೆರಿಗೆ ವಿವರ ಸಲ್ಲಿಸುವ ಬಗ್ಗೆ ಅಗತ್ಯ ಮಾಹಿತಿ ಸಂಗ್ರಹಿಸಿ. ಅದರ ಬಗ್ಗೆ ಪರಿಣತರ ಸಲಹೆಗಳನ್ನು ಪಡೆಯಿರಿ.

ಚಂದನ್ ಕುಮಾರ್

- **ಪ್ರಶ್ನೆ:** ನಾನು ರಾಜ್ಯ ಸರ್ಕಾರದ ನೌಕರ. ನನ್ನ ಒಟ್ಟು ವೇತನ ₹ 35,600. ಕಡಿತಗಳು: ಪಿ.ಟಿ. ₹ 200, ಇಜಿಐಎಸ್ ₹ 240, ಎಲ್‌ಐಸಿ ₹ 844, ಎನ್‌ಪಿಎಸ್ ₹ 3,063, ಕೆಜಿಐಡಿ ₹ 3,200, ಇತರ ₹ 110. ಒಟ್ಟು ₹ 7,657. ನಿವ್ವಳ ವೇತನ ₹ 27,338. ನನಗೆ ಉಳಿತಾಯ ಮಾಡಲು ಕೆಜಿಐಡಿ, ಪಿಎಲ್‌ಐ, ಆರ್‌.ಡಿ. ಅಥವಾ ಬೇರೆ ಯಾವ ಯೋಜನೆ ಉತ್ತಮ ಎಂದು ತಿಳಿಸಿ. ನಿಮ್ಮ ಸಲಹೆ ನಮಗೆ ತುಂಬಾ ಸಹಕಾರಿ.

ಉತ್ತರ: ನೀವು ಸರ್ಕಾರಿ ಸೇವೆಯಲ್ಲಿರುವುದರಿಂದ ಕೆಲವೆಲ್ಲ ಉಳಿತಾಯಗಳನ್ನು ಕಡ್ಡಾಯವಾಗಿ ಮಾಡಬೇಕಾಗಿರುತ್ತದೆ. ಇವನ್ನು ನಿಮ್ಮ ವೇತನ ಪಾವತಿಯ ಸಂದರ್ಭದಲ್ಲಿ ಕಡಿತಗೊಳಿಸಲಾಗುತ್ತದೆ. ಈ ವರ್ಗದಲ್ಲಿ ಕರ್ನಾಟಕ ಸರ್ಕಾರಿ ನೌಕರರ ವಿಮಾ ಯೋಜನೆ, ಜೀವ ವಿಮಾ ಯೋಜನೆ ಇತ್ಯಾದಿ ಹೂಡಿಕೆಗಳೂ ಸೇರಿವೆ. ಪ್ರಸ್ತುತ ನಿಮ್ಮ ವೇತನದ ಶೇಕಡ 20ರಷ್ಟು ಮೊತ್ತ ಮೊದಲ ಹಂತದಲ್ಲೇ ಉಳಿತಾಯಕ್ಕೆ ಹೋಗುತ್ತಿದೆ.

ಹೆಚ್ಚುವರಿ ಉಳಿತಾಯಕ್ಕೆ ಯೋಜನೆ ಮಾಡುವ ಮುನ್ನ ನಿಮ್ಮ ದೈನಂದಿನ ಖರ್ಚು, ಮಾಸಿಕ ಖರ್ಚು ಇತ್ಯಾದಿಗಳ ಬಗ್ಗೆ ಖಚಿತ ಮಾಹಿತಿ ಹೊಂದಿದವರಾಗಿ. ಕೆಲವೆಲ್ಲ ಹೂಡಿಕೆಗಳು ಮಧ್ಯಮಾವಧಿ - ದೀರ್ಘಾವಧಿಗೆ ಆಗಬೇಕಾಗಿರುವ ಕಾರಣ, ಯಾವುದೇ ಹಣಕಾಸು ಸಮಸ್ಯೆ ಇದ್ದಕ್ಕಿದ್ದಂತೆ ಎದುರಾದಾಗ ಹಣ ಹಿಂದಕ್ಕೆ ಪಡೆಯುವುದು ಕಷ್ಟ. ಹೀಗಾಗಿ ಆ ನಿಟ್ಟಿನಲ್ಲೂ ಒಂದಿಷ್ಟು ಯೋಜನೆ ಅಗತ್ಯ. ಇನ್ನೂ ಒಂದು ಹಂತ ಮುಂದುವರಿದು, ಯಾವುದೇ ಖರ್ಚು–ವೆಚ್ಚ ಮಾಡುವ ಮುನ್ನ ಅಗತ್ಯ, ಅನಗತ್ಯ ಹಾಗೂ ಐಷಾರಾಮಿ ವರ್ಗಗಳ ಅಡಿ ಅವುಗಳನ್ನು ವಿಂಗಡಿಸಿ. ನಿಮ್ಮ ಅಗತ್ಯಗಳನ್ನು ಮನನ ಮಾಡಿಕೊಳ್ಳಿ. ಈ ರೀತಿ ಉಳಿತಾಯ ಮಾಡಿದ ಮೊತ್ತವನ್ನೂ ಹೂಡಿಕೆಗೆ ಬಳಸಿ.

ಹೆಚ್ಚಿನ ಹೂಡಿಕೆ ಮಾಡುವ ಮುನ್ನ ಅದರಿಂದ ನೀವು ಯಾವ ನಿರೀಕ್ಷೆ ಹೊಂದಿದ್ದೀರಿ ಎಂಬುದನ್ನು ಅರ್ಥ ಮಾಡಿಕೊಳ್ಳಿ. ಉದಾಹರಣೆಗೆ, ಕೆಲವರು ತಮ್ಮ ಹೂಡಿಕೆಯ ಮೊತ್ತದ ಮೇಲೆ ಎದುರಾಗಬಹುದಾದ ಅಪಾಯಗಳನ್ನು ತಡೆಯುವ ಮನಸ್ಸು ಹೊಂದಿರುವುದಿಲ್ಲ. ಅಂತಹ ಸಂದರ್ಭದಲ್ಲಿ ವಾರ್ಷಿಕವಾಗಿ ಶೇ 5ರಿಂದ ಶೇ 8ರಷ್ಟು ಆದಾಯ ನೀಡುವ ನಿಖರು ಠೇವಣಿ, ಅಂಚೆ ಇಲಾಖೆಯ ಠೇವಣಿ, ಸರ್ಕಾರಿ ಬಾಂಡ್ ಇತ್ಯಾದಿಗಳಲ್ಲಷ್ಟೇ ಹೂಡಿಕೆ ಮಾಡಬಹುದು. ನೀವು ಈ ವರ್ಗದಲ್ಲಿದ್ದರೆ ಪ್ರಶ್ನೆಯಲ್ಲಿ ನೀವು ಉಲ್ಲೇಖಿಸಿದಂತೆ ಅಂಚೆ ಕಚೇರಿಯ ಅಂಚೆ ವಿಮಾ ಯೋಜನೆಯಲ್ಲಿ ಹಣ ಹೂಡಬಹುದು. ಅಂಚೆ ಕಚೇರಿಯ ಇತರ ಉಳಿತಾಯ ಯೋಜನೆಗಳಾದ ಪಬ್ಲಿಕ್ ಪ್ರಾವಿಡೆಂಟ್ ಫಂಡ್, ರೆಕರಿಂಗ್ ಡೆಪಾಸಿಟ್‌ಗಳಲ್ಲೂ ಹೂಡಿಕೆ ಮಾಡಬಹುದು. ಇಂದು ಅನೇಕ ಬ್ಯಾಂಕುಗಳು ಇದೇ ರೀತಿಯ ಹೂಡಿಕೆ ಉತ್ಪನ್ನಗಳನ್ನು ಗ್ರಾಹಕರಿಗೆ ನೀಡುತ್ತಿವೆ. ನಿಮ್ಮ ಅನುಕೂಲಕ್ಕೆ ತಕ್ಕಂತೆ ಅವುಗಳ ಪ್ರಯೋಜನ ಪಡೆಯಬಹುದು. ನೀವು ಇನ್ನಷ್ಟು ಮಾರುಕಟ್ಟೆ ಅಪಾಯಗಳನ್ನು ನಿಭಾಯಿಸುವ ಶಕ್ತಿ ಉಳ್ಳವರಾಗಿದ್ದರೆ ಹಾಗೂ ಆ ಬಗ್ಗೆ ಅರಿತು ಹೂಡಿಕೆ ಮಾಡುವ ಮನಸ್ಸು ಹೊಂದಿದ್ದರೆ ಕ್ರಮೇಣ ಮ್ಯೂಚುವಲ್ ಫಂಡ್ ಹಾಗೂ ಷೇರು ಮಾರುಕಟ್ಟೆಯಲ್ಲಿ ನಿಯಮಿತವಾಗಿ ಹೂಡಿಕೆ ಮಾಡಿ, ನಿಮ್ಮ ಬಂಡವಾಳವನ್ನು ವೃದ್ಧಿ ಮಾಡಿಕೊಳ್ಳಬಹುದು. ಆ ಬಗ್ಗೆ ನೈಪುಣ್ಯತೆ ಪಡೆಯುವುದು ಮುಖ್ಯ.

ಹಣಕಾಸು, ತೆರಿಗೆ ಸಮಸ್ಯೆಗೆ ಪರಿಹಾರ

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ. ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು–560001. ಇ–ಮೇಲ್: businessdesk@prajavani.co.in

ಖಾದ್ಯ ತೈಲ ಮುಂಬೈ



(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1660 (1690)
ಸೋಯಾ (ರಿಫೈನ್ಡ್)	₹1580 (1595)
ಸೂರ್ಯಕಾಂತಿ (ರಿಫೈನ್ಡ್)	₹1900 (1925)
ಪಾಮೋಲಿನ್	₹1550 (1590)

ರಾಮನಗರ ರೇಷ್ಮೆಗೂಡು ಧಾರಣೆ



ಮಿಶ್ರತಳಿ (ಸಿ.ಬಿ) ₹345-681

ದ್ವಿತಳಿ (ಬಿ.ವಿ) ₹289-805

ಎನ್.ಆರ್.ಪುರ ರಬ್ಬರ್



(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4 ₹166

ಆರ್‌ಎಸ್‌ಎಸ್-5 ₹160

ಗುಡ್ ಲಾಟ್ ₹156

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು

100 ಮೊಟ್ಟೆಗೆ ₹390

12 ಮೊಟ್ಟೆಗೆ ₹55

ಮೈಸೂರು

100 ಮೊಟ್ಟೆಗೆ ₹394

ಎಲ್‌ಐಸಿ: ₹ 5 ಸಾವಿರ ಕೋಟಿ ಹೂಡಿಕೆ

ನವದೆಹಲಿ (ಪಿಟಿಐ): ಭಾರತೀಯ ಜೀವ ವಿಮಾ ನಿಗಮವು (ಎಲ್‌ಐಸಿ) ಆರಂಭಿಕ ಹೂಡಿಕೆದಾರರಿಂದ ₹ 5,627 ಕೋಟಿ ಬಂಡವಾಳ ಸಂಗ್ರಹಿಸಿರುವುದಾಗಿ ಮಂಗಳವಾರ ತಿಳಿಸಿದೆ. ಎಲ್‌ಐಸಿಯ ಆರಂಭಿಕ ಸಾರ್ವಜನಿಕ ಕೊಡುಗೆಯ (ಐಪಿಒ) ಮುನ್ನ ಈ ಹೂಡಿಕೆ ಆಗಿದೆ.

ಆರಂಭಿಕ ಹೂಡಿಕೆದಾರರಿಗೆ 5.92 ಕೋಟಿ ಷೇರುಗಳನ್ನು ಮೀಸಲಿಡಲಾಗಿತ್ತು. ಇಷ್ಟು ಷೇರುಗಳ ಪೈಕಿ 4.2 ಕೋಟಿ ಷೇರುಗಳನ್ನು 15 ದೇಶಿ ಮ್ಯೂಚುವಲ್ ಫಂಡ್ ಕಂಪನಿಗಳಿಗೆ ಹಂಚಿಕೆ ಮಾಡಲಾಗಿದೆ. ಒಟ್ಟು 99 ಮ್ಯೂಚುವಲ್ ಫಂಡ್ ಯೋಜನೆಗಳು ಎಲ್‌ಐಸಿಯಲ್ಲಿ ಹೂಡಿಕೆ ಮಾಡಲಿವೆ ಎಂದು ಎಲ್‌ಐಸಿ ತಿಳಿಸಿದೆ.

ಐಸಿಐಸಿಐ ಪ್ರುಡೆನ್ಷಿಯಲ್ ಲೈಫ್ ಇನ್ಶುರೆನ್ಸ್, ಎಸ್‌ಬಿಐ ಲೈಫ್ ಇನ್ಶುರೆನ್ಸ್, ಕೋಟಕ್ ಮಹೀಂದ್ರ ಲೈಫ್ ಇನ್ಶುರೆನ್ಸ್ ಸೇರಿದಂತೆ ಕೆಲವು ದೇಶಿ ವಿಮಾ ಕಂಪನಿಗಳು ಹಾಗೂ ಪಿಂಚಣಿ ನಿಧಿಗಳು ಕೂಡ ಎಲ್‌ಐಸಿಯಲ್ಲಿ ಹೂಡಿಕೆ ಮಾಡಿವೆ. ಸಿಂಗಪುರ ಸರ್ಕಾರ, ಸಿಂಗಪುರ ಹಣಕಾಸು ಪ್ರಾಧಿಕಾರ ಕೂಡ ಎಲ್‌ಐಸಿಯಲ್ಲಿ ಹೂಡಿಕೆ ಮಾಡಿವೆ.

ಸಣ್ಣ ಹೂಡಿಕೆದಾರರಿಗೆ ಇಂದಿನಿಂದ ಮುಕ್ತ

ಬೆಂಗಳೂರು: ಎಲ್‌ಐಸಿ ಷೇರುಗಳಿಗೆ ಸಣ್ಣ ಹೂಡಿಕೆದಾರರು ಬುಧವಾರದಿಂದ ಬಿಡ್ ಸಲ್ಲಿಸಲು ಅವಕಾಶ ಇರಲಿದೆ.

ಷೇರು ದರದಲ್ಲಿ ಸಣ್ಣ ಹೂಡಿಕೆದಾರರಿಗೆ ಮತ್ತು ಎಲ್‌ಐಸಿ ನೌಕರರಿಗೆ ಪ್ರತಿ ಷೇರಿಗೆ ₹ 45ರಷ್ಟು ಹಾಗೂ ಎಲ್‌ಐಸಿ ಪಾಲಿಸಿ ಹೊಂದಿರುವವರಿಗೆ ಪ್ರತಿ ಷೇರಿಗೆ ₹ 60ರಷ್ಟು ರಿಯಾಯಿತಿ ಇರಲಿದೆ. ಷೇರು ಬೆಲೆಯನ್ನು ₹ 902–949ಕ್ಕೆ ನಿಗದಿ ಮಾಡಲಾಗಿದೆ.

ಕನಿಷ್ಠ 15 ಷೇರುಗಳಿಗೆ ಬಿಡ್ ಸಲ್ಲಿಸಬೇಕಾಗುತ್ತದೆ. ಮೇ 9ರವರೆಗೆ ಬಿಡ್ ಸಲ್ಲಿಸಲು ಅವಕಾಶ ಇರಲಿದೆ. ಮೇ 12ರಂದು ಷೇರುಗಳ ಹಂಚಿಕೆ ಆಗುವ ಸಾಧ್ಯತೆ ಇದೆ. ಮೇ 17ರಂದು ಎಲ್‌ಐಸಿ ಷೇರುಗಳು ಮಾರುಕಟ್ಟೆಯನ್ನು ಪ್ರವೇಶಿಸುವ ನಿರೀಕ್ಷೆ ಇದೆ.

ಜೀರಿಗೆ ದುಬಾರಿ ಸಾಧ್ಯತೆ

ಮುಂಬೈ (ಪಿಟಿಐ): ಜೀರಿಗೆ ಬೆಲೆಯು ಪ್ರಸಕ್ತ ಹಂಗಾಮಿನಲ್ಲಿ ಶೇಕಡ 30ರಿಂದ ಶೇ 35ರಷ್ಟು ಏರಿಕೆ ಆಗುವ ಸಾಧ್ಯತೆ ಇದೆ ಎಂದು ಕ್ರಿಸಿಲ್ ಸಂಸ್ಥೆಯ ವರದಿಯೊಂದು ಹೇಳಿದೆ. ಉತ್ಪಾದನೆ ಕಡಿಮೆ ಆಗಿರುವುದು, ಅತಿವೃಷ್ಟಿಯಿಂದ ಬೆಳೆಗೆ ಹಾನಿ ಆಗಿರುವುದು ಬೆಲೆ ಹೆಚ್ಚಳಕ್ಕೆ ಕಾರಣವಾಗಲಿವೆ ಎಂದು ವರದಿಯು ಹೇಳಿದೆ. ಜೀರಿಗೆ ಬೆಲೆಯು ಕೆ.ಜಿ.ಗೆ 5 ವರ್ಷಗಳ ಗರಿಷ್ಠ ಮಟ್ಟ ₹ 170 ತಲುಪುವ ಸಾಧ್ಯತೆ ಇದೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ

ಸಕಲೇಶಪುರ

ಕೂಳೆ	430- 450
ನಡುಗೋಲು	500-550
ರಾಶಿ	600-650
ರಾಶಿ ಉತ್ತಮ	650-700
ಜರಡಿ	750 - 800
ಹೆರಕಿದ್ದು	1,100-1,150
ಹಸಿರು ಸಾಧಾರಣ	600-700
ಹಸಿರು ಉತ್ತಮ	900-950
ಹಸಿರು ಅತಿ ಉತ್ತಮ	1,200-1,250

ಕಾಳು ಮೆಣಸು - 500

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	15,900	15,750	15850	115.90 ಸೆಂಟ್ಸ್
ಎಸಿ	8,900	8,400	8,475	
ಆರ್‌ಪಿ	9,600	9,650	9,850	ಲಂಡನ್
ಆರ್‌ಸಿ	4,500	4,100	4,350	2089 ಡಾಲರ್ಸ್

ಮುಂಬೈ ಧಾರಣೆ

ಶೇಂಗಾ

3-5-2022

ಜಾವಾ 70/80(ಹೊಸ)	10400-10450
ಜಾವಾ 80/90(ಹೊಸ)	9700-9750
ದಪ್ಪ ಮಧ್ಯಪ್ರದೇಶ(ಹೊಸ)	11150-11200
ದಪ್ಪ ಗುಜರಾತ್(ಹೊಸ)	10150-10200

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1670 (1700)
ಒಂದು ವಾರದ ಡೆಲಿವರಿ	1665 (1695)
ಸೋಯಾ ಕಚ್ಚಾ	1560 (1602)
ಪಾಮ್ ವಾರದ ಡೆಲಿವರಿ	1548 (1588)
ಸೂರ್ಯಕಾಂತಿ ಎಣ್ಣೆ ಕಚ್ಚಾ	1830 (1850)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ 51,000 (50,800)

ಬೆಳ್ಳಿ ಕೆ.ಜಿ 63,000 (62,800)

ಆವರಣದಲ್ಲಿ ಹಿಂದಿನ ದಿನದ ಧಾರಣೆ